ಜನಶಕ್ತಿ


ಕನ್ನಡ ವಾರಪತ್ರಿಕೆ

Blog: janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 27

ಜುಲೈ 07, 2013 ಪುಟ 16 ರೂ. 10/-






ಉತ್ತರಖಂಡ : ಬೇಕು ಸುರಕ್ಷಣಾ ನಿಯಂತ್ರಣ ವ್ಯವಸ್ಥೆ

ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ

ಸಿದ್ದು ಸರ್ಕಾರದ ಬಣ್ಣ ಬಯಲು





ಮಣಿಪಾಲ ಅತ್ಯಾಚಾರ ಪ್ರಕರಣ ತನಿಖೆ ಆಳಕ್ಕೆ ಇಳಿಯಲಿ

ಶಾಲಾ ಶಿಕ್ಷಣದಲ್ಲಿ ಗುತ್ತಿಗೆ-ಹೊರಗುತ್ತಿಗೆ ರಂಗೋಲಿ ಕೆಳಗೆ ತೂರಿರುವ ಶೋಷಣೆ



ಬಳ್ಳಾರಿ ಅಕ್ರಮ ಗಣಿ ಹಗರಣ :



1 ಲಕ್ಷ ಕೋಟಿಗೂ ಮೀರಿದ ಮಹಾಲೂಟಿಯ ಒಳ ಸುಳಿ ಹೊರಗೆ ಅದಿರು ನುಂಗಿದ ಮೋದಿ ವರ್ತಕರು





ಪಂಚಾಯತ್ ನೌಕರರ ವಿಧಾನಸೌಧ ಚಲೋ



ಚೆ ಮತ್ತು ಮನುಕುಲದ ಸಂಕಟಗಳು


ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆ : ಸಿದ್ದು ಸರ್ಕಾರದ ಬಣ್ಣಬಯಲು

ನಿತ್ಯಾನಂದಸ್ವಾಮಿ

ಬಹು ಬ್ರಾಂಡ್ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಗೆ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಒಪ್ಪಿಗೆ ನೀಡಿದೆ. ಇದರೊಂದಿಗೆ ಸಿದ್ದರಾಮಯ್ಯ ಸರ್ಕಾರದ ಜನಪರ ಮುಖವಾಡ ಕಳಚಿ ಬಿದ್ದಿದೆ. ಪತ್ರಿಕೆಯ ಆತಂಕ ನಿಜವಾಗಿದೆ.

ಕೇಂದ್ರ ಯೋಜನಾ ಆಯೋಗದ ಸಭೆಯಲ್ಲಿ ಭಾಗವಹಿಸಲು ನವದೆಹಲಿಗೆ ತೆರಳಿದ್ದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಜೂನ್ 25 ರಂದು ಕೇಂದ್ರ ಹಣಕಾಸು ಮಂತ್ರಿ ಚಿದಂಬರಂ ಅವರನ್ನು ಭೇಟಿ ಮಾಡಿ, ಮಾತುಕತೆ ನಡೆಸಿದ ಬಳಿಕ ಈ ತೀರ್ಮಾನಕ್ಕೆ ಬರಲಾಯಿತು ಎಂದು ಹೇಳಲಾಗಿದೆ. ಬಹು ಬ್ರಾಂಡ್ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆಗೆ ಅವಕಾಶ ಕಲ್ಪಿಸಲು ಕೇಂದ್ರ ಕಾಂಗ್ರೆಸ್ ಸರ್ಕಾರ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ತೀರ್ಮಾನ ಕೈಗೊಂಡಿತ್ತು. ಆದರೆ ಅದರ ಜಾರಿಯ ಆಯ್ಕೆಯನ್ನು ರಾಜ್ಯ ಸರ್ಕಾರಗಳಿಗೆ ಬಿಟ್ಟು ಕೊಡಲಾಗಿತ್ತು. ಆಂಧ್ರ ಪ್ರದೇಶ, ಆಸ್ಸಾಂ, ದೆಹಲಿ, ಹರಿಯಾಣ, ಜಮ್ಮು ಕಾಶ್ಮೀರ, ಮಹಾರಾಷ್ಟ್ರ, ಮಣಿಪುರ, ರಾಜಾಸ್ಥಾನ, ಉತ್ತರಾಖಂಡ್, ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ದಿಯು–ದಾಮನ್ ಮತ್ತು ದಾದ್ರಾ–ನಗರ್ ಹವೇಲಿಯಲ್ಲಿ ಕೇಂದ್ರ ಸರ್ಕಾರದ ತೀರ್ಮಾನ ಈಗಾಗಲೇ ಜಾ–ರಿಯಾಗಿದೆ. ಈ ರಾಜ್ಯಗಳ ಸಾಲಿಗೆ ಈಗ ಕರ್ನಾಟಕವೂ ಸೇರ್ಪಡೆಯಾಗಿದೆ.

ಈ ವರೆಗೆ ವಿದೇಶಿ ಕಂಪನಿಗಳು ತಮ್ಮ ಮಳಿಗೆ ತೆರೆದು ಮಾರಾಟ ಮಾಡಬಹುದಾಗಿತ್ತು. ಆದರೆ ಬಹುಬ್ರಾಂಡ್ ಚಿಲ್ಲರೆ ವ್ಯಾಪಾರಕ್ಕೆ ಅವಕಾಶವಿರಲಿಲ್ಲ. ಈಗ ಸರ್ಕಾರದ ಈ ನಿರ್ಧಾರದಿಂದಾಗಿ ಹೇರ್‌ಪಿನ್‌ನಿಂದ ಮೊಬೈಲ್‌ವರೆಗೆ ಎಲ್ಲಾ ಉತ್ಪನ್ನಗಳನ್ನು ಒಂದೇ ಮಳಿಗೆಯಲ್ಲಿ ಮಾರಾಟ ಮಾಡಲು ಅವಕಾಶ ಸಿಗುತ್ತದೆ. ವಾಲ್ ಮಾರ್ಟ್‌ನಂತಹ ದೈತ್ಯ ಕಂಪನಿಗಳು ಸರಣಿ ಮಳಿಗೆಗಳನ್ನು ತೆರೆಯಬಹುದಾಗಿದೆ.



ಕಳೆದ ಒಂದು ದಶಕದಿಂದಲೂ ದೇಶದಲ್ಲಿ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆಯ ಸಾಧಕ ಬಾಧಕಗಳ ಬಗ್ಗೆ ವ್ಯಾಪಕವಾದ ಚರ್ಚೆ ನಡೆಯುತ್ತಾ ಬಂದಿದೆ. ದೇಶದ 4 ಕೋಟಿಗೂ ಹೆಚ್ಚು ಚಿಲ್ಲರೆ ವ್ಯಾಪಾರಸ್ಥರು ತಮ್ಮ ಏಕೈಕ ಜೀವನಾಧಾರವನ್ನು ಕಳೆದುಕೊಂಡು ಬೀದಿಪಾಲಾಗುವರು ಎಂದು ತಜ್ಞರು ದೇಶಬಾಂಧವರನ್ನು ಎಚ್ಚರಿಸಿದ್ದಾರೆ. ಉದ್ಯೋಗ ಸೃಷ್ಟಿಗೆ ಹೇರಳ ಅವಕಾಶ ದೊರೆಯಲಿದೆ ಎಂಬುದು ಒಂದು ದೊಡ್ಡ ಸುಳ್ಳು ಎಂದು ಅಂಕಿ ಅಂಶಗಳ ಆಧಾರದಲ್ಲಿ ವಿಶ್ಲೇಷಿಸಿದ್ದಾರೆ.

ರಾಜ್ಯದಲ್ಲಿ ಸುಮಾರು 2.5 ಲಕ್ಷ ಚಿಲ್ಲರೆ ವ್ಯಾಪಾರಸ್ಥರಿದ್ದಾರೆ. ಬೆಂಗಳೂರು ಮಹಾನಗರ ಒಂದರಲ್ಲೇ 1.5 ಲಕ್ಷ ಇದ್ದಾರೆ. ಇವರನ್ನು ಅವಲಂಭಿಸಿರುವ ಉದ್ಯೋಗಿಗಳ ಸಂಖ್ಯೆ ಸುಮಾರು 15 ಲಕ್ಷ ದಾಟುತ್ತದೆ. ವಿದೇಶಿ ನೇರ ಹೂಡಿಕೆಯಿಂದ 3 ವರ್ಷಗಳ ಅವಧಿಯಲ್ಲಿ ಕೇವಲ 1 ಕೋಟಿ ಉದ್ಯೋಗಗಳು ಸೃಷ್ಟಿಯಾಗುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತದೆ. ರಾಜ್ಯದಲ್ಲಿ ವಿದೇಶಿ ನೇರ ಹೂಡಿಕೆ ಬಂದರೆ 5 ಲಕ್ಷಕ್ಕಿಂತ ಹೆಚ್ಚಿನ ಉದ್ಯೋಗಗಳೇನು ಸೃಷ್ಟಿಯಾಗಲಾರವು. 15 ರಿಂದ 20 ಲಕ್ಷ ಜನ ತಮ್ಮ ಉದ್ಯೋಗವನ್ನು ಕಳೆದುಕೊಂಡು ಕೇವಲ 5 ಲಕ್ಷ ಜನಗಳಿಗೆ ಉದ್ಯೋಗ ಸಿಗುವುದಾದರೆ ಏನು ಪ್ರಯೋಜನ?

ಬಹುರಾಷ್ಟ್ರೀಯ ಕಂಪನಿಗಳು ಲಾಭ ಮಾಡಲೆಂದೇ ಬರುತ್ತಿರುವುದರಿಂದ ದೇಶಕ್ಕೆ ಅನುಕೂಲವಾಗುತ್ತದೆ ಎನ್ನುವುದು ತಪ್ಪು ಕಲ್ಪನೆ. ಈ ದೈತ್ಯ ಕಂಪೆನಿಗಳ ಜತೆ ಸ್ಪರ್ಧಿಸಲಾಗದೆ ಸ್ಥಳೀಯ ಚಿಲ್ಲರೆ ವ್ಯಾಪಾರಿಗಳು ಬೀದಿಗೆ ಬೀಳುತ್ತಾರೆ. ಮೊದಮೊದಲು ಈ ಕಂಪನಿಗಳು ಗ್ರಾಹಕರಿಗೆ ಸರಕುಗಳನ್ನು ಅಗ್ಗದ ಬೆಲೆಗೆ ಮಾರಿದರೂ, ಕ್ರಮೇಣ ಮಾರುಕಟ್ಟೆಯ ಮೇಲೆ ನಿಯಂತ್ರಣ ಸಾಧಿಸಿದ ಬಳಿಕ ತಮ್ಮ ಲಾಭಕೋರ ಅಸಲಿ ರೂಪ ತೋರಿಸುತ್ತವೆ.

ರೈತರಿಗೆ ನೇರ ಮಾರುಕಟ್ಟೆ ಲಭ್ಯವಾಗುತ್ತದೆ. ಮಧ್ಯವರ್ತಿಗಳ ಶೋಷಣೆ ತಪ್ಪುತ್ತದೆ. ಕೃಷಿ ಉತ್ಪನ್ನಗಳನ್ನು ಬಹುಕಾಲ ಕೆಡದಂತೆ ಇಡಲು ಅತ್ಯಾಧುನಿಕ ಶೀತಲೀಕರಣ ಕೇಂದ್ರಗಳ ಸ್ಥಾಪನೆಗೆ ಅನುಕೂಲವಾಗುತ್ತದೆ. ರೈತರ ಬೆಳೆಗಳಿಗೆ ಹೆಚ್ಚಿನ ಬೆಲೆ ದೊರೆಯುತ್ತದೆ ಎನ್ನಲಾಗುತ್ತದೆ. ಇದು ದೇಶದ ಕೃಷಿ ಕ್ಷೇತ್ರವನ್ನೇ ಕಬಳಿಸಲು ಹೊಂಚುಹಾಕುತ್ತಿರುವ ಕಂಪನಿಗಳ ಇನ್ನೊಂದು ಮೋಸದ ಜಾಲ.

ಇಂದಿನ ಕೃಷಿ ಮಾರುಕಟ್ಟೆಗಳಲ್ಲಿ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟಲು ಸುಧಾರಣೆಗಳ ಅಗತ್ಯವಿದೆ. ಆದರೆ ಕೃಷಿ ಮಾರುಕಟ್ಟೆಗೆ ಬಹುರಾಷ್ಟ್ರೀಯ ಕಂಪನಿಗಳ ಪ್ರವೇಶದಿಂದ ರೈತರು ಇನ್ನು ಹೆಚ್ಚಿನ ಅಪಾಯಕ್ಕೆ ಒಳಗಾಗುವುದಂತೂ ಶತಸಿದ್ಧ. ಈಗ ವರ್ತಕರ ನಡುವೆ ಇರುವ ಸ್ಪರ್ಧೆಯಿಂದಾಗಿ ರೈತರಿಗೆ ಒಳ್ಳೆಯ ಬೆಲೆ ಸಿಗುವ ಸಾಧ್ಯತೆ ಇದೆ. ಬಹುರಾಷ್ಟ್ರೀಯ ಕಂಪನಿಯ ಆಗಮನವಾದರೆ, ಕೊಳ್ಳುವವನು ಅವನೊಬ್ಬನೇ! ರೈತರು ಆ ಕಂಪನಿಯೊಂದನ್ನೇ ಅವಲಂಭಿಸ ಬೇಕಾಗುವುದು. ಸಣ್ಣ ಹಾಗೂ ಮಧ್ಯಮ ರೈತರಿರುವ ಹೊರ ದೇಶಗಳಲ್ಲಿ ಈ ಪರಿಸ್ಥಿತಿ ಈಗಾಗಲೇ ನಿರ್ಮಾಣವಾಗಿದೆ.

ಭಾರತದಲ್ಲಿ ಸಣ್ಣ ಮತ್ತು ಅಂಚಿನ ರೈತ–ರೇ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅನೇಕ ಸಮಸ್ಯೆಗಳಲ್ಲಿ ಸಿಲುಕಿರುವ ಅವರಿಗೆ ಬೇಕಾಗಿರುವುದು ಪ್ರಭುತ್ವದ ಬೆಂಬಲ. ಸರ್ಕಾರದ ಮಧ್ಯ ಪ್ರವೇಶದಿಂದ ಮಾತ್ರ ದೇಶದ ಕೃಷಿಯನ್ನು ಮತ್ತು ಕೃಷಿಕರನ್ನು ಉಳಿಸಲು ಸಾಧ್ಯ. ಆದ್ದರಿಂದ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಆದೇಶಕ್ಕೆ ಮಣಿದು ರಾಜ್ಯದಲ್ಲಿ ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆಗೆ ಅವಕಾಶ ಮಾಡಿಕೊಡಲು ಹೊರಟಿರುವುದನ್ನು ರಾಜ್ಯದ ಸಣ್ಣ ಉದ್ದಿಮೆದಾರರು, ವ್ಯಾಪಾರಸ್ಥರು, ರೈತ ಸಂಘಗಳು ಜಂಟಿಯಾಗಿ ಹಾಗೂ ಬಲವಾಗಿ ವಿರೋಧಿಸಲು ಮುಂದಾಗಬೇಕಾಗಿದೆ.

ಪಶ್ಚಿಮ ಬಂಗಾಳ : ಪಂಚಾಯತ್ ಚುನಾವಣೆ ಮುಂದೂಡಿಕೆ

ಪಶ್ಚಿಮ ಬಂಗಾಳದಲ್ಲಿ ಪಂಚಾಯತ್ ಚುನಾವಣೆಗಳು ಜುಲೈ 2 ಹಾಗೂ 6 ಮತ್ತು 9, 2013 ರಂದು ಮೂರು ಹಂತಗಳಲ್ಲಿ ನಡೆಯಬೇಕಿತ್ತು. ಆದರೆ ರಾಜ್ಯ ಚುನಾವಣಾ ಆಯೋಗದೊಂದಿಗೆ ಸಂಘರ್ಷಕ್ಕೆ ಮುಂದಾಗಿರುವ ಮಮತಾ ಸರ್ಕಾರದ ಧೋರಣೆಯಿಂದ ಮತ್ತು ರಾಜಕೀಯ ವಿರೋಧಿಗಳನ್ನು ದೈಹಿಕ ಬಲದಿಂದ ಹತ್ತಿಕ್ಕುವ ತೃಣಮೂಲ ಕಾಂಗ್ರೆಸ್‌ನ ಗೂಂಡಾ ರಾಜಕೀಯದಿಂದಾಗಿ ಚುನಾವಣಾ ಪ್ರಕಿಯೆಯೇ ಗಂಭೀರ ಹಾನಿಗೊಳಗಾಗಿದೆ.

ಅಸಹಕಾರ

'2,41,000 ಭದ್ರತಾ ಸಿಬ್ಬಂದಿಯನ್ನು ಕೇಳಿರುವ ಕಡೆ ರಾಜ್ಯ ಸರ್ಕಾರ ಕೇವಲ 55,000 ಸಿಬ್ಬಂದಿಯನ್ನು ಮಾತ್ರ ಒದಗಿಸಿದೆ. ಸಂವಿಧಾನ ಬದ್ದವಾದ ಚುನಾವಣಾ ಆಯೋಗಕ್ಕೆ ಚುನಾವಣಾ ಪ್ರಕ್ರಿಯೆ ನಡೆಸಲು ಮಮತಾ ಸರ್ಕಾರ ಸಹಕರಿಸುತ್ತಿಲ್ಲ. ಇದ–ರಿಂದ ಚುನಾವಣೆಯನ್ನೇ ಮುಂದೂಡ ಬೇಕಾಗಬಹುದು' ಎಂದು ಸುಪ್ರಿಂ ಕೋರ್ಟ್‌ಗೆ ಮನವಿ ಒಯ್ದು ಚುನಾವಣಾ ಆಯೋಗ ಅಲ್ಲಿ ತನ್ನ ಆತಂಕ ತೋಡಿ–ಕೊಂಡಿತು. ಸುಮಾರು 6,000 ಸ್ಥಾನಗಳಿಗೆ ಅಂದರೆ ಒಟ್ಟು ಸ್ಥಾನಗಳ ಸು. ಶೇ.10 ರಷ್ಟು ಸ್ಥಾನಗಳಲ್ಲಿ ಸ್ಪರ್ಧೆಯೇ ಇಲ್ಲ. (ಅಂದರೆ ಒಬ್ಬರು ಮಾತ್ರವೇ ನಾಮಪತ್ರ ಸಲ್ಲಿಸಿರುವ ಪರಿಸ್ಥಿತಿ) ಇದೊಂದು ಗಂಭೀರ ವಿಷಯ ಎಂದೂ ಅಯೋಗ ಹೇಳಿತು.

ಈ ಸಂಬಂಧದ ಮನವಿಯ ವಿಚಾರಣೆ ನಡೆಸುತ್ತಾ ಜೂನ್ 27 ರಂದು ಸುಪ್ರಿಂ ಕೋರ್ಟ್ 'ನಿಮಗೆ ಚುನಾವಣೆ ನಡೆಸುವುದು ಬೇಕಿದೆಯೋ ಬೇಡವೋ' ಎಂದು ಖಾರವಾಗಿ ಮಮತಾ ಸರ್ಕಾರದ ಪ್ರತಿನಿಧಿಯನ್ನು ಪ್ರಶ್ನಿಸಿದೆ. 'ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂದು ನಮಗೆ ಗೊತ್ತಿದೆ' ಎಂದೂ ಸುಪ್ರಿಂ ಕೋರ್ಟ್ ಸರ್ಕಾರದ ಪ್ರತಿನಿಧಿಗೆ ಹೇಳಿದೆ. ರಾಜ್ಯ ಚುನಾವಣಾ ಆಯೋಗಕ್ಕೆ 'ಚುನಾವಣೆಗಳು ಸರಾಗವಾಗಿ ನಡೆಯುತ್ತವೆ' ಎಂದು ಸುಪ್ರಿಂ ಕೋರ್ಟ್ ಅಭಯ ನೀಡಿತು. ಇದಲ್ಲದೇ ಪ.ಬಂ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿ ಹಾಗೂ ಕೇಂದ್ರ ಸರ್ಕಾರಕ್ಕೆ ಸುಪ್ರಿಂ ಕೋರ್ಟ್ ಎರಡು ದಿನದಲ್ಲಿ ಉತ್ತರಿಸುವಂತೆ ನೋಟೀಸ್ ನೀಡಿತು. ಅಂತಿಮವಾಗಿ ಸುಪ್ರಿಂ ಕೋರ್ಟ್ ಚುನಾವಣೆಗಳನ್ನು ಮುಂದೂಡಿ ಐದು ಹಂತಗಳಲ್ಲಿ ಅಂದರೆ ಜುಲೈ 11, 15, 19, 22 ಮತ್ತು 25 ರಂದು ನಡೆಸವಂತೆ ಆದೇಶಿಸಿದೆ.

ರಾಜ್ಯದ ಎಷ್ಟೋ ಕಡೆಗಳಲ್ಲಿ ವಿರೋಧಿ ಅಭ್ಯರ್ಥಿಗಳಿಗೆ ನಾಮಪತ್ರವನ್ನೇ ಸಲ್ಲಿಸಲು ತೃಣಮೂಲ ಕಾಂಗ್ರೆಸ್ ಗೂಂಡಾಗಳು ಬಿಟ್ಟಿಲ್ಲ. ಕಾಂಗ್ರೆಸ್ ಅಭ್ಯರ್ಥಿಗಳಿಗೆ ಸಹ ಹಲವಾರು ಕಡೆ ಇಂತಹ ಪರಿಸ್ಥಿತಿ ಬಂದೊದಗಿದೆ. ಸಿಪಿಐ(ಎಂ) ಮತ್ತು ಎಡರಂಗ ಮುಖಂಡರು, ಕಾರ್ಯಕರ್ತರ ಪ್ರಾಣವನ್ನು ತೆಗೆಯಲಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಎಷ್ಟು ನ್ಯಾಯಸಮ್ಮತ ಚುನಾವಣೆ ಸಾಧ್ಯವಾಗುತ್ತದೆ ಎಂದು ನೋಡಬೇಕಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಪ್ರಸ್ತುತಕ್ಕೆ

ಮಣಿಪಾಲ ಗ್ಯಾಂಗ್ ರೇಪ್ ಪ್ರಕರಣ : ತನಿಖೆ ಆಳಕ್ಕೆ ಇಳಿಯಲಿ

ಮಣಿಪಾಲ ವಿಶ್ವ ವಿದ್ಯಾಲಯ ಕ್ಯಾಂಪಸ್‌ನಿಂದ ವೈದ್ಯಕೀಯ ವಿದ್ಯಾರ್ಥಿನಿಯನ್ನು ಅಪಹರಿಸಿ ಪೈಶಾಚಿಕವಾಗಿ ಸಾಮೂಹಿಕ ಅತ್ಯಾಚಾರವೆಸಗಿದ ಮೂವರು ದುಷ್ಕರ್ಮಿಗಳು ಕೊನೆಗೂ ಬಲೆಗೆ ಬಿದ್ದಿದ್ದಾರೆ. ಕಳೆದ ಒಂದು ವಾರದಿಂದ ಬೀದಿಗಿಳಿದು ಪ್ರತಿಭಟಿಸುತ್ತಿದ್ದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಜನ ಸ್ವಲ್ಪ ಮಟ್ಟಿಗಾದರೂ ನಿಟ್ಟುಸಿರು ಬಿಡುವಂತಾಗಿದೆ. ತೀವ್ರ ಆತಂಕಕ್ಕೆ ಒಳಗಾಗಿದ್ದ ವಿದ್ಯಾರ್ಥಿ ಸಮುದಾಯಕ್ಕೆ ಕೊಂಚ ಸಮಾಧಾನವಾಗಿದೆ.

ದುಷ್ಕೃತ್ಯ ಎಸಗಿದ್ದ ಹಿರಿಯಡ್ಕ ಸಮೀಪದ ಓಂತಿಬೆಟ್ಟು ಗ್ರಾಮದ ಯೋಗೀಶ್, ಪರ್ಕಳ ಸಮೀಪ ಬಡಗುಬೆಟ್ಟು ಗ್ರಾಮದ ಹರಿಪ್ರಸಾದ್ ಮತ್ತು ಅದೇ ಊರಿನ ಆನಂದ ಅವರನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಮೂವರೂ ಆಟೋರಿಕ್ಷಾ ಚಾಲಕರು. ಕೃತ್ಯಕ್ಕೆ ಬಳಸಿದ್ದ ಆಟೋರಿಕ್ಷಾವನ್ನೂ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಮೂವರೂ ಅಪರಾಧಿ ಹಿನ್ನೆಲೆಯುಳ್ಳವರು. ಇವರಲ್ಲಿ ಯೋಗೀಶ್ ಬಜರಂಗದಳದ ಕಾರ್ಯಕರ್ತನಾಗಿದ್ದು ಈತನ ಹೆಸರು ಮಣಿಪಾಲ ಪೊಲೀಸ್ ಠಾಣೆಯ ರೌಡಿ ಪಟ್ಟಿಯಲ್ಲಿದೆ. ಹಲವಾರು ದೊಂಬಿ ಪ್ರಕರಣಗಳಲ್ಲಿ ಈತ ಆರೋಪಿಯಾಗಿದ್ದು ನೈತಿಕ ಪೊಲೀಸ್‌ಗಿರಿಯ ಆರೋಪವೂ ಈತನ ಮೇಲಿದೆ.

ಇಷ್ಟೊಂದು ಕ್ರಿಮಿನಲ್ ಹಿನ್ನೆಲೆಯುಳ್ಳ ಈ ದುಷ್ಕರ್ಮಿಗಳು ಎಸಗಿದ ದುಷ್ಕೃತ್ಯ ಪೂರ್ವನಿಯೋಜಿತವಾಗಿರಲಿಲ್ಲ ಎಂಬ ಪೊಲೀಸ್ ಅಧಿಕಾರಿಗಳ ಹೇಳಿಕೆ ಆಶ್ಚರ್ಯವನ್ನುಂಟು ಮಾಡುತ್ತದೆ. ಅಂದು ರಾತ್ರಿ ಮದ್ಯ ಕುಡಿದು 'ಜಾಲಿರೈಡ್' ಮಾಡುತ್ತಿದ್ದಾಗ ಸಂಭವಿಸಿದ ಆಕಸ್ಮಿಕ ಅಚಾತುರ್ಯ ಎಂದು ಪೊಲೀಸರ ಅಭಿಪ್ರಾಯವೆ? ಪೊಲೀಸರು ಇಂತಹ ಅಮಾನುಷ ಕೃತ್ಯದ ಬಗ್ಗೆ ಈ ರೀತಿಯ ಧೋರಣೆ ತಾಳುವಂತಾದರೆ, ಮುಂದೆ ತನಿಖೆ ಸಾಗಬೇಕಾದ ದಾರಿ ತೀರಾ ಅನುಮಾನಾಸ್ಪದವಾಗಲಿದೆ.

ಆರಂಭದಿಂದಲೇ, ತನಿಖೆಯ ಗತಿ ಸಾರ್ವಜನಿಕರಲ್ಲಿ ಹಲವು ಸಂದೇಹಗಳಿಗೆ ಎಡೆಮಾಡಿಕೊಟ್ಟಿತ್ತು. ಘಟನೆ ನಡೆದು ಐದಾರು ದಿನಗಳು ಕಳೆದರೂ ವೈದ್ಯಕೀಯ ಪರೀಕ್ಷಾ ವರದಿ ಪೊಲೀಸರ ಕೈಸೇರಿರಲಿಲ್ಲ. ಯಾಕಿಷ್ಟು ವಿಳಂಬ? ದೌರ್ಜನ್ಯಕ್ಕೆ ಒಳಗಾದ ಯುವತಿಯಿಂದ ಮಾಹಿತಿ ಪಡೆದು ಆರೋಪಿಗಳಲ್ಲಿ ಒಬ್ಬನ ರೇಖಾ ಚಿತ್ರವನ್ನು ತಯಾರಿಸಲು ಸಾಧ್ಯವಾಯಿತು. ಆದರೆ ಅದೇ ಯುವತಿಯಿಂದ ಘಟನೆಯ ಬಗ್ಗೆ ಹೇಳಿಕೆ ಪಡೆಯಲು ಇದುವರೆಗೂ ಸಾಧ್ಯವಾಗಿಲ್ಲ ಏಕೆ? ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದ ಯುವತಿಯನ್ನು ಭೇಟಿಯಾಗಲು ಮಹಿಳಾ ಸಂಘಟನೆಯವರಿಗೂ ಅವಕಾಶ ನಿರಾಕರಿಸಿದ್ದು ಏಕೆ? ಆರೋಪಿಗಳಲ್ಲಿ ಇಬ್ಬರು ಕೆಲವು ದಿನ ತಲೆ ಮರೆಸಿಕೊಡಿದ್ದರೆ, ಒಬ್ಬ ಅದೇ ಪರಿಸರದಲ್ಲಿ ಅದೇ ಆಟೋರಿಕ್ಷಾ ಓಡಿಸಿಕೊಂಡು ಇದ್ದರೂ ಆತನನ್ನು ಗುತಿಸಲಾಗದಿರುವುದು ಹೇಗೆ? ಪೊಲೀಸರ ಈ ವಿಫಲತೆಗಳು ಮತ್ತಷ್ಟು ಸಂದೇಹಗಳಿಗೆ ಎಡೆಮಾಡುತ್ತವೆ. ಇಲ್ಲಿ ಏನನ್ನೋ ಮುಚ್ಚಿಹಾಕುವ ಪ್ರಯತ್ನ ನಡೆಯುತ್ತಿದೆ-ಯೇ? ಎಂಬ ಅನುಮಾನ ಸಹಜವಾಗಿ ಉಂಟಾಗುತ್ತದೆ.

ಆರೋಪಿಗಳು ಏನೂ ತಿಳಿಯದ ಸಾಚಾಗಳಾಗಿದ್ದರೆ ಒಂಟಿಯಾಗಿ ಹೋಗುತ್ತಿದ್ದ ಯುವತಿಯೊಬ್ಬಳನ್ನು ಆಟೋರಿಕ್ಷಾದಲ್ಲಿ ಅಪಹರಿಸಿ, ನಿರ್ಜನ ಪ್ರದೇಶಕ್ಕೆ ಕೊಂಡೊಯ್ದು ಸಾಮೂಹಿಕ ಅತ್ಯಾಚಾರವೆಸಗಲು ಅವರಿಗೆ ಧೈರ್ಯ ಸಾಲುತ್ತಿತ್ತೆ? ಇಂತಹ ಹಲವಾರು ಅಪರಾಧ ಕೃತ್ಯಗಳನ್ನು ಮಾಡಿ ದಕ್ಕಿಸಿಕೊಂಡವರೇ ಇವರು ಎಂಬುದು ಸ್ಪಷ್ಟ. ಇವರಿಗೆ ಕ್ರಿಮಿನಲ್ 'ಗಾಡ್‌ಫಾದರ್'ಗಳೂ ಇರುವ ಸಾಧ್ಯತೆ ಇದೆ ಯೋಗೀಶ ಎಂಬ ಭಜರಂಗಿ ರಾಜಕಾರಣಿಗಳಿಗೆ ಹೆಣ್ಣುಗಳನ್ನು ಪೂರೈಸುವಲ್ಲೂ ಸಕ್ರಿಯನಾಗಿದ್ದ ಎನ್ನಲಾಗಿದೆ. ಮಾದಕ ದ್ರವ್ಯ ಸಾಗಾಟದ ಚಟುವಟಿಕೆಗಳು ಇಲ್ಲಿ ವ್ಯಾಪಕವಾಗಿ ನಡೆಯುತ್ತಿವೆ ಎಂಬ ಮಾತು ಸಹ ಕೇಳಿಬರುತ್ತಿದೆ.


ಮಣಿಪಾಲದಲ್ಲಿ ಈ ಹಿಂದೆಯೂ ಇಂತಹ ಅತ್ಯಾಚಾರದ ಪ್ರಕರಣಗಳು ನಡೆದಿರಬಹುದು. ಇಂದೂ, ರಾಜ್ಯದ ಹಲವೆಡೆ ನಡೆಯುತ್ತಿರುವ ಇಂತಹ ಲೈಂಗಿಕ ದೌರ್ಜನ್ಯದ ಪ್ರಕರಣಗಳು ಬೆಳಕಿಗೆ ಬಾರದೆ ಮುಚ್ಚಿಹೋಗುತ್ತಿರಬಹುದು. ಆದರೆ ಇದೊಂದು ಪ್ರಕರಣ ಬೆಳಕಿಗೆ ಬಂದಿದೆ. ಇದನ್ನು ಯಾವ ಕಾರಣಕ್ಕೂ ಮುಚ್ಚಿಹಾಕಲು ಬಿಡಬಾರದು. ನಿಧಾನಗತಿಯಲ್ಲಿ ಸಾಗಿದ ತನಿಖೆ ಸಾರ್ವಜನಿಕರಲ್ಲಿ ಆತಂಕ, ಆಕ್ರೋಶಕ್ಕೆ ಕಾರಣವಾಗಿದೆ. ಪ್ರಕರಣದಲ್ಲಿ ಸ್ಥಳೀಯ ಅಥವ ಹೊರ ರಾಜ್ಯಗಳ ಗಣ್ಯ(?)ರ ಪಾತ್ರವಿರಬಹುದೆ ಎಂಬ ಸಂಶಯ ವ್ಯಕ್ತವಾಗುತ್ತಿದೆ. ಹೊಸದಾಗಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರಕ್ಕೆ ಈ ಘಟನೆಯಿಂದ ಕೆಟ್ಟ ಹೆಸರು ಬಂದೀತೆಂಬ ಭೀತಿಯಿಂದ ಪ್ರಕರಣವನ್ನು ಮುಚ್ಚಿಹಾಕಲು ಸರ್ಕಾರ ಪ್ರಯತ್ನಿಸುತ್ತಿದೆಯಾ ಎಂಬ ಅನುಮಾನ ಹುಟ್ಟಿಕೊಂಡಿದೆ. ಆದ್ದರಿಂದ ತನಿಖೆ ಆಳಕ್ಕೆ ಇಳಿಯಬೇಕಾಗಿದೆ. ಇಲ್ಲಿನ ಕ್ರಿಮಿನಲ್ ಲೋಕವನ್ನು ಜಾಲಾಡಲು ಸಾಧ್ಯವಾಗಬೇಕಾಗಿದೆ.

ತಮ್ಮ ಊರಿನಲ್ಲೇ ಅತ್ಯಾಚಾರದ ಘಟನೆ ನಡೆದಿರುವ ಬಗ್ಗೆ ತಮಗೆ ನೋವಾಗಿದೆ ಎಂದು ಪೇಜಾವರ ಮಠಾಧೀಶರು ಹೇಳಿಕೆ ನೀಡಿದ್ದಾರೆ. ಬೇರೆ ಊರಲ್ಲಿ ಇಂತಹ ದೌರ್ಜನ್ಯ ನಡೆದ-ರೆ ಅವರಿಗೆ ನೋವಾಗುವುದಿಲ್ಲ ಎಂದು ಅವರೇ ಹೇಳಿಕೊಂಡಂತಾಗಿದೆ. ಆದ್ದರಿಂದಲೇ, ಧರ್ಮಸ್ಥಳದಲ್ಲಿ ಕಾಲೇಜ್ ವಿದ್ಯಾರ್ಥಿನಿಯೊಬ್ಬಳ ಮೇಲೆ ಅತ್ಯಾಚಾರ ಮಾಡಿ ನಂತರ ಬರ್ಬರವಾಗಿ ಕೊಲೆಮಾಡಿ ಅವಳ ಮೃತದೇಹವನ್ನು ಕಾಡಿನಲ್ಲಿ ಎಸೆದು ಹೋದ ಪ್ರಕರಣ ಬಯಲಿಗೆ ಬಂದಾಗ ಪೇಜಾವರರು ಬಾಯಿ ಬಿಚ್ಚಿರಲಿಲ್ಲ. ಮಂಗಳೂರಿನ ಪಬ್‌ವೊಂದರಲ್ಲಿ

ಪುಟ 4 ಕ್ಕೆ

ನೀಚತನಗಳ ಎದುರಿನಲ್ಲೂ ಮಾನವೀಯತೆಯ ಮಹಾನದಿ ಬತ್ತದಿರಲಿ

ಉತ್ತರಖಾಂಡದಲ್ಲಿ ಸಂಭವಿಸಿರುವ ಪ್ರಕೃತಿ ವಿಕೋಪದ ರುದ್ರ ನರ್ತನ ಹನ್ನೆರೆರಡು ದಿನಗಳು ಕಳೆದರೂ ನಿಂತಿಲ್ಲ. ನಮ್ಮ ಸಮೂಹ ಮಾಧ್ಯಮಗಳು, ವಿಶೇಷವಾಗಿ ಅಲ್ಲಿಂದ ಬದುಕುಳಿದು ರಕ್ಷಿತರಾಗಿ ರಾಜ್ಯಕ್ಕೆ ವಾಪಾಸಾದ ನಮ್ಮ ರಾಜ್ಯದ ಯಾತ್ರಾರ್ಥಿಗಳು ಕಂಡುಂಡ ದಾರುಣ ದೃಶ್ಯಗಳು ಎಂಥವರನ್ನೂ ತಲ್ಲಣಿಸುವಂತೆ ಮಾಡಿವೆ. ಈ ದುರಂತಕ್ಕೆ ಮಿಡಿಯದವರಿಲ್ಲ, ತುಡಿಯದವರಿಲ್ಲ ಎಂಬಂತೆ ಅನುಕಂಪ, ನೆರವಿನ ಮಹಾಪೂರವೂ ಹರಿಯುತ್ತಿರುವುದು ಮಾನವೀಯತೆಯ ಮೇರುತನಕ್ಕೆ ಸಾಕ್ಷಿ. ಈ ನೆರವಿನ, ಮಾನವೀಯತೆಯ ಮಹಾನದಿ ಎಂದೂ ಬತ್ತದಿರಲಿ, ಸದಾ ಹರಿಯುತಲಿರಲಿ.



ಇಲ್ಲಿನ ವಿಪರೀತ ವಿದ್ಯುತ್ ಯೋಜನೆಗಳ ಅನುಷ್ಠಾನ, ಪ್ರವಾಸಿಗರ ಒತ್ತಡ ಇತ್ಯಾದಿಗಳು ಕುರಿತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಬಿ.ಕೆ. ಚತುರ್ವೇದಿ ಸಮಿತಿ ನೀಡಿದ್ದ ಸಲಹೆಗಳನ್ನೂ ಪಾಲಿಸಿ ಗಾಳಿಗೆ ತೂರಿದ್ದು ನೆನಪುಗಳನ್ನು ಈಗ ಕೆಲವರು ಮಾಡಿಕೊಳ್ಳುತ್ತಿದ್ದಾರೆ ಗಮನಿಸಬೇಕು. ಈ ವಿಕೋಪದ ಕುರಿತಂತೆ ಪ್ರಾಕೃತಿಕ ಮತ್ತು ಮಾನವ ನಿರ್ಮಿತವಾದ ಕೃತ್ಯಗಳ ಎಲ್ಲಾ ಮಗ್ಗುಲುಗಳನ್ನು ಪರಿಶೀಲಿಸಿದ ಒಡನಾಡಿ ಸೀತಾರಾಮ್ ಯೆಚೂರಿಯವರ ಲೇಖನ ನಮ್ಮ ಈ ಸಂಚಿಕೆಯಲ್ಲೇ ಇದೆ. ಹೀಗಾಗಿ ಗಂಭೀರವಾದ ಆ ವಿಚಾರಗಳನ್ನು ಮರು ಹೇಳುವ ಅಗತ್ಯವಿಲ್ಲ.

ಒಂದೆರಡಲ್ಲ ಈ ಸಂಕಷ್ಟಗಳು

ಈ ದುರಂತದ ದವಡೆಗೆ ಸಿಕ್ಕವರು ಲಕ್ಷಾಂತರ ಜನ. ಬದುಕಿ ಬಂದವರು ಹಲವು ಲಕ್ಷಗಳು, ಹಾಗೇ ಶವಗಳಾಗಿ ಶಾಶ್ವತವಾಗಿ ತಿರುಗಿ ಬಾರದವರ ಒಟ್ಟು ಲೆಕ್ಕ ಸಿಕ್ಕಿಲ್ಲವಾದರೂ ಅವರೂ ಇನ್ನೂ ಹಲವಾರು ಸಾವಿರಗಳನ್ನು ದಾಟಿಯಾರೇ ಎಂಬ ಆತಂಕ ಗಟ್ಟಿಯಾಗುತ್ತಿದೆ. ಯಾಕೆ-ಂದರೆ ದಾಖಲಾದ ಪ್ರವಾಸಿಗರ ಲೆಕ್ಕದ ಕೆಲ ವಿವರಗಳು ಬರುತ್ತಿವೆಯೇ ಹೊರತು, ಸಿಕ್ಕಿ ಹಾಕಿಕೊಂಡವರು, ಇನ್ನೂ ಅಲ್ಲಿಯೇ ಇದ್ದು ಪ್ರವಾಸಿಗಳಿಗೆ ವಿವಿಧ ಸೇವೆಗೈಯ್ಯುತ್ತಲಿದ್ದ ದುಡಿಯುವವರ ಪಾಡೇನಾಗಿದೆ ಎಂಬುದರ ವಿವರಗಳು ಹೆಚ್ಚು ಬೆಳಕು ಕಂಡಿಲ್ಲ. ಒಂದಂತೂ ನಿಜ, ಇಂತಹ ಧಾರ್ಮಿಕ ಪ್ರವಾಸೋದ್ಯಮ ಬಹು ಜೋರಾಗಿ ಬೆಳೆಯುತ್ತಿರುವುದರಿಂದ ರಾಜ್ಯ ರಾಜ್ಯಗಳಿಂದ ಜನರನ್ನು ಸಂಘಟಿಸುವುದರಿಂದಲೂ ಯಾತ್ರಿಗಳ ಪಟ್ಟು ಸುಮಾರು ನಾಲ್ಕೈದು ಪಟ್ಟು ಬೆಳೆದಿದೆ. ಐದಾರು ಲಕ್ಷ ಜನರಂತೂ ಅಲ್ಲಿ ನೆರೆಯುತ್ತಾರೆ: ಹಾಗಾಗಿ ಹಾನಿಯೂ ಅಪಾರ. ಹೀಗಿರುವಲ್ಲಿ ನಮ್ಮ ಯೋಧರ ಶ್ಲಾಘನೀಯ ರಕ್ಷಣಾ ಕಾರ್ಯ ಹಲವಾರು ಪ್ರತಿಕೂಲ ಸನ್ನಿವೇಶದಲ್ಲಿಯೂ ನಿಂತಿಲ್ಲ. ಯೋಧರು ಪ್ರಾಣ ಪಣವಾಗಿರಿಸಿದ್ದಾರೆ. ಕೆಲವು ಯೋಧರು ಪ್ರಾಣ ಕಳೆದುಕೊಂಡಿದ್ದಾರೆ. ನಮ್ಮ ರಾಜ್ಯದ 29 ವಯಸ್ಸಿನ ನರಗುಂದದ ಜಗಾಪುರ ಗ್ರಾಮದ ಬಸವರಾಜ ತುಳಸಪ್ಪ ಯರಗಟ್ಟಿ ರಕ್ಷಣಾ ಕಾರ್ಯದಲ್ಲೇ ತೊಡಗಿದ್ದ ಹೆಲಿಕಾಪ್ಟರ್ ಪತನದಲ್ಲಿ 19 ಜನರೊಂದಿಗೆ ಹುತಾತ್ಮನಾಗಿರುವುದು ಒಂದು ಉದಾಹರಣೆ. ಮತ್ತೇ ಸುರಿಯುತ್ತಿರುವ ಮಳೆ ರಕ್ಷಣಾ ಕಾರ್ಯ-ಕ್ಕೆ ಅಡ್ಡಿ ಮಾಡುತ್ತಿರುವುದು, ಇನ್ನಷ್ಟೂ ಸಂಕಷ್ಟಗಳು ಎದುರಾಗಬಹುದಾದದ್ದು ನಿರೀಕ್ಷಿತ.

ನೀಚತನದ ಹಾವಳಿ

ಈ ಸಂದರ್ಭದಲ್ಲೇ ನಾವು ಗಮನಿಸಬೇಕಾದ ಹಲವು ಸಂಗತಿಗಳು ಇವೆ. ಇಷ್ಟೊಂದು ವ್ಯಾಪಕ ಹಾನಿಯಲ್ಲಿ ಜನತೆ ನರಳುತ್ತಿರುವಾಗ ಅಲ್ಲಿಯೇ ತಮ್ಮ ದುಷ್ಟತನ ಮತ್ತು ಕ್ರೌರ್ಯ ಮೆರೆಸಿದ ಹಲವು ಘಟನೆಗಳಿವೆ. ಇಂತಹ ಘಟನೆಗಳಿಗೆ ಇವರೂ ಕಾದಿದ್ದರೋ ಎಂಬಂತಹ ರಣಹದ್ದುಗಳು ಅವರು. ರಾಜ್ಯಕ್ಕೆ ಮರಳಿ ಬಂದ ಕೆಲ ಪ್ರವಾಸಿಗಳೇ ಹೇಳಿದಂತೆ ನೆರವಿನ ನೆಪದಲ್ಲಿ, ಸತ್ತವರ ಅದರಲ್ಲೂ ಮಹಿಳೆಯರು ಧರಿಸಿದ ಚಿನ್ನಾಭರಣಗಳ ಲೂಟಿ ಕೆಲವರಿಂದ ಅವ್ಯಾಹತವಾಗಿ ನಡೆದಿದೆ. ಆಭರಣಗಳನ್ನು ದೋಚುವ ಧಾವಂತದಲ್ಲಿ ಮಹಿಳೆಯರ ಕೈ, ಕಾಲುಗಳನ್ನೇ ಕತ್ತರಿಸಿ

ಪುಟ 4 ಕ್ಕೆ


ಕಾರ್ಟೂನ್ ಕಾರ್ನರ್



ಕನಿಷ್ಟಕೂಲಿ ಜಾರಿಮಾಡದಿದ್ದರೆ ಬಿಸಿಯೂಟದ ಅಡುಗೆ ಮನೆಗಳಿಗೆ ಬೀಗ –ವಿಧಾನಸೌಧ ಮುತ್ತಿಗೆ ಖಚಿತ – ಎಸ್. ವರಲಕ್ಷ್ಮಿ ಎಚ್ಚರಿಕೆ

ರಾಜ್ಯದಲ್ಲಿ 80 ಲಕ್ಷ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಮಾಡಿ ಬಡಿಸುತ್ತಿರುವ 1 ಲಕ್ಷ ಬಿಸಿಯೂಟ ನೌಕರರು ಕನಿಷ್ಟಕೂಲಿಯು ಇಲ್ಲದೆ ದುಡಿಯುತ್ತಿದ್ದಾ-ರೆ . ಈ ನೌಕರರಿಗೆ ಸರ್ಕಾರು ಕನಿಷ್ಟಕೂಲಿ ಜಾರಿಮಾಡದಿದ್ದರೆ ಬಿಸಿಯೂಟದ ಅಡುಗೆ ಮನೆಗಳಿಗೆ ಬೀಗ ಹಾಕಿ ವಿಧಾನಸೌಧ ಮುತ್ತಿಗೆ ಹಾಕಲಾಗುವುದು ಎಂದು ಕರ್ನಾಟಕ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯಾಧ್ಯಕ್ಷೆ ಎಸ್.ವರಲಕ್ಷ್ಮಿ ಎಚ್ಚರಿಸಿದರು.

ಅವರು ನಗರದ ಅಂಬೇಡ್ಕರ್ ಭವನದಲ್ಲಿ ಜೂನ್ 23, 2013 ರಂದು ನಡೆದ ತುಮಕೂರು ಜಿಲ್ಲಾ ಅಕ್ಷರ ದಾಸೋಹ ನೌಕರರ ಸಂಘದ 2ನೇ ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಕಳೆದ 11 ವರ್ಷಗಳಿಂದ ಮಕ್ಕಳಿಗೆ ಯಾವುದೇ ರೀತಿಯ ತೊಂದರೆ-ಯಾಗದಂತೆ ಕೇವಲ ಒಂದು ಸಾವಿರ ರೂ. ಕೂಲಿಗೆ ದುಡಿಯುತ್ತಿರುವ ನೌಕರರ ಬದುಕಿನ ಬಗ್ಗೆ ಸರ್ಕಾರ ಗಮನಹರಿಸಬೇಕು. ಪ್ರತಿದಿನ ಏರುತ್ತಿರುವ ಬೆಲೆ ಏರಿಕೆಯಿಂದ ತತ್ತರಿಸಿ ಹೋಗಿರುವ ನೌಕರರ ಬದುಕಿನ ಗತಿ ಏನು ಎಂದು ಪ್ರಶ್ನಿಸಿದ ಅವರು ಚುನಾವಣೆಗಳಲ್ಲಿ ನೌಕರರ ಸಮಸ್ಯೆಗಳನ್ನು ಸಹ ಆಲಿಸದ ಜನಪ್ರತಿನಿಧಿಗಳು ತಮ್ಮ ಸ್ವಂತ ವೇತನಗಳನ್ನು ರೂ. ಒಂದು ಲಕ್ಷದವರೆಗೂ ಹೆಚ್ಚಿಸಿಕೊಂಡಿದ್ದು ಸರ್ಕಾರದ ಯೋಜನೆಗಳು ಯಶಸ್ವಿಯಾಗಿ ನಡೆಯಲು ಕಾರಣಿಭೂತರಾಗಿರುವ ನೌಕರರ ಸಮಸ್ಯೆಗಳ ಕಡೆ ಏಕೆ ಗಮನಹರಿಸುತ್ತಿಲ್ಲ ಎಂದು ಪ್ರಶ್ನಿಸಿದರು.



ಸಿಐಟಿಯುನ ಜಿಲ್ಲಾಧ್ಯಕ್ಷ ಸೈಯದ್‌ಮುಜೀಬ್ ಮಾತನಾಡಿ ದೇಶದಲ್ಲಿ 9.5 ಲಕ್ಷ ಶಾಲೆಗಳಲ್ಲಿ 20 ಕೋಟಿಗಿತಲೂ ಹೆಚ್ಚಿನ ಮಕ್ಕಳಿಗೆ ಪ್ರತಿದಿನ ಯಾವುದೇ ರೀತಿಯ ತೊಂದರೆಗಳೂ ಆಗದಂತೆ ಸುಮಾರು 26 ಲಕ್ಷ ಬಿಸಿಯೂಟದ ನೌಕರರು ಕೆಲಸ ಮಾಡುತ್ತಿದ್ದಾರೆ. ಅವರಿಗೆ ನೀಡುವ ಒಂದುಸಾವಿರ ರೂಪಾಯಿಯಲ್ಲಿ ಅವರ ಮಕ್ಕಳ ಶಿಕ್ಷಣ, ಆರೋಗ್ಯ, ಮನೆಬಾಡಿಗೆ ಜೊತೆಗೆ ಸಂಸಾರವನ್ನು ನಡೆಸುವುದು ಹೇಗೆ ಎಂದು ಪ್ರಶ್ನಿಸಿದರು. ರಾಜ್ಯ ಸರ್ಕಾರ ಬಿಪಿಎಲ್ ಕಾರ್ಡ್‌ದಾರರಿಗೆ ಕೆ.ಜಿ.ಗೆ ಒಂದು ರೂ. ನಲ್ಲಿ 30 ಕೆ.ಜಿ. ಅಕ್ಕಿ ನೀಡುವ ಭರವಸೆ ನೀಡಿ 2 ತಿಂಗಳುಗಳು ಕಳೆದರೂ ಸಹ ಇನ್ನೂ ಸರ್ಕಾರದ ಭರವಸೆ ಈಡೇರಿಲ್ಲ. ಮಾತ್ರವಲ್ಲದೆ ಎಪಿಎಲ್ ಕಾರ್ಡ್‌ದಾರರಿಗೆ ಅಕ್ಕಿಯನ್ನು ನೀಡಲು ಸಾಧ್ಯವಿಲ್ಲ ಎಂದು ಹೇಳಿರುವ ಸರ್ಕಾರದ ಕ್ರಮ ಸರಿಯಾದುದಲ್ಲ ಎಂದರು. ನೌಕರರು ಅಡುಗೆ ಮಾಡುವ ಸಂದಂರ್ಭಗಳಲ್ಲಿ ಮೈಮೇಲೆ ಗಂಜಿಸುರಿದು ಗಾಯಗಳಾದ ಹಲವಾರು ಉದಾಹರಣೆಗಳು ಇವೆ. ಸರ್ಕಾರ ಈ ನೌಕರರನ್ನು ಕಾಯ ಮಾಡಬೇಕು ಸಾಮಾಜಿಕ ಸುರ ಕ್ರಮಗಳನ್ನು ಜಾರಿಗೆ ತರಬೇಕು ಎಂದರ ಸರ್ಕಾರ ಮಾಡಿಸಿಕೊಳ್ಳುವ ಕೆಲಸದಲ್ಲಿ 2 ದಿನಗಳ ಕೆಲಸವನ್ನು ಮಾತ್ರ ಪರಿಗಣಿಸು ಕ್ರಮ ಸರಿಯಾದುದಲ್ಲ ಎಂದ ಅವ ಬಿಜೆಪಿ ಸರ್ಕಾರದ ನೀತಿಗಳನ್ನು ತಿರಸ್ಕರಿ ಕಾಂಗ್ರೆಸ್ ಸರ್ಕಾರವನ್ನು ಜನತೆ ಅಧಿಕಾರ ತಂದಿದ್ದಾರೆ ಸಾಮಾಜಿಕ ನ್ಯಾಯದ ಬ ಮಾತನಾಡುವ ಸರ್ಕಾರ ಈ ನೌಕರರನ ಖಾಯಂ ಮಾಡಬೇಕು ಹಾಗೂ ನೌಕರರಿ ಕನಿಷ್ಟ 10 ಸಾವಿರ ರೂಗಳನ್ನು ನೀಡಬೇಕ ಎಂದರು

ಸಿಐಟಿಯುನ ಜಿಲ್ಲಾ ಖಜಾಂಚಿ ಕಮ ಅಧ್ಯಕ್ಷತೆ ವಹಿಸಿದ್ದರು, ಸಿಐಟಿಯು ಜಿಲ್ಲ ಪ್ರಧಾನ ಕಾರ್ಯದರ್ಶಿ ಎನ್.ಕೆ.ಸುಬ್ರಮಣ್ಯ ಅಕ್ಷರ ದಾಸೋಹ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಸಿ. ಮಲ್ಲಮ್ಮ ಕೆಂಚಮ್ಮ ಅನುಸೂಯ, ಮುಂತಾದವರು ಉಪಸ್ಥಿತರಿದ್ದರು ಸಮ್ಮೇಳನಕ್ಕೂ ಮೊದಲು ನಗರದ ಟೌನ್‌ಹಾಲ್ ವೃತ್ತದಿಂದ ಸಾವಿರಾ ನೌಕರರು ಬೃಹತ್ ರ್‍ಯಾಲಿ ನಡೆಸಿದರು.

– ವರದಿ : ರಾಘವೇಂದ್ರ ಎಸ್

ಮಣಿಪಾಲ ......

ಪುಟ 3 ರಿಂದ

ಮತ್ತು ನಂತರ ಹೋಂ ಸ್ಟೇ ಒಂದರಲ್ಲಿ ಪೇಜಾವರರ 'ಪರಿವಾರ'ಕ್ಕೆ ಸೇರಿದ ಪುಂಡರು ಮಹಿಳೆಯರ ಮೇಲೆ ಹಲ್ಲೆಮಾಡಿ ಅವರ ಮಾನಭಂಗ ಮಾಡಲು ಯತ್ನಿಸಿದ ಪ್ರಕರಣದಲ್ಲಿಯೂ ಪೇಜಾವರರು ಅದನ್ನು ಖಂಡಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರಗಿಸಲು ಒತ್ತಾಯಿಸಿರಲಿಲ್ಲ. ಇಂತಹ ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳನ್ನು ತಡೆಯುವುದು ಅವರಿಗೆ ಮುಖ್ಯವಲ್ಲ. ಗೋಹತ್ಯೆ ತಡೆಯುವುದು, ಮತಾಂತರ ತಡೆಯುವುದು, ಆಯೋಧ್ಯೆಯಲ್ಲಿ ಮಸೀದಿ ಇದ್ದ ಜಾಗದಲ್ಲಿ ರಾಮ ಮಂದಿರ ಕಟ್ಟಿಸುವುದು, ಇದೇ ಅವರಿಗೆ ಮುಖ್ಯ.

ಪೇಜಾವರರ ನೇತೃತ್ವದ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳ ಆರೋಪಿಗಳನ್ನು ಬಂಧಿಸಲು ಆಗ್ರಹಿಸಿ ಮಣಿಪಾಲ ಬಂದ್‌ಗೆ ಕರೆ ನೀಡಿದ್ದವು. ವಿಪರ್ಯಾಸವೆಂದರೆ, ಈ ಪ್ರತಿಭಟನೆಯಲ್ಲಿ ಬಜರಂಗದಳದ ಕಾರ್ಯಕರ್ತ ಯೋಗೀಶನ ಸಹೋದರನೂ ಭಾಗವಹಿಸಿದ್ದ. ಯೋಗೀಶನ ಬಂಧನದೊಂದಿಗೆ ಬಜರಂಗಿಗಳ ನಿಜಬಣ್ಣ ಮತ್ತೊಮ್ಮೆ ಬಯಲಾಗಿದೆ. ಬೇರೆ ಕೋಮಿನ ಯುವಕರೊಂದಿಗೆ ಮಾತನಾಡುವ ಯುವತಿಯರ ಮೇಲೆ ಕೈಮಾಡುವ, ಪ್ರೇಮಿಗಳ ದಿನ ಆಚರಿಸುವ ಯುವಕ-ಯುವತಿಯರ ಮೇಲೆ ಹಲ್ಲೆ ಮಾಡುವ, ಸ್ನೇಹಿತರೊಂದಿಗೆ ಹುಟ್ಟುಹಬ್ಬ ಆಚರಿಸಲು ಸೇರಿದ ಯುವತಿಯರನ್ನು ಎಳೆದಾಡಿ ಖುಷಿಪಡುವ ಈ ಪುಂಡರ ಪುಂಡಾಟಿ-ಕೆಗೆ ಬೇಸತ್ತು ಕರಾವಳಿಯ ಜನ ಈಸಲ ವಿಧಾನಸಭಾ ಚುನಾವಣೆಯಲ್ಲಿ ಸರಿಯಾಗಿ ಪಾಠ ಕಲಿಸಿದ್ದನ್ನು ಇವರು ಎಂದೂ ಮರೆಯಬಾರದು.

ನೀಚತನಗಳ ಎದುರಿನಲ್ಲೂ....

ಪುಟ 3 ರಿಂದ

ಕಿತ್ತೋಡಿದ್ದು ಎಂತಹ ನೀಚತನ! ಇಂದಿನ ಸುದ್ದಿಯಂತೆ ಸಾಧುಗಳ ವೇಷದ ಇಬ್ಬರನ್ನು ತಪಾಸಣೆ ಮಾಡಿದಾಗ ಸಿಕ್ಕಿರುವುದು ಬರೋಬ್ಬರಿ ಒಂದೂವರೆ ಕೋಟಿಗೂ ಅಧಿಕ ರೂಪಾಯಿಗಳು ಮತ್ತು ಕೆ.ಜಿ.ಗಟ್ಟಲೇ ಚಿನ್ನಾಭರಣಗಳು. ಇಂತಹ ತಂಡಗಳೇ ಅಲ್ಲಿ ಮುಕ್ತವಾಗಿ ಕಾರ್ಯಾಚರಣೆಗೆ ಇಳಿದಿರುವಾಗ ಪರಿಸ್ಥಿತಿ ಎಷ್ಟು ಘೋರವಿರಬೇಡ. ಬಹುತೇಕ ಇಂತಹ ಸನ್ನಿವೇಶಗಳಲ್ಲಿ ಅದು ನೆರೆ, ಬರ, ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ಲೂಟಿಗೆ ಇಳಿಯುತ್ತವೆ. ಇನ್ನು ಪರಿಹಾರದ ನಾಟಕಗಳು, ಆ ಕಾರ್ಯದಲ್ಲಿಯೂ ಮನಸಾರೆ ಲೂಟಿ, ನೆರವಿನ ಹಸ್ತ ಚಾಚುವ ನೆಪದಲ್ಲಿ ನೀಚ ಒಣ ರ್‍ಯಾಂಬೋ ರಾಜ-ಕಾರಣ ! ಮೋದಿಯವರದ್ದು 15000 ಜನರನ್ನು ಎರಡೇ ದಿನಗಳಲ್ಲಿ ರಕ್ಷಿಸಿದ ಬಡಾಯಿ ಕೊಚ್ಚಿದ ಹಾಸ್ಯಾಸ್ಪದ ಹೇಳಿಕೆ ಒಂದಾದರೆ ಆಂಧ್ರದ ಕಾಂಗ್ರೆಸ್ ಮತ್ತು ತೆಲುಗುದೇಶಂ ಪಕ್ಷಗಳ ಸಂಸದರ ರಕ್ಷಣಾ ಕಾರ್ಯದ ಬೊಗಳೆ ಸ್ಪರ್ಧೆ, ಮಧ್ಯಪ್ರದೇಶದ ಶಾಸಕನದ್ದೂ ಇನ್ನೊಂದು ಉತ್ತರ ಭೂಪ-ತನ! ಅದಕ್ಕೆ ಅಲ್ಲವೇ ಪತ್ರಕರ್ತ ಪಿ.ಸಾಯಿನಾಥ್ ಹೇಳಿರುವುದು 'ಬರ ಅಂದ್ರೆ ಎಲ್ಲರಿಗೂ ಇಷ್ಟ' ! ನೆರೆಗೂ ಇದೇ ಮಾತು ಅನ್ವಯಿಸುತ್ತದೆ.

ಈಗಂತೂ ಸುಮಾರು 82 ಸಾವಿರ ಜನರನ್ನು ರಕ್ಷಿಸಲಾಗಿದೆಯೆಂದೂ, ಇನ್ನೂ 40 ಸಾವಿರದಷ್ಟು ಜನರನ್ನು ಕಾಪಾಡಬೇಕಿದೆಯೆಂದೂ ವರದಿಗಳು ಹೇಳುತ್ತಿವೆ. ಮತ್ತೇ ಜೋರಾಗಿ ಮಳೆ ಶುರುವಾಗಿದೆ. ಸಂದಿಗ್ಧತೆಯಿರುವ ಪ್ರದೇಶಗಳಿಗೆ ಹೆಲಿಕಾಪ್ಟರುಗಳು ಹೋಗದ ತಡೆ. ಶವಗಳ ಸಂಸ್ಕಾರಕ್ಕೂ ಸಾಧ್ಯವಾಗದ ಸ್ಥಿತಿ ! ಕೊಳೆಯುತ್ತಿರುವ ಹೆಣಗಳಿಂದ ಸಾಂಕ್ರಾಮಿಕ ರೋಗಗಳು ಹಬ್ಬುವ ಭೀತಿ! ಮೇಲಾಗಿ ಔಷಧಿ, ವೈದ್ಯಕೀಯ ಸಿಬ್ಬಂದಿ ಕೊರತೆ. ಹಾಲಿ ಸಿಕ್ಕಿ ಬಿದ್ದ ಲಕ್ಷಾಂತರ ಜನರಲ್ಲಿ 65ಸಾವಿರ ಮಕ್ಕಳು !

ದುಡಿಯುವವರೀಗ ದಿಕ್ಕೇಡಿಗಳು

ಇಷ್ಟು ಮಾತ್ರವೇ ಅಲ್ಲಿನ ಪೂರ್ಣ ಚಿತ್ರಣವನ್ನು ನೀಡುವುದಿಲ್ಲ. " ಮನೆಯೂ ಉಳಿಯಲಿಲ್ಲ, ಮನೆಯಲ್ಲಿರುವುದೂ ಏನೂ ಉಳಿದಿಲ್ಲ, ಆರು ಮಕ್ಕಳಿರುವ ನಾವು ಅವರಿಗೆ ಏನು ತಿನ್ನಿಸುವುದು" ಹೀಗೆ ಕೇಳುತ್ತಾಳೆ ಕರಾದಿ ಜಿಲ್ಲೆಯ ರಾಜೇಶ್ವರಿ. ಈ ನೆರೆಯಲ್ಲಿ ಸಹಸ್ರಾರು ಸ್ಥಳೀಯ ಕುಟುಂಬಗಳ ಜನರು, ಅವರ ಬದುಕು ಅಕ್ಷರಶಃ ನೆರೆಯ ಪ್ರತಾಪದಲ್ಲಿ ಕೊಚ್ಚಿ ಹೋಗಿದೆ. ಆ ಪರಿಸರದಲ್ಲೇ ಹುಟ್ಟಿ ಬೆಳೆದು ಬದುಕು ಸಾಗಿಸುತ್ತಲಿದ್ದವರು. ಅಲ್ಲಿ ಪ್ರವಾಸಿಗರಿಗಾಗಿಯೇ ಹಗಲಿರುಳೂ ದುಡಿವವರು. ಕುದುರೆಗಳ ಮೇಲೆ, ಇಲ್ಲವೇ ಢೋಲಿಗಳಲ್ಲಿ ಅಶಕ್ತರನ್ನು ಹಲವು ಮೈಲುಗಳಗಟ್ಟಲೇ (ಸುಮಾರು14 ಕಿ.ಮೀ) ದುರ್ಗಮ ದಾರಿಯಲ್ಲಿ ಹೆಗಲು, ಕುದುರೆಗಳ ಮೇಲೆಲ್ಲಾ ಹೊತ್ತೊಯ್ಯುವವರು. ಸಣ್ಣ ಪುಟ್ಟ ವ್ಯಾಪಾರ ಮಾಡುವವರು, ಆಹಾರ ಒದಗಿಸುವವರು, ಗ್ರಾಮೀಣ ಭಾಗದ ಸಾವಿರಾರು ಕೂಲಿಯಾಳುಗಳು. ಇವರ ಬದುಕೆಲ್ಲಾ ನುಚ್ಚು ನೂರಾಗಿ ಬೀದಿಗೆ ಬಿದ್ದಿದ್ದಾರೆ. ದುಡಿದರೆ ಗಂಜಿ ಎನ್ನುವ ಇವರಿಗೆ ದುಡಿಮೆಯೇ ಇಲ್ಲ. ನೆರೆಯಿಂದಾಗಿ ಕೃಷಿಯೂ, ನೀರಾವರಿ ವ್ಯವಸ್ಥೆಯೂ ಹಾಳಾಗಿ ರೈತರು, ಕೃಷಿ ಕೂಲಿಕಾರರು ದಿಕ್ಕೆಟ್ಟಿದ್ದಾರೆ. ಇವರಿಗೆಲ್ಲಾ ಅದೆನ್ನೆಲ್ಲಾ ಸರಿಪಡಿಸುವುದು ಹೇಗೆ ಮತ್ತು ವರುಷದ ಗಂಜಿಯ ಚಿಂತೆ. ಇದೆಲ್ಲಾ ಒಂದು ತಹ ಬಂದಿಗೆ ಬರಬೇಕೆಂದರೆ ವರುಷಗಳೇ ಹಿಡಿಯುವ ಅಂದಾಜು!. ಅಲ್ಲಿಯವರೆಗೆ ಜೀವ ಹಿಡಿಯುದಾದರೂ ಹೇಗೆ? ಹಾಗಾದರೆ ಇವರನ್ನೂ ಕಾಪಾಡುವುದು ಸರಕಾರದ, ಸಮಾಜದ ಹೊಣೆಯಲ್ಲವೇ? ಸದ್ಯಕ್ಕಂತೂ ದುಡಿದೇ ಉಣ್ಣಬೇಕಿರುವ ಇವರತ್ತ ಯಾರ ಚಿತ್ತವೂ ಹರಿದಿಲ್ಲವೆಂಬುದೇ ದುರಂತ.

ಎಂತಹ ಹೊಣೆ ಇವರದ್ದು?

ಅಲ್ಲಿಗೆ ಭೇಟಿ ನೀಡಿ ಫೋಜು ನೀಡುವ ನಾಯಕರೆಲ್ಲಾ ಇದರತ್ತ ಯೋಚಿಸಬೇಕಿದೆ. ಅಂಧಾದುಂಧಿ ನೂರಾರು ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಗಳಿಂದ, ಸೂಕ್ತ ರಕ್ಷಣಾ ಕ್ರಮಗಳಿಲ್ಲದ ನಿಸರ್ಗದ ಮೇಲಿನ ಅತ್ಯಾಚಾರದಿಂದ ದುಡ್ಡು ಎಣಿಸುವವರಿಗೆ ಹೊಣೆಯಿಲ್ಲವೇ? ಜೀವ, ಆಸ್ತಿಗಳ ಬಗೆಗಿನ ಆತಂಕಗಳನ್ನೇ ಬಂಡವಾಳ ಮಾಡಿಕೊಂಡಿರುವ ಖಾಸ ವಿಮಾ ಕಂಪನಿಗಳೀಗ (ಭಾರತೀಯ ಜೀ ವಿಮಾ ಕಂ. ಹೊರತು ಪಡಿಸಿ) ಸುಮಾರು 3500 ಕೋಟಿ ರೂ.ಗಳ ಪರಿಹಾರ ಕೊಡಬೇಕಾಗುವುದಲ್ಲಾ ಎಂದು ಮುಂಬೈನಲ್ಲಿ ಚಿಂತಿತವಾಗಿವೆಯಂತೆ!

ಲಾಭ-ನಷ್ಟಗಳ ಲೆಕ್ಕವಲ್ಲ

ಈ ಹಿನ್ನೆಲೆಯಲ್ಲಿ ಸರಕಾರದ ಹೊಣೆ ಹೆಚ್ಚಿನದು. ಮುಂಜಾಗರೂಕವಾಗಿ ಜನರನ್ನು ರಕ್ಷಿಸುವಲ್ಲಿ ಆಗಿರುವ ಪ್ರಮಾದಗಳ ಬಗ್ಗೆ, ಲೋಪದೋಷಗಳನ್ನು ಸರಿಪಡಿಸಿಕೊಳ್ಳುವದಾಗಬೇಕು. ಎಲ್ಲೆಡೆಗಳಿಂದ ಹರಿದು ಬರುವ ನೆರವನ್ನು ಸಮರ್ಥವಾಗಿ, ಸಮರ್ಪಕವಾಗಿ, ಪಾರದರ್ಶಕತೆಯಿಂದ ತೊಡಗಿಸುವುದಾಗಬೇಕು.

ಈ ರಾಷ್ಟ್ರೀಯ ಮಹಾ ಆಪತ್ತನ್ನು ಎದುರಿಸಲು ಎಲ್ಲರೂ ಕೈ ಜೋಡಿಸಬೇಕು. ಎಲ್ಲವನ್ನೂ ಲಾಭ ನಷ್ಟಗಳಲ್ಲೇ ಅಳೆಯುವ ವ್ಯಾಪಾರೀಕರಣದ ಕಾರ್ಪೋರೇಟ ಸಂಸ್ಕೃತಿಯೆದುರು ಮಾನವೀಯತೆಯ ಮಹಾನದಿ ಎಂದೂ ಬತ್ತದಿರಿರಲಿ.

ಕನಿಷ್ಠ ವೇತನಕ್ಕಾಗಿ ಅನುದಾನ
1994 ರಿಂದ ನೇಮಕಗೊಂಡ ನೌಕರರಿಗೆ ಅನುಮೋದನೆ ನೀಡಲು ಒತ್ತಾಯಿಸಿ

ಗ್ರಾಮ ಪಂಚಾಯತ್ ನೌಕರರ ಬೃಹತ್ ವಿಧಾನಸೌಧ ಚಲೋ

ಕರ್ನಾಟಕ ರಾಜ್ಯದಲ್ಲಿ 5,627 ಗ್ರಾಮ ಪಂಚಾಯತ್‌ಗಳಲ್ಲಿ ಗುಮಾಸ್ತ, ಕರ ವಸೂಲಿಗಾರ, ಗಣಕಯಂತ್ರ ಸಹಾಯಕ, ನೀರಗಂಟಿ, ಸಿಪಾಯಿ, ಕಸಗುಡಿಸುವವರು, ಚರಂಡಿ ಸ್ವಚ್ಛಗೊಳಿಸುವವರು ಎಂಬ ಹುದ್ದೆಗಳಲ್ಲಿ 50 ಸಾವಿರಕ್ಕಿಂತ ಹೆಚ್ಚಿನ ಜನ ಕೆಲಸ ನಿರ್ವಹಿಸುತ್ತಿದ್ದಾರೆ. ನೌಕರರ ಸತತ ಹೋರಾಟಗಳ ಫಲವಾಗಿ ಕರ್ನಾಟಕ ಸರ್ಕಾರವು ಈ ಎಲ್ಲಾ ನೌಕರರಿಗೆ ಫೆಬ್ರವರಿ 2011 ರಲ್ಲಿ ಕನಿಷ್ಟ ವೇತನ ನಿಗದಿಗೊಳಿಸಿ ವೇತನ ಪಾವತಿಸಲು ಆದೇಶ ಹೊರಡಿಸಿತ್ತು. ರಾಜ್ಯದಲ್ಲಿ ಗ್ರಾಮ ಪಂಚಾಯತ್‌ಗಳಲ್ಲಿ ಆದಾಯದ ಕೊರತೆ ಹಾಗೂ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಹಾಗೂ ಜನ ಪ್ರತಿನಿಧಿಗಳು ಪಂಚಾಯತ್ ಸಿಬ್ಬಂದಿಗೆ ವೇತನ ನೀಡಲು ತೋರುತ್ತಿರುವ ಅಸಡ್ಡೆ ಭಾವನೆಯಿಂದ ಒಂದು ವರ್ಷದಿಂದ ವೇತನ ಸಿಗದೆ ಹಲವಾರು ನೌಕರರ ಅತ್ಯಂತ ಕಷ್ಟದಲ್ಲಿ ಜೀವನ ಸಾಗಿಸುತ್ತಿದ್ದಾರೆ. ರಾಜ್ಯದ





4 ಕೋಟಿ ಜನರಿಗೆ ಕುಡಿಯಲು ನೀರನ್ನು ಸಮರ್ಪಕವಾಗಿ ಒದಗಿಸುವ 30 ಸಾವಿರ ನೌಕರರಿಗೆ ಕನಿಷ್ಟ ವೇತನವಿಲ್ಲದೆ, ಕೊಡುವ ಅಲ್ಪ ವೇತನ ಕೂಡ ಪ್ರತಿ ತಿಂಗಳು ಸಿಗದೆ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘಟನೆ(ಸಿಐಟಿಯು)ಯು ರಾಜ್ಯದ ಮೂರನೇ ಹಣಕಾಸು ಆಯೋಗವು ಶಿಫಾರಸ್ಸು ಮಾಡಿದಂತೆ ನೌಕರರಿಗೆ ವೇತನಕ್ಕೆ ಪ್ರತ್ಯೇಕ ಅನುದಾನ ನೀಡಲು ಒತ್ತಾಯಿಸುತ್ತಾ ಬಂದಿದೆ.

ಕಳೆದ ಬಿಜೆಪಿ ಸರ್ಕಾರವು 'ಉಮಾದೇವಿ ಪ್ರಕರಣ'ವನ್ನು ಮುಂದಿಟ್ಟುಕೊಂಡು 1994 ರಿಂದ ನೇಮಕಗೊಂಡವರು ಜಿಲ್ಲಾ ಪಂಚಾಯತ್ ಪೂರ್ವಾನುಮತಿ ಪಡೆದುಕೊಂಡಿರಬೇಕು. ಹಾಗೆ ಅನುಮತಿ ಪಡೆಯದೆ ನೇಮಕಗೊಂಡವರದ್ದು ಅಕ್ರಮ ನೇಮಕಾತಿಯೆಂದು ಆದೇಶ ಸರ್ಕಾರ ನೀಡಿದೆ.

ಮೈಸೂರಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ನೌಕರರ ಅನುಮೋದನೆ ಸಂಬಂಧ ಸ್ಪಷ್ಟೀಕರಣ ಕೇಳಿದಾಗ ಬಿಜೆಪಿ ಸರ್ಕಾರ ಸ್ಪಷ್ಟಿಕರಣ ನೀಡುವ ಹೆಸರಲ್ಲಿ ಸರ್ವೋಚ್ಚ ನ್ಯಾಯಲಯದ 'ಉಮಾದೇವಿ ಪ್ರಕರಣ'ದ ತೀರ್ಪನ್ನು ಉಲ್ಲೇಖ ಮಾಡಿ ಕಾನೂನು ಇಲಾಖೆಯ ಅಭಿಪ್ರಾಯ ಎನ್ನುತ್ತಾ ಈ ಆದೇಶ ನೀಡಿದೆ. ಇದರಿಂದಾಗಿ 1994ರಿಂದ ನೇಮಕಗೊಂಡ ನೌಕರರು ಅತಂತ್ರ ಸ್ಥಿತಿಯಲ್ಲಿದ್ದಾರೆ. ಗ್ರಾಮ ಪಂಚಾಯತಿ ಕಾಯ್ದೆಯ ಕಲಂ 113 ರ ಪ್ರಕಾರ ಗ್ರಾಮ ಪಂಚಾಯತಿಗಳಿಗೆ ನೀಡಿದ ದತ್ತ ಅಧಿಕಾರದ ಆಧಾರದಲ್ಲಿ ನೇಮಕಗೊಂಡ ಸಿಬ್ಬಂದಿಗಳ ನೇಮಕಾತಿಗೆ ಅನುಮೋದನೆ ನೀಡಿ ಸರ್ಕಾರ ಮಾನ್ಯತೆ ನೀಡಬೇಕು. ಮೈಸೂರು ಜಿಲ್ಲಾ ಪಂಚಾಯತಿಗೆ ನೀಡಿದ ಸ್ಪಷ್ಟೀಕರಣ ವಾಪಸ್ ಪಡೆಯಬೇಕು. ಸರ್ಕಾರ ಹಾಗೆ ಮಾಡದೇ ಇದ್ದಲ್ಲಿ ಅದು ನೌಕರರ ಜೀವನದ ಜೊತೆ ಚೆಲ್ಲಾಟ ಆಡಿದಂತೆ-ಯೇ ಸರಿ. ಕಾಂಗ್ರೆಸ್ ಸರ್ಕಾರವಾದರೂ ಕಾನೂನನ್ನು ನೊಂದ ನೌಕರರ ಪರವಾಗಿ ಸರಿಯಾಗಿ ಅರ್ಥೈಸಿ ನ್ಯಾಯ ನೀಡಲು ಮುಂದಾಗಬೇಕಿದೆ.

ಬಡ್ತಿ ಪ್ರಶ್ನೆ

ಗ್ರಾಮ ಪಂಚಾಯತ್ ನೌಕರರ ಸಂಘಟನೆಯ ಸತತ ಹೋರಾಟದಿಂದ ರಾಜ್ಯದ ಪಂಚಾಯತ್‌ಗಳಲ್ಲಿನ ಹಾಲಿ ನೌಕರರು ಗ್ರೇಡ್2 ಕಾರ್ಯದರ್ಶಿ ಹಾಗೂ ಲೆಕ್ಕ ಸಹಾಯಕ ಹುದ್ದೆಗೆ ನೇಮಕಾತಿ ಹೊಂದಿದ್ದರಿಂದ ತೆರವಾದ ಹುದ್ದೆಗಳಿಗೆ ಎಸ್‌ಎಸ್‌ಎಲ್‌ಸಿ ಪಾಸಾದ ನೀರಗಂಟಿ ಅಥವಾ ಇನ್ನಿತರ ಹುದ್ದೆಗಳಲ್ಲಿ ಕನಿಷ್ಟ 5 ವರ್ಷ ಸೇವೆ ಸಲ್ಲಿಸಿದ ನೌಕರರಿಗೆ ಬಡ್ತಿ ನೀಡಲು ಸರಕಾರ 2008ರಲ್ಲಿ ಆದೇಶ ಹೊರಡಿಸಿದೆ. ಅದಕ್ಕಾಗಿ ತಾಲ್ಲೂಕು ಮಟ್ಟದ ಈ ನೌಕರರ ಸಾಮಾನ್ಯ ಪಟ್ಟಿಯನ್ನು ತಯಾರಿಸಿ ತೆರವಾದ ಗುಮಾಸ್ತ ಅಥವಾ ಕರ ವಸೂಲಿಗಾರ ಹುದ್ದೆಗೆ ಬಡ್ತಿ ನೀಡಬೇಕೆಂದು ಸಂಘಟನೆ ಒತ್ತಾಯಿಸುತ್ತಿದೆ.

ಕಂಪ್ಯೂಟರ್ ಸಹಾಯಕರೆನ್ನಿ

ಈ ಹಿಂದೆ ಇದ್ದ ಸಿಬ್ಬಂದಿಯ 'ಸ್ಟಾಪಿಂಗ್ ಮಾದರಿ'ಯಲ್ಲಿ ಬೆರಳಚ್ಚುಗಾರ ಎಂದು ಇದ್ದು ಈಗ ಬೆರಳಚ್ಚು ಯಂತ್ರಗಳು ಹೋಗಿ ಅದರ ಸ್ಥಾನದಲ್ಲಿ ಕಂಪ್ಯೂಟರ್‌ಗಳು ಬಂದಿದ್ದು ಈಗ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಯಲ್ಲಿ ಅವು ಚಾಲ್ತಿಯಲ್ಲಿವೆ. ಇವುಗಳನ್ನು ಅಪರೇಟ್ ಮಾಡಲು ಪಂಚಾಯಿತಿಗೆ ಒಬ್ಬ ಸಹಾಯಕರನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲಾಗಿದೆ. ಬೆರಳಚ್ಚುಗಾರರ ಹುದ್ದೆಯನ್ನು ಬದಲಾಯಿಸಿ ಗಣಕಯಂತ್ರ ಸಹಾಯಕ ಎಂದು ಮಾರ್ಪಡಿಸಿ ಅವರನ್ನು ಮುಂದುವರೆಸುವ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕಾಗಿದೆ. ಈ ಕೆಲಸವನ್ನು ಸರ್ಕಾರ ಮಾಡದ್ದರಿಂದ ಪಂಚಾಯತ್‌ಗಳಲ್ಲಿ ಹೊರಗುತ್ತಿಗೆಗೆ ಅವಕಾಶವಾಗಿದ್ದು ಇನ್ನಾದರೂ ಸರ್ಕಾರದ ಈ ಜಡತ್ವ ಧೋರಣೆ ಹೋಗಬೇಕಿದೆ.

ಪಂಪ್ ಆಪರೇಟರ್‌ಗಳ ಸಂಕಷ್ಟ

ರಾಜ್ಯ ಇಂದು ತೀವ್ರ ವಿದ್ಯುತ್ ಕೊರತೆ ಎದುರಿಸುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ನಿರಂತರ ವಿದ್ಯುತ್ ಪೂರೈಕೆ ಆಗುತ್ತಿಲ್ಲ. ನೌಕರರು ಹಳ್ಳಿಗಳಿಗೆ ವಿದ್ಯುತ್ ಪೂ-ರೈಕೆ ಆಗುವುದನ್ನು ಹಗಲು-ರಾತ್ರಿ ಜಾತಕಪಕ್ಷಿಗಳಂತೆ ಕಾದು ಮಿನಿಟ್ಯಾಂಕ್‌ಗಳಿಗೆ ನೀರು ಸಂಗ್ರಹಣೆ ಮಾಡಬೇಕು. ಬತ್ತಿರುವ ನೆಲದಲ್ಲಿ ನೀರು ಸಿಗುವುದು ಕಷ್ಟವಾಗಿದೆ. ಪಂಚಾಯತಿಗಳ ಮೂಲಕ ರಾಜ್ಯದಲ್ಲಿ ಸುಮಾರು 4 ಕೋಟಿ ಜನರಿಗೆ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂಬ ಅಂದಾಜಿದೆ. ಇಷ್ಟೊಂದು ಕಷ್ಟವನ್ನು ಅನುಭವಿಸುವ ನೌಕರರಿಗೆ ಕನಿಷ್ಟ ವೇತನ ನಿಗದಿಯಾಗಿದ್ದರೂ ಅದು ಸಿಗುತ್ತಿಲ್ಲ. ಕೊಡುವ ಅಲ್ಪಸ್ವಲ್ಪ ವೇತನಕ್ಕಾಗಿ 6-12 ತಿಂಗಳವರೆಗೆ ಕಾಯಬೇಕಾದ ಪರಿಸ್ಥಿತಿ ಇದೆ.

ಎಲ್ಲಾ ನೌಕರರನ್ನು ಖಾಯಂ ಮಾಡಬೇಕು ಎಂಬುದು ಗ್ರಾಮ ಪಂಚಾಯತ್ ನೌಕರರ ಬಹುಕಾಲದ ಬೇಡಿ-ಕೆಯಾಗಿದೆ. ಅದನ್ನು ಸರ್ಕಾರ ಈಗಲಾದರೂ ಮಾಡಿದರೆ ರಾಜ್ಯದಲ್ಲಿ ಪಂಚಾಯತಿ ರಾಜ್ ವ್ಯವಸ್ಥೆಯನ್ನು ಬಲಪಡಿಸಿದಂತೆ ಆಗುತ್ತದೆ. ಕಾಲೇಜುಗಳಲ್ಲಿ ಪಾಠ ಮಾಡುವ ಅಧ್ಯಾಪಕರು ನಿಕೃಷ್ಟ ಸಂಬಳದಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಾ ಅಥವಾ ದಿನಗೂಲಿ ಆಧಾರದಲ್ಲಿ ಏಕಕಾಲದಲ್ಲಿ ಎರಡು-ಮೂರು ಕಾಲೇಜುಗಳಲ್ಲಿ ಕೆಲಸ ಮಾಡುತ್ತಾ ಅಲೆದಾಡುತ್ತಾ ಒದ್ದಾಡುತ್ತಿದ್ದರೆ ವಿದ್ಯಾರ್ಥಿಗಳಿಗೆ ಸರಿಯಾಗಿ ಪಾಠ ಹೇಳಿ ನ್ಯಾಯ ಸಲ್ಲಿಸಲು ಸಾಧ್ಯವೇ ? ಹಾಗೇ ಗ್ರಾಮ ಪಂಚಾಯತಿ ನೌಕರರು ಅತಂತ್ರ ಬದುಕು ಸಾಗಿಸುತ್ತಿದ್ದರೆ ಗ್ರಾಮದ ಜನರಿಗೆ

ಪುಟ 10 ಕ್ಕೆ

ಕನಿಷ್ಟ ವೇತನ ಜಾರಿ ಹೊಸ ಸರ್ಕಾರದ ತುರ್ತು ಕರ್ತವ್ಯ :


ಸೆಪ್ಟೆಂಬರ್ 9, 2009ರ ಮಹತ್ವದ ಹೋರಾಟ ಹಾಗೂ ನಂತರವೂ ನಿರಂತರ ಹೋರಾಟ ನಡೆಸಿದ ಫಲವಾಗಿ ಪಂಚಾಯತ್ ನೌಕರರಿಗೆ ಕನಿಷ್ಠ ವೇತನ ನಿಗದಿಗೊಳಿಸಿದ ಆದೇಶ ಪಡೆಯಲು ಸಾಧ್ಯವಾಗಿತ್ತು. ಈಗ ರಾಜ್ಯದಲ್ಲಿ ನೂತನ ಸರ್ಕಾರ ಅಧಿಕಾರಕ್ಕೆ ಬಂದಿದೆ. ಹಿಂದಿನ ಬಿಜೆಪಿ ಸರ್ಕಾರದ ವಿಶ್ವಾಸ ದ್ರೋಹಿ ದಾರಿಯಲ್ಲಿ ಹೋಗದೇ ಕಾಂಗ್ರೆಸ್ ಸರ್ಕಾರ ಪಂಚಾಯತ್ ನೌಕರರ ಬೇಡಿಕೆಗಳನ್ನು ಈಡೇರಿಸಬೇಕಿದೆ.

1.ವೇತನ ಹೆಚ್ಚಳ, ತುಟ್ಟಿಭತ್ಯೆ ಜೊತೆಗೂಡಿ ದೊರೆಯಬೇಕಿದೆ.

ಗುಮಾಸ್ತ, ಕರ ವಸೂಲಿಗಾರ, ಗಣಕಯಂತ್ರ ಸಹಾಯಕರಿಗೆ ಮೂಲವೇತನ	ರೂ. 4919-20
ಕಳೆದ ವರ್ಷ ತುಟ್ಟಿಭತ್ಯೆ ರೂ.816-00, 2013ರ ತುಟ್ಟಿಭತ್ಯೆ ರೂ 541-00	ರೂ. 1357-20
ಒಟ್ಟು	**ರೂ. 6276-40**
ಪಂಪ್ ಆಪರೇಟರ್, ಬಾಲವಾಡಿ ಶಿಕ್ಷಕಿ, ಮೂಲವೇತನ	ರೂ. 4808-70
ಕಳೆದ ವರ್ಷ ತುಟಿಭತ್ಯೆ, ರೂ.816-00. 2013ರ ತುಟ್ಟಿಭತ್ಯೆ ರೂ.541-00	ರೂ. 1357-20
ಒಟ್ಟು	**ರೂ. 6165-90**
ಜವಾನ, ಅಟೆಂಡರ್ ಮೂಲವೇತನ	ರೂ. 4507-00
ಕಳೆದ ವರ್ಷ ತುಟಿಭತ್ಯೆ ರೂ.816-00. 2013ರ ತುಟ್ಟಿಭತ್ಯೆ ರೂ. 541-00	ರೂ. 1357-20
ಒಟ್ಟು	**ರೂ. 5864-20**
ಕಸ ಗುಡಿಸುವವರು, ಸ್ವಚ್ಛತಾಗಾರ, ಮಾಲಿ, ಮೂಲವೇತನ	ರೂ. 3484-60
ಕಳೆದ ವರ್ಷ ರೂ.816-00 2013ರ ತುಟ್ಟಿಭತ್ಯೆ ರೂ. 541-00	ರೂ. 1357-30
ಒಟ್ಟು	**ರೂ. 4835-90**

ವೈದ್ಯ ವಿದ್ಯಾರ್ಥಿನಿ ಅಪಹರಣ–ಅತ್ಯಾಚಾರ
ಕರಾವಳಿಯಲ್ಲಿ ವ್ಯಾಪಕ ಪ್ರತಿಭಟನೆ, ಬಂದ್

ಜೂನ್ 20 ನಡೆದ ಮಣಿಪಾಲದ ವಿಶ್ವವಿದ್ಯಾನಿಲಯದ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಪ್ರಕರಣದ ಹಿನ್ನೆಲೆ ವಿದ್ಯಾರ್ಥಿನಿಯರಿಗೆ ರಕ್ಷಣೆ ನೀಡಲಾಗದ ಮತ್ತು ಅಪರಾಧಿಗಳನ್ನು ಶೀಘ್ರ ಪತ್ತೆಹಚ್ಚಲಾರದ ಪೋಲೀಸು ಇಲಾಖೆಯ ವೈಫಲ್ಯದ ವಿರುದ್ಧ ವಿದ್ಯಾರ್ಥಿಗಳು, ಮಹಿಳೆಯರು, ಸಾರ್ವಜನಿಕರು ಕರಾವಳಿಯಾದ್ಯಂತ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ.



ಕರಾವಳಿಯ ಖ್ಯಾತ ಸಾಹಿತಿಗಳಾದ ಸಾರಾ ಅಬೂಬಕರ್, ವೈದೇಹಿ ಮೊದಲಾದವರು ಶೀಘ್ರ ಪ್ರತಿಕ್ರಿಯೆ ನೀಡಿದ್ದು, ಕೂಡಲೇ ಅಪರಾಧಿಗಳನ್ನು ಪತ್ತೆ ಹಚ್ಚಿ ಕಾನೂನು ಕ್ರಮ ಕೈಗೊಳ್ಳಲು ಆಗ್ರಹಿಸಿದ್ದಾರೆ.

ಮಂಗಳೂರಿನಲ್ಲಿ ಎಸ್‌ಎಫ್‌ಐ ಪ್ರತಿಭಟನೆ:

ಜೂನ್ 23 ರಂದು ಎಸ್‌ಎಫ್‌ಐ ದ.ಕ. ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ ನಡೆಸಿತು. ಘಟನೆ ನಡೆದ 2 ದಿನಗಳ ಬಳಿಕವೂ ಅಪರಾಧಿಗಳನ್ನು ಪತ್ತೆ ಮಾಡಲು ಪೋಲೀಸರು ವಿಫಲರಾಗಿದ್ದಾರೆ ಎಂಬುದಾಗಿ ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಅನಂತ ನಾಯ್ಕ್ ದೂರಿದರು. ಕಾನೂನು ಪಾಲಿಸಬೇಕಾದ ಅಧಿಕಾರಿಗಳು ಅಪರಾಧಿಗಳನ್ನು ಸದೆ ಬಡಿಯುವ ಬದಲು ರಕ್ಷಣೆ ನೀಡುತ್ತಿದ್ದಾರೆಯೇ ಎಂಬ ಅನುಮಾನ ವ್ಯಕ್ತಪಡಿಸಿದರು. 24 ಗಂಟೆಗಳ ಒಳಗೆ ನಿಜ ಅಪರಾಧಿಗಳನ್ನು ಪೋಲೀಸರು ಬಂಧಿಸಲು ವಿಫಲರಾದರೆ, ಕರಾವಳಿಯ ಎರಡೂ ಜಿಲ್ಲೆಗಳಲ್ಲಿ ಶಾಲೆ ಕಾಲೇಜುಗಳನ್ನು ಬಂದ್ ಮಾಡಲು ಎಸ್‌ಎಫ್‌ಐ ಕರೆ ನೀಡಲಿದೆ ಎಂದು ಅವರು ಎಚ್ಚರಿಕೆ ನೀಡಿದರು.



ದಕ್ಷಿಣ ಕನ್ನಡ ಸಿಪಿಐ(ಎಂ) ಪ್ರತಿಭಟನೆ

ಎಸ್‌ಎಫ್‌ಐ ರಾಜ್ಯ ಸಮಿತಿ ಜತೆ ಕಾರ್ಯದರ್ಶಿ ಜೀವನ್ ರಾಜ್ ಕುತ್ತಾರ್ ಕೂಡಾ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಜಿಲ್ಲಾಧ್ಯಕ್ಷ ನಿತಿನ್ ಕುತ್ತಾರ್, ಜಿಲ್ಲಾ ಕಾರ್ಯದರ್ಶಿ ರಝಾಕ್ ಮೊಂಟೆಪದವು ಮತ್ತಿತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಮಂಗಳೂರಿನಲ್ಲಿ ಜೂನ್ 27 ರಂದು ಕಾಲೇಜು ಬಂದ್:

ಎಸ್‌ಎಫ್‌ಐ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜೂನ್ 27 ರಂದು ಮಂಗಳೂರು ನಗರದ ಶಾಲಾ ಕಾಲೇಜು ವಿದ್ಯಾರ್ಥಿಗಳು ಪ್ರತಿಭಟನಾರ್ಥವಾಗಿ ತರಗತಿ ಬಹಿಷ್ಕರಿಸಿ, ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಸಿದರು.

ಪ್ರತಿಭಟನಾಕಾರರನ್ನುದ್ದೇಶಿಸಿ ಜಿಲ್ಲಾ ಸಮಿತಿ ಅಧ್ಯಕ್ಷ ನಿತಿನ್ ಕುತ್ತಾರ್, ಮುಖಂಡರಾದ ಮಾಧುರಿ, ಹಂಝ ಕಿನ್ಯಾ, ಚರಣ್ ಪಂಜಿಮೊಗರು, ಡಿವೈಎಫ್‌ಐ ಮಂಗಳೂರು ನಗರ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಮಾತನಾಡಿದರು.

ಐದು ನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರತಿಭಟನಾ ಪ್ರದರ್ಶನದಲ್ಲಿ ಭಾಗವಹಿಸಿದ್ದು, ಅತ್ಯಾಚಾರ ಹಾಗೂ ಪೋಲೀಸ್ ನಿಷ್ಕ್ರಿಯತೆ ವಿರುದ್ಧ ಆಕ್ರೋಶಭರಿತ ಘೋಷಣೆ ಕೂಗಿದರು.

ಇದೇ ದಿನ ಸಾಯಂಕಾಲ ಜನವಾದಿ ಮಹಿಳಾ ಸಂಘಟನೆ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನ, ಜೂನ್ 28 ರಂದು ಡಿವೈಎಫ್‌ಐ ದ.ಕ. ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮಂಗಳೂರು ಪೋಲೀಸ್ ಕಮೀಷನರ್ ಕಚೇರಿ ಎದುರು ಪ್ರತಿಭಟನೆ ನಡೆದಿವೆ.

ಉಡುಪಿಯಲ್ಲಿ ಸಿಪಿಐ(ಎಂ) ಪ್ರತಿಭಟನೆ:

ಉಡುಪಿ ಬಸ್‌ಸ್ಟೇಂಡ್ ಬಳಿಯ ಕ್ಲಾಕ್ ಟವರಿನ ಮುಂಭಾಗದಲ್ಲಿ ಜೂನ್ 24 ರಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ವತಿಯಿಂದ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಬಾಲಕೃಷ್ಣ ಶೆಟ್ಟಿಯವರು ಮಾತನಾಡಿ, ವಿದ್ಯಾರ್ಥಿಗಳ ಸಂಬಂಧದಲ್ಲಿ ಮಣಿಪಾಲ ವಿಶ್ವವಿದ್ಯಾನಿಲಯ ಡೊನೇಶನ್ ವಸೂಲಿ ಹೊರತಾಗಿ ಭದ್ರತೆಯ ಜವಾಬ್ದಾರಿ ಹೊಂದಿಲ್ಲ; ಪೋಲೀಸರು ತ್ವರಿತ ತನಿಖೆ ಕೈಗೊಳ್ಳುವಲ್ಲಿ ಹಾಗೂ ಪ್ರಕರಣದ ರಹಸ್ಯ ಭೇದಿಸುವಲ್ಲಿ ವಿಫಲರಾಗಿದ್ದಾರೆ ಎಂದು ಟೀಕಿಸಿದರು.

ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಅನಂತ ನಾಯ್ಕ್ ಅವರು ಕೂಡಾ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.

ಮಂಗಳೂರಿನಲ್ಲಿ ಸಿಪಿಐ(ಎಂ) ಪ್ರತಿಭಟನೆ:

ಜೂನ್ 25 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಏರ್ಪಡಿಸಿದ ಪ್ರತಿಭಟನಾ



ದ.ಕನ್ನಡ ಎಸ್‌ಎಫ್‌ಐ ಪ್ರತಿಭಟನೆ

ಪ್ರದರ್ಶನವನ್ನು ಉದ್ದೇಶಿಸಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಮಾತನಾಡಿದರು.

ಜಗತ್ತಿನ ವಿವಿಧ ಭಾಗಗಳಿಂದ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ಮಣಿಪಾಲಕ್ಕೆ ಬರುತ್ತಾರೆ. ಅಂತಹ ಪ್ರದೇಶದಲ್ಲಿಯೇ ವಿದ್ಯಾರ್ಥಿಗಳಿಗೆ ಭದ್ರತೆ ಇಲ್ಲ ಎಂಬುದು ಸಾಬೀತಾಗಿದೆ. ರಾಜ್ಯದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಿಗೆ ಭದ್ರತೆ ನೀಡುವುದು ಸರ್ಕಾರ ಹಾಗೂ ವಿದ್ಯಾಲಯದ ಜವಾಬ್ದಾರಿಯಾಗಿದೆ ಎಂದು ಅವರು ಹೇಳಿದರು.

ಉಜಿರೆಯಲ್ಲಿ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ನೈಜ ಆರೋಪಿಯನ್ನು ಪೋಲೀಸರು ಈವರೆಗೂ ಪತ್ತೆ ಮಾಡಿಲ್ಲ. ಇದೀಗ ಮಣಿಪಾಲದಲ್ಲಿ ನಡೆದ ಘಟನೆಯಲ್ಲೂ ತನಿಖೆಯ ವೈಫಲ್ಯ ಪೋಲೀಸರ ಕ್ಷಮತೆ ಬಗ್ಗೆ ಪ್ರಶ್ನಿಸುವಂತೆ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಕೆ.ಆರ್.ಶ್ರೀಯಾನ್ ಅವರನ್ನೊಳಗೊಂಡು ಸಿಪಿಐ(ಎಂ) ದ.ಕ. ಜಿಲ್ಲಾ ಸಮಿತಿ ಸದಸ್ಯರು ಭಾಗವಹಿಸಿದ್ದರು.

ಉಡುಪಿಯಲ್ಲಿ ವಿಮಾ ನೌಕರ ಸಂಘದಿಂದ ಪ್ರತಿಭಟನೆ:

ಅಖಿಲ ಭಾರತ ವಿಮಾ ನೌಕರರ ಸಂಘಕ್ಕೆ ಸೇರಿದ ಉಡುಪಿ ನಗರದ ಎಲ್‌ಐಸಿ ನೌಕರರು ಜೂನ್ 25 ರಂದು ಉಡುಪಿ ಅಜ್ಜರಕಾಡಿನ ವಿಭಾಗೀಯ ಕಚೇರಿಯಿಂದ ಸರ್ವಿಸ್ ಬಸ್ ನಿಲ್ದಾಣದ ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ದೇಶದ ಪ್ರಗತಿ–ಆರ್ಥಿಕ ಬೆಳವಣಿಗೆಯಲ್ಲಿ ಮಹಿಳೆಯರ ಬಹುದೊಡ್ಡ ಕೊಡುಗೆ ಇದೆ. ಇದೇ ಕಾರಣಕ್ಕೆ ಮಹಿಳೆಯರು ಉದ್ಯೋಗ, ವಿದ್ಯಾಭ್ಯಾಸಕ್ಕಾಗಿ ಮನೆಯಿಂದ ಹೊರಗೆ ಹೋಗುತ್ತಾರೆ. ಇಂತಹ ಮಹಿಳೆಯರಿಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಅವರು ಆಗ್ರಹಿಸಿದರು.

ಉಡುಪಿ ವಿಮಾ ನೌಕರರ ಸಂಘ… ಅಧ್ಯಕ್ಷ ಕೆ.ವಿಶ್ವನಾಥ್, ಕಾರ್ಯದರ್ಶಿ ಯು. ಗುರುದತ್, ಮಹಿಳಾ ವಿಭಾಗದ ಸಂಚಾಲಕಿ ನಿರ್ಮಲ, ವಿಮಾ ಪಿಂಚಣಿದಾರರ ಸಂಘದ ಅಧ್ಯಕ್ಷ ಕೆ.ರಾಘವೇಂದ್ರ ಭಟ್, ಪ್ರಧಾನ ಕಾರ್ಯದರ್ಶಿ ಎ.ಎಂ.ಬಲ್ಲಾಳ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸಿಪಿಐ(ಎಂ) ಮುಖಂಡ ಎಂ.ಮಾರಪ್ಪ ನಿಧನ:

ಸಿಪಿಐ(ಎಂ) ಬಂಟ್ವಾಳ ತಾಲೂ… ಸಮಿತಿ ಸದಸ್ಯರು ಹಾಗೂ ರೈತ ಸಂಘ… ಕಾರ್ಯಕರ್ತರಾಗಿದ್ದ ಎಂ.ಮಾರಪ್ಪ ಅವ… ಜೂನ್ 17 ರಂದು ಅನಾರೋಗ್ಯದಿಂ… ನಿಧನರಾಗಿದ್ದಾರೆ. ಅವರಿಗೆ 67 ವರ್ಷ… ವಯಸ್ಸಾಗಿತ್ತು.

ಎಳೆಯ ವಯಸ್ಸಿನಲ್ಲಿಯೇ ಮಾರಪ್ಪನವರ… ರೈತ ಸಂಘದ ಚಳುವಳಿಗಳಲ್ಲಿ ಭೂ… ಮಸೂದೆ ಜಾರಿಗಾಗಿ ಭೂಮಾಲಕ… ವಿರುದ್ಧ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. 1969 ರಿಂದ ಸಿಪಿಐ(ಎಂ… ಸದಸ್ಯರಾಗಿದ್ದ ಮಾರಪ್ಪನವರು, 1986 ರಲ್ಲಿ ಕರಿಯಂಗಳ ಮಂಡಲ ಪಂಚಾಯತ… ಸದಸ್ಯರಾಗಿ ಆಯ್ಕೆಯಾಗಿದ್ದರು. ಪೊಳಲಿ… ಸೇವಾ ಸಹಕಾರಿ ಸಂಘದ ನಿರ್ದೇಶಕರಾಗಿ, ಪಾಣೆಮಂಗಳೂರು ಫಿರ್ಕಾ ಬೀಡಿ… ಕೆಲಸಗಾರರ ಸಂಘದ ಅಧ್ಯಕ್ಷರಾಗಿ, ಕರ್ನಾಟಕ… ಪ್ರಾಂತ ರೈತ ಸಂಘದ ಬಂಟ್ವಾಳ ತಾಲೂ… ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಪ್ರಸ್ತುತ ಕರಿಯಂಗಳ ಗ್ರಾಮ ಪಂಚಾಯತ್… ಸದಸ್ಯರಾಗಿ ಗ್ರಾಮೀಣ ಉದ್ಯೋಗ ಖಾತ್ರಿ… ಯೋಜನೆ ಹಾಗೂ ನಿವೇಶನ ರಹಿತರ… ಹೋರಾಟಕ್ಕೆ ನೇತೃತ್ವ ನೀಡಿದ್ದರು.

ಇವರ ನಿಧನ ವಾರ್ತೆ ತಿಳಿದು… ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ… ಕೆ.ಆರ್.ಶ್ರೀಯಾನ್ ಹಾಗೂ ಸಿಪಿಐ(ಎಂ) ಮುಖಂಡರು ಅವರ ಮನೆಗೆ ಭೇಟಿ ಇತ್ತು… ಗೌರವ ಸಲ್ಲಿಸಿರುತ್ತಾರೆ.

ಜುಲೈ 8 ರಂದು ರಾಜ್ಯಾದ್ಯಂತ ಪ್ರತಿಭಟನೆಗೆ ಸಿಪಿಐ(ಎಂ) ಕರೆ

ಉಡುಪಿ ಶ್ರೀಕೃಷ್ಣ ಮಠದಲ್ಲಿ ಮತ್ತು ರಾಜ್ಯದ ಇತರ ದೇವಸ್ಥಾನಗಳಲ್ಲಿ ಚಾಲ್ತಿಯಲ್ಲಿರುವ ಪಂಕ್ತಿಭೇದ ಹಾಗೂ ಮಡೆಸ್ನಾನ ಪದ್ಧತಿಗಳನ್ನು ನಿಷೇಧಿಸಬೇಕು, ಉಡುಪಿಯಲ್ಲಿ ಹೋರಾಟಗಾರರ ಮೇಲೆ ಹಾಕಿರುವ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು. ಬಜೆಟ್‌ನಲ್ಲಿ ಜನಸಂಖ್ಯೆಯನ್ನು ಆಧರಿಸಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಅನುದಾನ ಹೆಚ್ಚಿಸಬೇಕು, ವಿಶೇಷ ಘಟಕ ಯೋಜನೆ ಅನುಷ್ಠಾನಕ್ಕೆ ಪ್ರತ್ಯೇಕ ಕಾನೂನು ಜಾರಿಗೊಳಿಸಬೇಕು, ಖಾಸಗಿ ರಂಗದಲ್ಲಿ ಮೀಸಲಾತಿ ಜಾರಿ ಮಾಡಬೇಕು ಮೊದಲಾದ ಬೇಡಿಕೆಗಳಿಗೆ ಒತ್ತಾಯಿಸಿ ಇದೇ ಜುಲೈ 8ರಂದು ರಾಜ್ಯಾದ್ಯಂತ ತಾಲ್ಲೂಕು ಕೇಂದ್ರಗಳಲ್ಲಿ ಧರಣಿ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಬೇಕೆಂದು ಸಿ.ಪಿ.ಐ.(ಎಂ)ಪಕ್ಷ ರಾಜ್ಯ ಕಾರ್ಯದರ್ಶಿ ಮಂಡಳಿ ಕರೆ ನೀಡಿದೆ. ಅಂದು ಸಿಪಿಐ(ಎಂ), ದಲಿತ ಹಕ್ಕುಗಳ ಸಮಿತಿ ನೇತೃತ್ವ ವಹಿಸಲಿವೆ.

ಗಣಿ ಹಗರಣ: ಕರ್ನಾಟಕದ ಅದಿರು ನುಂಗಿದ ಗುಜರಾತ್ ಮೋದಿ ವರ್ತಕರು

ಲೂಟಿಯಾದ ಅದಿರಿನ ಹಣ ಲೋಕಾಯುಕ್ತರ ಲೆಕ್ಕಕ್ಕಿಂತಲೂ 8 ಪಟ್ಟು ಹೆಚ್ಚು! ಸರ್ಕಾರದ ಬೊಕ್ಕಸಕ್ಕೆ 1 ಲಕ್ಷ ಕೋಟಿಗೂ ಹೆಚ್ಚು ಹಣ ನಷ್ಟ, ಅಲ್ಲದೆ ರೂ. 2000 ಕೋಟಿ ವ್ಯಾಟ್ ತೆರಿಗೆ ವಿಧಿಸಿಲ್ಲ!

ಹರ್ಷವರ್ಧನ .ಪಿ

ಬಿಜೆಪಿ ಸರ್ಕಾರದ ಅವಧಿಯಲ್ಲಿ ಬಳ್ಳಾರಿ ಜಿಲ್ಲೆಯಿಂದ ಸರ್ಕಾರದ ಕಣ್ಣು ತಪ್ಪಿಸಿ ರಾಜಧನ ವಂಚಿಸಿ ಅಕ್ರಮವಾಗಿ ಹೊರದೇಶಕ್ಕೆ ರಫ್ತಾದ ಅದಿರಿನ ಮೊತ್ತವನ್ನು ಲೋಕಾಯುಕ್ತರು 2011 ರ ವರದಿಯಲ್ಲಿ 2006–10 ರ ಅವಧಿಯಲ್ಲಿ ಸುಮಾರು ರೂ. 12,228 ಕೋಟಿ ಹಣ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿದೆ ಎಂದು ತಿಳಿಸಿದ್ದರು. ಆ ವರದಿಯ ಆಧಾರದ ಮೇಲೆ ಯಡಿಯೂರಪ್ಪ ಮತ್ತು ಇತರ ಘಟಾನುಘಟಿ ಸಚಿವರು ಜೈಲು ಸೇರಿದ್ದರು. ಆದರೀಗ 'ದಿ ಹಿಂದೂ' ಪತ್ರಿಕೆಯು ಕಳೆದ 6 ತಿಂಗಳು ನಡೆಸಿರುವ ತನಿಖೆಯಲ್ಲಿ ಸರ್ಕಾರದ ಬೊಕ್ಕಸಕ್ಕೆ ರೂ. 1 ಲಕ್ಷ ಕೋಟಿಗೂ ಹೆಚ್ಚು ಹಣ ನಷ್ಟವಾಗಿರುವುದು ಕಂಡು ಬಂದಿದೆ.

ಅಕ್ರಮ ಗಣಿಗಾರಿಕೆ ಕುರಿತು ಲೋಕಾಯುಕ್ತರ ಲೆಕ್ಕಾಚಾರ

ಲೋಕಾಯುಕ್ತ ವರದಿ ಪ್ರಕಾರ 2006–10ರ ಅವಧಿಯಲ್ಲಿ 12.57 ಕೋಟಿ ಟನ್ ಅದಿರನ್ನು ಕರ್ನಾಟಕದ ಬಂದರುಗಳ ಮೂಲಕ ರಫ್ತು ಮಾಡಲಾಗಿತ್ತು. ಇದರಲ್ಲಿ 9.58 ಕೋಟಿ ಟನ್ ಅದಿರು ಪರವಾನಗಿ ಪಡೆದು ರಫ್ತಾಗಿದ್ದರೆ, 2.98 ಕೋಟಿ ಟನ್ ಪರವಾನಗಿಯಿಲ್ಲದೆ ಅಕ್ರಮವಾಗಿ ರಫ್ತಾಗಿತ್ತು. ಈ ಅಂಕಿ ಅಂಶಗಳನ್ನು ಲೆಕ್ಕಾಚಾರ ಮಾಡಲು ಲೋಕಾಯುಕ್ತರು ಸರ್ಕಾರದಿಂದ ಗಣಿ ಪರವಾನಗಿ ನೀಡಿರುವುದು ಮತ್ತು ಕಸ್ಟಮ್ಸ್ ಇಲಾಖೆಯ ಗಮನಕ್ಕೆ ತಂದು ಬಂದರುಗಳ ಮೂಲಕ ರಫ್ತಾಗಿರುವ ಅಂಕಿಗಳನ್ನು ಅವಲಂಬಿಸಿದ್ದರು.

ಲೋಕಾಯುಕ್ತರ ಲೆಕ್ಕಕ್ಕಿಂತ 8 ಪಟ್ಟು ಅದಿರು ಲೂಟಿ:

ಆದರೆ, ಹೊಸ ತನಿಖೆಯ ಲೆಕ್ಕಾಚಾರಗಳು ಬೇರೆಯದೇ ಚಿತ್ರಣ ನೀಡುತ್ತವೆ. ಇದೇ ಅವಧಿಯಲ್ಲಿ ಬಳ್ಳಾರಿಯಿಂದ ರಸ್ತೆ ಮತ್ತು ರೈಲು ಮುಖೇನ ಸಾಗಿಸಲಾಗಿರುವ ಅದಿರಿನ ಮೊತ್ತವನ್ನು ರೈಲ್ವೇ ಇಲಾಖೆಯು ಸಿಬಿಐ ಮತ್ತು ಕರ್ನಾಟಕ ವ್ಯಾಪಾರ ತೆರಿಗೆ ಇಲಾಖೆಗಳಿಗೆ ನೀಡಿರುವ ಅಂಕಿಅಂಶಗಳು ಲೋಕಾಯುಕ್ತರ ವರದಿ ಅಂಕಿ ಅಂಶಗಳನ್ನು ಮೀರುತ್ತವೆ. ಅದರಂತೆ, 2006–10 ರ ನಡುವೆ ಒಟ್ಟು 20 ಕೋಟಿ ಟನ್ ಬಳ್ಳಾರಿಯಿಂದ 6 ರೈಲ್ವೇ ಸ್ಟೇಷನ್‌ಗಳು ಮತ್ತು 14 ರೈಲ್ವೇ ಸೈಡಿಂಗ್ಸ್‌ಗಳ ಮೂಲಕ ಸಾಗಿಸಲ್ಪಟ್ಟಿದೆ. ಅಲ್ಲದೆ 2009 ಸೆಪ್ಟೆಂಬರ್ ನಿಂದ ಜೂನ್ 2010 ರವರೆಗೆ ಕನಿಷ್ಠ 14 ಕೋಟಿ ಟನ್ ಅದಿರನ್ನು ಬಳ್ಳಾರಿಯಿಂದ ಲಾರಿಗಳು ಸಾಗಿಸಿವೆ. ಈ ಅವಧಿಯಲ್ಲೇ ರೆಡ್ಡಿ ಸಹೋದರರು ಯಡಿಯೂರಪ್ಪನವರ ವಿರುದ್ಧ ಜಗಳಕ್ಕೆ ಇಳಿದಿದ್ದರು. ಈ ಜಗಳ ತಾವು ಅಕ್ರಮವಾಗಿ ನಡೆಸುತ್ತಿರುವ ಗಣಿಗಾರಿಕೆಯನ್ನು ಮುಚ್ಚುವ ಪರದೆ–ಯಾಗಿತ್ತು. ಸಿಬಿಐ ಅಧಿಕಾರಿಗಳು ತಿಳಿಸಿರುವಂತೆ ದಿನವೊಂದಕ್ಕೆ ಕನಿಷ್ಠ 20,000 ಲಾರಿಗಳು ಬಳ್ಳಾರಿಯಲ್ಲಿ ಅದಿರು ಸಾಗಿಸುತ್ತಿದ್ದವು. ಹೀಗೆ ಬಳ್ಳಾರಿಯಿಂದ ಒಟ್ಟು 35 ಕೋಟಿ ಟನ್ ಅದಿರು ಸಾಗಿಸಲಾಗಿದ್ದು, ಅದರಲ್ಲಿ 9.58 ಕೋಟಿ ಟನ್ ಪರವಾನಗಿ ಪಡೆದಿದ್ದರೆ, ಉಳಿದ 25 ಕೋಟಿ ಟನ್ ಅಕ್ರಮವಾಗಿ ಸಾಗಿಸಿದ್ದು, ಪ್ರತಿ ಟನ್ ಅದಿರಿಗೆ ರೂ. 4,103 ರಂತೆ ಅಕ್ರಮವಾಗಿ ಸಾಗಿಸಿರುವ ಅದಿರಿನ ಮೊತ್ತ ರೂ. 1 ಲಕ್ಷ ಕೋಟಿಗೂ ಹೆಚ್ಚಾಗುತ್ತದೆ.

ಅಕ್ರಮವಾಗಿ ಸಾಗಿಸಿರುವ ಅದಿರು ಎಲ್ಲಿಗೆ ಹೋಗಿದೆ?

ಪರವಾನಗಿ ಪಡೆದು ರಫ್ತಾಗಿರುವ ಅದಿರಿನ ಅಂಕಿಅಂಶಗಳನ್ನು ಲೋಕಾಯುಕ್ತರು ಕಸ್ಟಮ್ಸ್ ಇಲಾಖೆಯಿಂದ ಪಡೆದಿದ್ದಾರೆ, ಅದು ಸರಿಯಿದೆ ಎನ್ನುತ್ತಾರೆ ಕಸ್ಟಮ್ಸ್ ಅಧಿಕಾರಿಗಳು. ಆದರೆ, ಪರವಾನಗಿ ಪಡೆಯದೇ ಅಕ್ರಮವಾಗಿ ಸಾಗಿಸಲ್ಪಟ್ಟ ಅದಿರು "ರಫ್ತಿಗಾಗಿ" ಎಂದು ಗುರುತು ಹಚ್ಚಿಕೊಂಡಿದ್ದರೂ ವಾಸ್ತವವಾಗಿ ದೇಶದೊಳಗೇ ಹಂಚಿಕೆಯಾಗಿದೆ ಎನ್ನುತಾರೆ ಅದೇ ಅಧಿಕಾರಿಗಳು. ಅಲ್ಲದೆ, ಇಷ್ಟು ದೊಡ್ಡ ಪ್ರಮಾಣದ ಅಕ್ರಮ ಅದಿರು ಸಾಗಣೆಯಾಗುವಾಗ ಅದನ್ನು ಹಿಡಿದು ವ್ಯಾಪಾರ ತೆರಿಗೆ ಇಲಾಖೆ ಅಧಿಕಾರಿಗಳು ವ್ಯಾಪಾರ ತೆರಿಗೆ ಹಾಕಿದ್ದಲ್ಲಿ ಅದರ ಮೊತ್ತವೇ ರೂ. 2000 ಕೋಟಿ ಆಗುತ್ತಿತ್ತು. ಆದರೂ ಅವರು ಏಕೆ ತೆರಿಗೆ ವಿಧಿಸಲಿಲ್ಲ?

ಗುಜರಾತ್ ರಾಜ್ಯದಲ್ಲಿ ಬಳ್ಳಾರಿ ಅದಿರು!

ಜೊಸೆಪಟ್ ಆಂಡ್ರ್ಯೂಸ್ ಎಂಬ ಕೇಂದ್ರದ ವ್ಯಾಪಾರ ತೆರಿಗೆ ಇಲಾಖೆ ಕಮಿಷನರ್ 2010 ಜನವರಿಯಲ್ಲಿ ಬಳ್ಳಾರಿಯಿಂದ



ಸಾಗಿಸಲ್ಪಟ್ಟಿದ್ದ ಗುಜರಾತ್‌ನ ಕುಚ್ ಪ್ರದೇಶದಲ್ಲಿ ಸಂಗ್ರಹಿಸಿಡಲಾಗುತ್ತಿದ್ದ ದೊಡ್ಡ ಪ್ರಮಾಣದ ಅದಿರನ್ನು ಪತ್ತೆ ಮಾಡಿದರು. ಈ ಕುರಿತು ವಿವರಗಳನ್ನು ತನ್ನ ಮೇಲಧಿಕಾರಿಗೆ ಕಳುಹಿಸಿರುವ ಪತ್ರ 'ದಿ ಹಿಂದೂ' ಬಳಿಯಿದೆ. ಅದಿರಿನ ಚೀಲಗಳ ಮೇಲೆ 'ರಫ್ತಿಗಾಗಿ' ಎಂದು ಗುರುತು ಮಾಡಲಾಗಿತ್ತು. ಬಳ್ಳಾರಿಯ 119 ವ್ಯಾಪಾರಿಗಳಿಂದ ರೂ. 775 ಕೋಟಿ ಮೌಲ್ಯದ ಅದಿರು ಕೊಂಡುಕೊಂಡಿದ್ದ ಸುಮಾರು 10 ಡೀಲರ್‌ಗಳನ್ನು ಅವರು ಪ್ರಶ್ನಿಸಿದರು. ಗುಜರಾತ್ ಮೂಲದ ಗ್ಯಾಲಂಟ್ ಮೆಟಲ್ ಲಿ. ಕಂಪನಿಯು ಮೊದಲಿಗೆ ತಾನು ರೂ. 86.54 ಕೋಟಿ ಮೊತ್ತದ ಅದಿರು ಕೊಂಡಿದ್ದೇನೆಂದು ಹೇಳಿತ್ತು, ಆದರೆ ಆ ಕಂಪನಿಯ ಬ್ಯಾಲೆನ್ಸ್ ಷೀಟ್ ಪರಿಶೀಲಿಸಿದಾಗ ಅದು ರೂ. 289.57 ಕೋಟಿ ಮೊತ್ತದ ಅದಿರು ಪಡೆದಿತ್ತು. ಅದೇ ರೀತಿ ಎಸ್‌ಎಲ್ ಸ್ಟೀಲ್ ಲಿ ಕಂಪನಿಯು ರೂ. 11.39 ಕೋಟಿ ಮೌಲ್ಯದ ಅದಿರು ಪಡೆದಿದ್ದೇನೆಂದು ವರದಿ ಮಾಡಿದ್ದರೂ ವಾಸ್ತವವಾಗಿ ರೂ. 250 ಕೋಟಿ ಮೊತ್ತದ ಅದಿರನ್ನು ಬಳ್ಳಾರಿಯಿಂದ ಪಡೆದಿತ್ತು. ಆದರೆ ಆಂಡ್ರ್ಯೂಸ್ ರವರು ಪರಿಶೀಲನೆಗೆ ತೆರಳುವ ಕಾಲಕ್ಕೆ ಹಲವು ಕಂಪನಿಗಳು ಮುಚ್ಚಿ ಹೋಗಿದ್ದವು. ಅಂದಿನ ಮುಖ್ಯಮಂತ್ರಿ ವೈ.ಎಸ್. ರಾಜಶೇಖರರೆಡ್ಡಿಯ ಭಾವಮೈದುನ ದುಶ್ಯಂತ್ ರೆಡ್ಡಿ ಮಾಲೀಕತ್ವದ ವಿಜಯ ಲೀಸಿಂಗ್ ಕಂಪನಿ ಮಾತ್ರ ಇನ್ನೂ ಕಾರ್ಯನಿರ್ವಹಿಸುತ್ತಿತ್ತು.

ಆಂಡ್ರ್ಯೂಸ್‌ರವರು ಕಂಪನಿಗಳು ಈ ರೀತಿ ಅಕ್ರಮವಾಗಿ ಅದಿರು ಸಾಗಿಸುತ್ತಾ ವ್ಯಾಟ್ ತೆರಿಗೆ ವಂಚಿಸುತ್ತಿರುವ ಕುರಿತ ವಿಷಯವನ್ನು ವ್ಯಾಪಾರ ತೆರಿಗೆ ಕಮೀಷನರ್ ಪ್ರದೀಪ್ ಸಿಂಗ್ ಖರೋಲ ರವರ ಗಮನಕ್ಕೆ ತಂದಿದ್ದಾರೆ. ಆದರೆ ಅವರು ಯಾವುದೇ ಕ್ರಮಕೈಗೊಂಡಿಲ್ಲ. ಬದಲಿಗೆ ಆಂಡ್ರ್ಯೂಸ್ ರವರಿಗೆ ಜೀವ ಬೆದರಿಕೆ ಬಂದಿತ್ತು.

'ರಿಪಬ್ಲಿಕ್(!?) ಆಫ್ ಬಳ್ಳಾರಿ:'

ಒಂದು ಮಧ್ಯಾಹ್ನ ಅಂದಿನ ಮುಖ್ಯಮಂತ್ರಿ ವೈ.ಎಸ್. ರಾಜಶೇಖರರೆಡ್ಡಿಯ ಭಾವಮೈದುನ ದುಶ್ಯಂತ್ ರೆಡ್ಡಿ ಮಾಲೀಕತ್ವದ ವಿಜಯ ಲೀಸಿಂಗ್ ಕಂಪನಿಗೆ ಆಂಡ್ರ್ಯೂಸ್ ಭೇಟಿ ನೀಡಿದ್ದಾಗ ಅವರಿಗೆ ಕೂಡ್ಲಗಿ ಎಂಎಲ್‌ಎ ಬಿ. ನಾಗೇಂದ್ರ ರವರಿಂದ ಫೋನ್ ಬಂತು. ಅವರು 'ಈ ಕಂಪನಿ ಬಿಗ್‌ಬಾಸ್ ಪ್ರವಾಸೋದ್ಯಮ ಮಂತ್ರಿ ಜಿ. ಜನಾರ್ಧನ ರೆಡ್ಡಿಯವರಿಗೆ ಸೇರಿದ್ದು, ಏನನ್ನೂ ತಪಾಸಣೆ ಮಾಡದೆ ಆಚೆ ಹೋಗಬೇಕು' ಎಂದು ಆಂಡ್ರ್ಯೂಸ್‌ಗೆ ತಾಕೀತು ಮಾಡಿದರು. ಕೆಲವೇ ನಿಮಿಷಗಳಲ್ಲಿ ರೆಡ್ಡಿಯ ಸಹಚರ ಮೆಹಫೌಜ್ ಅಲಿ ಖಾನ್ ಎರಡು ಬಾರಿ ಕರೆ ಮಾಡಿದ. ನಂತರ ಅಲ್ಲಿಯ ಎಸ್‌ಪಿ ಮತ್ತು ಡಿಸಿ ಗಳು ಕೂಡ ಇವರಿಗೆ ಕರೆ ಮಾಡಿದರು. ಇದಾದ ಮೇಲೆ ಆಂಡ್ರ್ಯೂಸ್ ಕಂಪನಿಯ ಆವರಣದಿಂದ ಹೊರಬಂದರು. ವಿಜಯ ಲೀಸಿಂಗ್ ಕಂಪನಿಯು ವೋಲ್ಸಾಪ್ ಕಂಪನಿಗೆ ಅಕ್ರಮವಾಗಿ ಅದಿರು ಮಾರುತ್ತಿದ್ದು, ಸರ್ಕಾರಕ್ಕೆ ವ್ಯಾಟ್ ತೆರಿಗೆ ಕಟ್ಟುತ್ತಿರಲಿಲ್ಲ ಎಂದು ತಮ್ಮ ಪತ್ರದಲ್ಲಿ ಆಂಡ್ರ್ಯೂಸ್ ಬರೆದಿದ್ದಾರೆ.

ಇಡೀ ಹಗರಣದ ಲೂಟಿಯ ಮೊತ್ತ, ಇದರಲ್ಲಿ ಭಾಗಿಯಾಗಿರುವವರ ಕುರಿತು ಸ್ಪಷ್ಟ ಚಿತ್ರಣ ದೊರೆಯಬೇಕಾದರೆ ಕೇಂದ್ರ ಸರ್ಕಾರದ ಹಂತದಲ್ಲಿ ಉನ್ನತ ಮಟ್ಟದ ತನಿಖೆ ಆಗದ ಹೊರತು ಲೋಕಾಯುಕ್ತ ತನಿಖೆಯಿಂದ ಪೂರ್ಣ ಚಿತ್ರಣ ಸಿಗದು ಎನ್ನುತ್ತದೆ 'ದಿ ಹಿಂದೂ' ಪತ್ರಿಕಾ ತನಿಖೆ.


ನಮ್ಮ ಮುಂದಿರುವ ಪ್ರಶ್ನೆಗಳು:

2006 ರಿಂದ 2010ರವರೆಗೆ ಅಕ್ರಮ ಅದಿರನ್ನು ಹಿಡಿದಿದ್ದಲ್ಲಿ ಸುಮಾರು ರೂ. 2000 ಕೋಟಿ ವ್ಯಾಟ್ ತೆರಿಗೆ ಸಿಗುತ್ತಿತ್ತು, ಆದರೆ ಕೇವಲ ರೂ. 50 ಕೋಟಿ ತೆರಿಗೆ ಮಾತ್ರವೇ ಸಂದಾಯವಾಗಿದೆ. ತೆರಿಗೆ ಕಟ್ಟದೆ ವಂಚಿಸುತ್ತಿರುವಾಗ ಕೇಂದ್ರ ಮತ್ತು ರಾಜ್ಯ ವ್ಯಾಪಾರ ತೆರಿಗೆ ಇಲಾಖೆಗಳು ಸುಮ್ಮನಿದ್ದದ್ದೇಕೆ? ಬಳ್ಳಾರಿಯ ಗಣಿ ಅಕ್ರಮಗಳಲ್ಲಿ ಇಡೀ ರೆಡ್ಡಿ ಕೂಟ ಪಾಲುದಾರರಾಗಿದ್ದರೂ ಕೇವಲ ಜನಾರ್ಧನ ರೆಡ್ಡಿಯವರನ್ನು ಮಾತ್ರವೇ ಬಂಧಿಸಿ, ಮಾಜಿ ಸಚಿವ ಬಿ. ಶ್ರೀರಾಮುಲು ಮತ್ತು ಇತರ ಶಾಸಕರು ಹಾಗೂ ಪಾಲುದಾರರನ್ನು ಇನ್ನೂ ಏಕೆ ಬಂಧಿಸಿಲ್ಲ? ರಾಜಕೀಯ ಲಾಭಕ್ಕಾಗಿ ಬಂಧಿಸಿಲ್ಲವೇ? ಈ ಪ್ರಶ್ನೆಗಳಿಗೆ ಉತ್ತರ ನೀಡಬೇಕಿರುವುದು ಸಿಬಿಐ ಮತ್ತು ಕೇಂದ್ರ ಸರ್ಕಾರ ಮಾತ್ರವೇ ಅಲ್ಲ, ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಕೂಡ.



‘ಚೇ’ ಮತ್ತು ಮನುಕುಲದ ಸಂಕಟಗಳ ನಿವಾರಣೆಯ ಪ್ರೇರಣೆ

ಜೂನ್ 14, 2013 ‘ಚೇ’ ಎಂಬ ಕ್ರಾಂತಿಕಾರಿಯ ಜನ್ಮದಿನ. ಡಿವೈಎಫ್ಐ ಮಳವಳ್ಳಿ ತಾಲ್ಲೂಕು ಸಮಿತಿಯು ಅಂದು ಜನ್ಮ ದಿನವನ್ನು ಆಚರಿಸಿತು. ‘ಜನಶಕ್ತಿ’ ಪತ್ರಿಕೆಯ ಪ್ರತಿನಿಧಿ ಆರ್. ರಾಮಕೃಷ್ಣ, ಚೇ ಅವರ ಬದುಕು–ಹೋರಾಟ–ಚಿಂತನೆಗಳ ಕುರಿತು ವಿಚಾರ ಮಂಡಿಸಿದರು. ಡಿವೈಎಫ್ಐ ರಾಜ್ಯ ಅಧ್ಯಕ್ಷರಾದ ಎಸ್.ಎಲ್. ಭರತ್ ರಾಜ್, ಜನವಾದಿ ಮಹಿಳಾ ಸಂಘಟನೆಯ ತಾಲ್ಲೂಕು ಅಧ್ಯಕ್ಷರಾದ ಸುನೀತ ಸಮಾರಂಭದ ಅತಿಥಿಗಳಾಗಿದ್ದರು. ಈ ಸಂದರ್ಭದಲ್ಲಿ



ಮಾತನಾಡಿದ ಭರತ ರಾಜ್ ಅವರು ಚೇ ಅವರ ಕ್ರಾಂತಿಕಾರಿ ಬದುಕು ಮತ್ತು ಹೋರಾಟ ಮತ್ತು ಸಮಾಜ ಬದಲಾವಣೆಯ ಸಿದ್ಧಾಂತಕ್ಕಾಗಿ ತಮ್ಮ ಬದುಕನ್ನೇ ಅರ್ಪಿಸಿಕೊಂಡ ಬಲಿದಾನ ಯುವಜನರಿಗೆ ಒಂದು ದೊಡ್ಡ ಸ್ಫೂರ್ತಿಯಾಗಿದೆ. ಆದರ್ಶವಾಗಿದೆ. ಚೇ ಅವರ ಬದುಕು ನಾವು ಇಂದು ನಮ್ಮ ಸಮಾಜದಲ್ಲಿನ ಅನ್ಯಾಯದ ವಿರುದ್ಧ ಹೋರಾಡುವುದಕ್ಕೆ ಪ್ರೇರಣೆಯಾಗಬೇಕು. ಇಂದು ದೇಶದ ಯುವಜನರು ಸಂಕಷ್ಟದಲ್ಲಿದ್ದಾರೆ. ನಿರುದ್ಯೋಗ ಹೆಚ್ಚುತ್ತಿದೆ. ಶಿಕ್ಷಣ ವ್ಯಾಪಾರೀಕರಣವಾಗುತ್ತಿದೆ. ಯುವಜನರ ಕ್ರೀಡಾ–ಸಾಂಸ್ಕೃತಿಕ ಪ್ರತಿಭೆಗೆ ಪ್ರೋತ್ಸಾಹವಿಲ್ಲ. ಸೂಕ್ತ ಸೌಲಭ್ಯಗಳಿಲ್ಲ. ಭ್ರಷ್ಟಾಚಾರ, ಕೋಮುವಾದ, ಜಾತಿವಾದ ತಾಂಡವವಾಡುತ್ತಿದೆ. ಇವುಗಳ ವಿರುದ್ಧ ಯುವಜನರು ಸಂಘಟಿತರಾಗಿ ಹೋರಾಟಕ್ಕೆ ಮುಂದಾಗಬೇಕೆಂದರು. ಡಿವೈಎಫ್ಐ ತಾಲ್ಲೂಕು ಅಧ್ಯಕ್ಷರಾದ ಲಿಂಗರಾಜ ಮೂರ್ತಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ತಿಮ್ಮೇಗೌಡ ವಂದಿಸಿದರು.

ಆರ್. ರಾಮಕೃಷ್ಣ ಸಭೆಯಲ್ಲಿ ಮಂಡಿಸಿದ ವಿಚಾರಗಳ(ಪರಿಷ್ಕೃತ ರೂಪ)ನ್ನು ಇಲ್ಲಿ ನೀಡಲಾಗಿದೆ.

ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ...

ಹೀಗೆಂದ ಕೂಡಲೇ ಅದು ಗೌತಮ ಬುದ್ಧನ ಕುರಿತಾದದ್ದು ಎಂದು ಯಾರಿಗಾದರೂ ತಿಳಿಯುತ್ತದೆ. ಬುದ್ಧನ ಮೊದಲ ಹೆಸರು ಸಿದ್ಧಾರ್ಥ. ಅವನು ಕಪಿಲ ವಸ್ತುವಿನ ರಾಜ ಶುದ್ಧೋದನನ ಮಗ. ಅವನು ಜಗತ್ತಿನ ಸಂಕಷ್ಟಗಳನ್ನು ಕಾಣದೇ ಬಾಲ್ಯವನ್ನು ಕಳೆದನಂತೆ. ಒಮ್ಮೆ ವಿಹಾರ ಹೊರಟಾಗ ಅವನು ದಾರಿಯಲ್ಲಿ ಒಬ್ಬ ಭಿಕ್ಷುಕನನ್ನು, ಒಬ್ಬ ರೋಗಿಯನ್ನು, ಒಬ್ಬ ವೃದ್ಧನನ್ನು, ಒಂದು ಶವದ ಮೆರವಣಿಗೆಯನ್ನು ನೋಡಿದನಂತೆ.

ಆಗ ಅವನಿಗೆ ಜಗತ್ತು ತಾನು ಅಂದುಕೊಂಡಂತಿಲ್ಲ. ಜಗತ್ತು ಸಾವು, ನೋವು, ಬಡತನ, ಸಂಕಟಗಳಿಂದ ತುಂಬಿದೆ ಎಂಬ ವಿಚಾರ ಅರಿವಿಗೆ ಬರುತ್ತದೆ. ಅವನ ಮನಸ್ಸು ಜಗತ್ತನ್ನು ಕಾಡುತ್ತಿರುವ ಈ ಸಂಕಟಗಳಿಂದ ಪಾರು ಮಾಡುವ ದಾರಿಯನ್ನು ಹುಡುಕಲು ತುಡಿಯುತ್ತದೆ. ಸಂಸಾರ, ಸಿರಿ, ಅರಮನೆಯನ್ನು ತೊರೆದು ಸಿದ್ಧಾರ್ಥ ಜಗತ್ತಿನ ಸಂಕಟಗಳಿಗೆ ಉತ್ತರವನ್ನು ಹುಡುಕುತ್ತಾ ಹೊರಟು ಬಿಡುತ್ತಾನೆ.

ಸಾಂತ್ವನ

ವೈದಿಕ ಧರ್ಮದ ವರ್ಣ ವ್ಯವಸ್ಥೆಯ ಕ್ರೌರ್ಯ, ಡಾಂಬಿಕತೆ, ಹಿಂಸೆ, ಶೋಷಣೆಯ ಸಂದರ್ಭದ ಚಾರಿತ್ರಿಕ ಹಿನ್ನೆಲೆಯಲ್ಲಿ ನೋಡಿದಾಗ ಬುದ್ಧ, ಬುದ್ಧನ ಬೋಧನೆಗಳು ಒಂದು ಬಗೆಯ ಪ್ರತಿಭಟನಾ ಚಳುವಳಿಯಂತೆ, ಬಂಡಾಯ ಧರ್ಮದಂತೆ ನೊಂದ ಜನತೆಯ ಪಾಲಿಗೆ ಸಾಂತ್ವನದಂತೆ ಒದಗಿ ಬಂದವು. ಬುದ್ಧನ ಸರಳ, ನೈತಿಕ ವಿಚಾರಗಳು ಅಂದಿನ ಐತಿಹಾಸಿಕ ಸನ್ನಿವೇಶದಲ್ಲಿ ಸಮಾಜದ ನೋವು ನರಳಾಟಗಳಿಗೆ ಕಂಡುಕೊಂಡ ಅಂದಿನ ಹಂತದ ಪರಿಹಾರಗಳಾಗಿದ್ದವು.

ಬುದ್ಧ, ಬುದ್ಧನ ಬೋಧನೆಗಳ ವಿಷಯ ಸುಮಾರು 2500 ವರ್ಷಗಳ ಹಿಂದಿನ ಕ್ರಿಸ್ತ ಪೂರ್ವ 6 ನೇ ಶತಮಾನಕ್ಕಾಯಿತು. ಜಗತ್ತಿನ ದುಃಖ, ಜನಗಳ ಬದುಕಿನ ಸಂಕಟಗಳು ಸಿದಾರ್ಥನನ್ನು ಕಾಡಿದಂತೆ ಇನ್ನೂ ಎಷ್ಟೋ ಜನರನ್ನು ಕಾಡಿವೆ.

ಈಗ 20 ಶತಮಾನದಲ್ಲಿ 60 ರ ದಶಕದಲ್ಲಿ ಕೆಲಮಟ್ಟಿಗೆ ಇದನ್ನು ಹೋಲುವ ಒಂದು ಪ್ರಕರಣವಿದೆ.

ಪತ್ರ ಬರೆದಿಟ್ಟು ಹೋದ

1965 ಒಂದು ದಿನ ಕ್ಯೂಬಾದೇಶದ ಕೈಗಾರಿಕಾ ಸಚಿವ, ಅಧಿಕಾರ ರೂಢ ಕಮ್ಯುನಿಸ್ಟ್ ಪಕ್ಷದ ಒಬ್ಬ ಅಗ್ರಗಣ್ಯ ನಾಯಕ, ‘ಚೇ’ ಎಂದೇ ಖ್ಯಾತನಾದ ಅರ್ನೆಸ್ಟೋ ಗುವಾರ, ಕ್ಯೂಬಾ ಕ್ರಾಂತಿಯ ಜೊತೆಗಾರ ಹಾಗೂ ಕ್ಯೂಬಾದ ಅಧ್ಯಕ್ಷನಾದ ಫಿಡೆಲ್ ಕ್ಯಾಸ್ಟ್ರೋಗೆ ಒಂದು ಪತ್ರವನ್ನು ಬರೆದಿಟ್ಟು ಹೇಳದೇ ಕೇಳದೇ ಹೊರಟು ಬಿಡುತ್ತಾನೆ. ಕೇವಲ 37 ವರ್ಷದ ಯುವಕ ಮುದ್ದಿನ ಮಕ್ಕಳು, ಪ್ರೀತಿಯ ಹೆಂಡತಿಯನ್ನು ಬಿಟ್ಟು ಗುಡ್ಡಬೆಟ್ಟಗಳ ಕಗ್ಗಾಡಿನ ಹಾದಿಯಲ್ಲಿ ತಂಡ ಕಟ್ಟಿಕೊಂಡು ನುಗ್ಗಿ ಬಿಡುತ್ತಾನೆ.

ಆತ ಹೋಗಿದ್ದು ದಕ್ಷಿಣ ಅಮೆರಿಕದ ಬೊಲಿವಿಯಾ ದೇಶಕ್ಕೆ. ಬೊಲಿವಿಯಾದ ಕಾಡಿನಲ್ಲಿ ಅಕ್ಟೋಬರ್ 7, 1967 ರಂದು ಸೆರೆ ಸಿಕ್ಕ ‘ಚೇ’ ಯನ್ನು ಅಕ್ಟೋಬರ್ 8, 1968 ರಂದು ಅಮೆರಿಕದ ಸಿಐಎ ಬೆಂಬಲಿತ ಬೊಲಿವಿಯನ್ ಸರ್ವಾಧಿಕಾರಿಯ ಸೈನಿಕರು ನಿರ್ದಯವಾಗಿ ಕೊಂದು ಹಾಕಿದರು.

ಹುಡುಕಾಟ

‘ಚೇ’ ಒಬ್ಬ ವೈದ್ಯಕೀಯ ವಿದ್ಯಾರ್ಥಿಯಾಗಿದ್ದ. (ಆತ ಸ್ವತಃ ಒಬ್ಬ ಆಸ್ತಮಾ ರೋಗಿಯೂ ಆಗಿದ್ದ) ಅವನು



ಮನುಷ್ಯನ ದೇಹದ ರೋಗ ರುಜಿನಗಳು, ದೇಹ ಕೆಲಸ ಮಾಡುವ ಬಗೆಯನ್ನು ಅಧ್ಯಯನ ಮಾಡುತ್ತಿರುವಾಗಲೇ, ಸಮಾಜಕ್ಕೆ ಅಂಟಿರುವ ರೋಗಗಳು, ಸಮಾಜ, ವ್ಯವಸ್ಥೆ ನಿಂತಿರುವ, ನಡೆಯುತ್ತಿರುವ ರೀತಿಯನ್ನೂ ಗಮನಿಸತೊಡಗಿದ. ಆಮೇಲೆ ಮೋಟಾರು ಸೈಕಲ್ಲನ್ನೇರಿ ದಕ್ಷಿಣ



ಅಮೆರಿಕದ ದೇಶಗಳನ್ನೆಲ್ಲಾ ಸುತ್ತಿದ. ಎಲ್ಲೆಲ್ಲೂ ರೋಗಿಗಳು. ಕುಷ್ಠ ರೋಗಿಗಳು. ದಾರುಣ ಬದುಕು. ‘ವೈದ್ಯ’ನ ಮನ ಕಲಕಿತು. ರೋಗಗಳನ್ನು, ಕುಷ್ಠರೋಗವನ್ನು ನಿರ್ಮೂಲ ಮಾಡುವ ನಿರ್ಧಾರ ಮನದಲ್ಲಿ ಮೊಳೆತು ಬಿಟ್ಟಿತು. ಅನುದಿನವೂ ದುಡಿದು ದುಡಿದು ಹುಡಿಯಾದರೂ ಜನರು ಯಾಕೆ ಬಡತನದ ಬೇಗೆಯಲ್ಲಿ ಬೇಯುತ್ತಿದ್ದಾರೆ.? ಇಲ್ಲಿ ‘ಬಡತನವ ಬುಡಮಟ್ಟ ಕೀಳಲೈತನ್ನಿ’ ಎನ್ನುವ ಬಯಕೆ ಬಲಿಯಿತು. ಬಡತನದ ಬೇರು ಎಲ್ಲಿದೆ ? ಅದನ್ನು ಕೀಳ ಹೋಗುವವರಿಗೆ ಏನಡ್ಡಿ ?

ಅಲ್ಲಿ ಸಿಂಹಾಸನದಲ್ಲಿ ಅಮೆರಿಕ ಕುಳ್ಳಿರಿಸಿದ ಕೈ ಗೊಂಬೆ ಸರ್ವಾಧಿಕಾರಿಗಳು. ನಗ್ನ ಸರ್ವಾಧಿಕಾರ. ಅವರ ಆಶ್ರಯದಲ್ಲಿ ಖನಿಜ ಕಾಡು, ನಿಸರ್ಗದ ಸಂಪತ್ತು ಲೂಟಿ ಮಾಡುವ, ಜನರ ದುಡಿಮೆಯ ಫಲವನ್ನು–ಜನರ ರಕ್ತವನ್ನು ಹೀರುವ ಶೋಷಕರ ಹಿಂಡು. ಈ ವ್ಯವಸ್ಥೆಯನ್ನು ಕಾಯಲು ಸೇನೆ, ತುಪಾಕಿ, ದಂಡು. ಬಂದೂಕು, ಗುಂಡು. ದಕ್ಷಿಣ ಅಮೆರಿಕ ಎಂಬುದೇ ಅಮೆರಿಕ ದೇಶದ ಹಿತ್ತಲು. ರಕ್ತ ಬಸಿದು ಕೊಡುವ ಜನರಿಗೆ ಅಮೆರಿಕದಿಂದ ಪ್ರತಿಯಾಗಿ ಸಿಗುವುದು ಬರಿ ಕತ್ತಲು.

1954 ರಲ್ಲಿ ‘ಚೇ’ ಮೆಕ್ಸಿಕೋದಲ್ಲಿ, ಕ್ಯೂಬಾದಿಂದ ಗಡಿಪಾರಾಗಿದ್ದ ಕ್ರಾಂತಿಕಿಡಿಗಳಾದ ಫಿಡೆಲ್ ಕ್ಯಾಸ್ಟ್ರೋ, ರೌಲ್ ಕ್ಯಾಸ್ಟ್ರೋ ಸಂಗಾತಿಗಳ ಕೈ ಕುಲುಕಿದ. ಆಮೇಲೆ ಕ್ಯೂಬಾದ ಸರ್ವಾಧಿಕಾರಿ ಬ್ಯಾಟಿಸ್ಟನ ಕೋಟೆಯ ಮೇಲೆ ದಾಳಿ. ಕದನ. ಭೀಕರ ಕದನ. ಕಾರ್ಮಿಕರು, ದುಡಿಯುವ ಜನರೊಂದಿಗೆ ನಡೆದವರ ಕೊರಳಿಗೆ ವಿಜಯ ಮಾಲೆ. ಜನವರಿ 1. 1959 ನೀಚ ಸರ್ವಾಧಿಕಾರಿ ಕಂಬಿ ಕಿತ್ತ.

ಸಂಕಟಗಳನ್ನು ಅಳಿಸುವ ಸವಾಲು

ಜಗತ್ತಿನ ಸಕ್ಕರೆಯ ಬಟ್ಟಲು ಕ್ಯೂಬಾದ ಭೂಮಿ ಕ್ಯೂಬನ್ನರ ಕೈಲಿ ಎಲ್ಲಿತ್ತು.? ಎಷ್ಟಿತ್ತು ? 56 ಸಾವಿರ ಎಕರೆ, 21 ಸಾವಿರ ಎಕರೆ ...ಹೀಗೆ ಒಂದೊಂದು ಎಸ್ಟೇಟು ಅಮೆರಿಕದ ದುಷ್ಟ ಕಂಪನಿಗಳ ಕೈಯಲ್ಲಿ. ಫಲವತ್ತಾದ ನೆಲ. ಅದು ಈಗ ರೈತರ ಕೈಗೆ ಬಂತು. ಕ್ಯೂಬಾ ಕಂಡು ಕೇಳರಿಯದ ಬದಲಾವಣೆ. ಭಿಕ್ಷಕರು ಮಾಯವಾದರು. ಎಲ್ಲರಿಗೂ ಆಹಾರ ಹೊಟ್ಟೆ ತುಂಬ. ದೇಶದ ಸಮಸ್ತ ಜನರ ಕೈಗೆ ಅಕ್ಷರದ ಆಯುಧವನ್ನು ಕೊಡಲಾಯಿತು. ಕ್ಯೂಬಾ ದೇಶ ಜಗತಿನಲ್ಲೇ ಅತ್ಯುನ್ನತ ಎನ್ನುವ ಸಾಕ್ಷರತೆಯನ್ನು

ಪುಟ 10 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಉತ್ತರಾಖಂಡ ದುರಂತ: ಸುರಕ್ಷಣಾ ನಿಯಂತ್ರಣ ವ್ಯವಸ್ಥೆ ರೂಪಿಸಬೇಕಾಗಿದೆ

ಇಂತಹ ನೈಸರ್ಗಿಕ ವಿಕೋಪಗಳ ಘಟನೆಗಳಲ್ಲಿ ಹಲವು ಮಾನವ-ನಿರ್ಮಿತ ಅಂಶಗಳ ಕೊಡುಗೆಗಳೂ ಇರುತ್ತವೆ. ಉತ್ತರಾಖಂಡ, ತನ್ನ ನೆರೆರಾಜ್ಯಗಳಂತೆ ನದಿ ಹರಿವುಗಳ ಪ್ರಭಾವದ ಒಂದು ಸರಿಯಾದ ವೈಜ್ಞಾನಿಕ ಅಧ್ಯಯನವನ್ನು ನಡೆಸದೆ, ನೂರಾರು ಜಲವಿದ್ಯುತ್ ಯೋಜನೆಗಳನ್ನು ತಯಾರಿಸಿದೆ, ಅವುಗಳಲ್ಲಿ ಕೆಲವನ್ನು ಈಗಾಗಲೇ ನಿರ್ಮಿಸಿದೆ ಕೂಡ. ಈಗಲಾದರೂ ಸರಕಾರಗಳು ಮತ್ತು ಸಂಬಂಧಪಟ್ಟ ಇತರ ಅಧಿಕಾರಿಗಳು ನಮ್ಮ ಪರಿಸರ, ಅರಣ್ಯಗಳು ಇನ್ನಷ್ಟು ನಾಶವಾಗುವುದನ್ನು ತಡೆಯಲು ಕಟಿಬದ್ಧರಾಗಬೇಕು, ನಮ್ಮ ನದಿಗಳ ಕನಿಷ್ಟ ಪಾರಿಸರಿಕ ಪ್ರವಾಹಗಳ ಒಂದು ವೈಜ್ಞಾನಿಕ ವ್ಯವಸ್ಥೆಯನ್ನು ರೂಪಿಸಬೇಕು, ಮತ್ತು ಧಾರ್ಮಿಕ ಪ್ರವಾಸಕ್ಕೆ ಒಂದು ಸುರಕ್ಷಣಾ ನಿಯಂತ್ರಣಗಳ ವ್ಯವಸ್ಥೆಯನ್ನು ಕಲ್ಪಿಸಬೇಕು.

ಸೀತಾರಾಮ ಯೆಚೂರಿ

...ಂದು ದುರ್ಭರ ಪ್ರಮಾಣದ ...ಾನವ ದುರಂತ ಉತ್ತರಾಖಂಡದಲ್ಲಿ ...ನಾವರಣಗೊಂಡಿದೆ. ಅಲ್ಲಿ ಇದ್ದಕ್ಕಿದ್ದಂತೆ ...ರಗಿರುವ ನೆರೆಹಾವಳಿಗೆ ತುತ್ತಾಗಿ ...ತ್ತವರ ಸಂಖ್ಯೆ 5000 ದಷ್ಟಿರಬಹುದು ...ಂದು ಅಲ್ಲಿನ ವಿಪತ್ತು ನಿರ್ವಹಣೆ ...ಂತ್ರಿಗಳ ಊಹೆ. ಹಲವರು ಈ ಸಂ-...ೖೆ ಇನ್ನೂ ಹೆಚ್ಚಿರಬಹುದು ಎನ್ನುತ್ತಾರೆ. ...ಧಿಕೃತವಾಗಿ, ಈಗಲೂ 10 ಸಾವಿರಕ್ಕೂ ...ೆಚ್ಚು ಮಂದಿ ಬದ್ರಿನಾಥ, ಕೇದಾರನಾಥದ ...ಳೆಯ ಪ್ರಕೋಪಕ್ಕೊಳಗಾದ ...ಯಾತ್ರಾಸ್ಥಳಗಳ ವಿವಿಧ ಭಾಗಗಳಲ್ಲಿ ...ಸಿಕೊಂಡಿದ್ದಾರೆ. ಕೇದಾರನಾಥ ಅತಿ ... ಬಾಧೆಗೊಳಗಾಗಿರುವ ...ಳ.

ಇಂತಹ ವಿಪತ್ತುಗಳು ...ಯಾವಾಗ ಎರಗುತ್ತವೆ ...ಂಬುದರ ಕರಾರುವಾಕ್ಕಾದ ...ಮುನ್ಸೂಚನೆ ಸಾಧ್ಯವಿಲ್ಲ. ...ಆದರೂ ಹವಾಮಾನ ...ಇಲಾಖೆ ಭಾರೀ ಮಳೆ ...ಬೀಳುವ ಸಾಧ್ಯತೆಗಳಿವೆ ...ಎಂದು ತಿಳಿಸಿತ್ತು. ಆದರೆ ...ಅರ್ಥಪೂರ್ಣ ಸಿದ್ಧತೆಗಳನ್ನು ...ಮಾಡಿಕೊಳ್ಳಲಿಲ್ಲ. ಮಧ್ಯ ...ಯುರೋಪಿನಲ್ಲಿ ತೀವ್ರ ...ನೆರೆಹಾವಳಿ ಸೃಷ್ಟಿಸಿದ ಪಶ್ಚಿಮದ ಗಾಳಿ ...ನೈಋತ್ಯ ಮನ್ಸೂನ್ ಗಾಳಿಯೊಂದಿಗೆ ಬೆಸೆದು ...ಈ ವಿಪತ್ಕಾರಿ ಮಳೆ ಬೀಳುವಂತಾಯಿತು. ...ಅಧಿಕಾರಿಗಳ ಪ್ರಕಾರ, ಉತ್ತರ ಭಾರತದ ...ಪರ್ವತಮಯ ರಾಜ್ಯಗಳಲ್ಲಿ ಅದಾಗಲೇ ...ನ್ಸೂನ್ ಕಾಲದ ಕಡಿಮೆ ಒತ್ತಡದ ...ವಾತಾವರಣ ನಿರ್ಮಾಣವಾಗಿತ್ತು. ...ಇದರೊಳಕ್ಕೆ ಮೆಡಿಟರೇನಿಯನ್ ...ಮೂಲದಿಂದ ಆ ಉಷ್ಣವಲಯದ ...ಬಿರುಗಾಳಿಗಳು ಬೀಸಿ ಬಂದವು. ಇದರ ...ಪರಿಣಾಮವೇ ಭಾರೀ ಮಳೆ ಮತ್ತು ಈ ...ಪ್ರದೇಶದ ಹಲವಾರು ನದಿಗಳಲ್ಲಿ ಹತೋಟಿ ...ತಪ್ಪಿದ ಪ್ರವಾಹ.

ನೈಸರ್ಗಿಕ ವಿಪತ್ತು ಮತ್ತು ಮಾನವ-ನಿರ್ಮಿತ ಅಂಶಗಳು

ಇಂತಹ ವಿಪತ್ತುಗಳನ್ನು 'ನೈಸರ್ಗಿಕ' ಎನ್ನಲಾಗುತ್ತದೆ. ಏಕೆಂದರೆ ವಿಜ್ಞಾನ ಇನ್ನೂ ನಮ್ಮನ್ನು ಇಂತಹ ಘಟನೆಗಳನ್ನು ನಿಭಾಯಿಸುವಷ್ಟು ಸಜ್ಜುಗೊಳಿಸಿಲ್ಲ. ಆದರೆ ಇಂತಹ ಘಟನೆಗಳಲ್ಲಿ ಹಲವು ಮಾನವ-ನಿರ್ಮಿತ ಅಂಶಗಳ ಕೊಡುಗೆಗಳೂ ...ರುತ್ತವೆ. ಬಿರುಮಳೆಗಳು ಸಂಭವಿಸುವುದು, ...ಯಾದ, ತೇವ ತುಂಬಿದ ಗಾಳಿ ಪರ್ವತಗಳ ಮೇಲಕ್ಕೆ ಒತ್ತಲ್ಪಟ್ಟು ಗುಡುಗು ಮೋಡಗಳು ರಚನೆಗೊಂಡಾಗ. ಇದರ ಒಟ್ಟು ಫಲಿತಾಂಶವೇ ಮೇಘಸ್ಫೋಟ ಅಥವ ಬಿರುಮಳೆ. ಇದಲ್ಲದೆ, ಮನಬಂದಂತೆ ನಡೆಸಿದ ಅರಣ್ಯನಾಶ, ನೆಲದ ಮೇಲೆ ಸಸ್ಯಗಳ




ಕೊಚ್ಚಿ ಹೋದ ಕೇದಾರನಾಥ ಪರಿಸರ

ಆವರಣದ ಅಭಾವದಿಂದಾಗಿ ಇಂತಹ ಆಕಸ್ಮಿಕ ಪ್ರವಾಹಗಳು ಉಂಟಾಗುತ್ತವೆ.

ಉತ್ತರಾಖಂಡದಲ್ಲಿ 1998ರಿಂದೀಚೆಗೆ ಇಂತಹ ಆರು ಪ್ರಧಾನ ಮೇಘಸ್ಫೋಟಗಳು ಸಂಭವಿಸಿವೆ. ಅರಣ್ಯಗಳ ನಾಶ, ನದಿಗಳಿಗೆ ಅವೈಜ್ಞಾನಿಕವಾಗಿ ಆಣೆಕಟ್ಟುಗಳ ನಿರ್ಮಾಣ ಮತ್ತು ಮರಳು, ಕಲ್ಲುಗಳ ಲಂಗುಲಗಾಮಿಲ್ಲದ ಗಣಿಗಾರಿ-ಕೆ, ಇವೆಲ್ಲವೂ ಸೇರಿಕೊಂಡು ಉತ್ತರಾಖಂಡದಲ್ಲಿ ಮತ್ತೆ-ಮತ್ತೆ ಇಂತಹ ವಿಪತ್ತುಗಳನ್ನು ತರುವ ಒಂದು ಮಾರಕ ಮಿಶ್ರಣವನ್ನು ಸಿದ್ಧಗೊಳಿಸಿವೆ. ದೇಶದಲ್ಲಿ ವಾತಾವರಣ ಮತ್ತು ಪರಿಸರದ ಸುಭದ್ರತೆ ಹಾಗೂ ಸೂಕ್ಷ್ಮ ಪರಿಸರ ವಲಯಗಳ ಸುರಕ್ಷಿತತೆಯ ಬಗ್ಗೆ ಚರ್ಚೆ ಮುಂದುವರೆಯುತ್ತಿರುವಾಗಲೇ, ಉತ್ತರಾಖಂಡ, ತನ್ನ ನೆರೆರಾಜ್ಯಗಳಂತೆ ತನ್ನ ನದಿಗಳ ಕನಿಷ್ಟ ಪರಿಸರ ಹರಿವುಗಳನ್ನು ಕೂಡ ನಿರೂಪಿಸದೇ, ನದಿ ಹರಿವುಗಳ ಪ್ರಭಾವದ ಒಂದು ಸರಿಯಾದ ವೈಜ್ಞಾನಿಕ ಅಧ್ಯಯನವನ್ನು ನಡೆಸದೆ, ನೂರಾರು ಜಲವಿದ್ಯುತ್ ಯೋಜನೆಗಳನ್ನುತಯಾರಿಸಿದೆ.

ಅವುಗಳಲ್ಲಿ ಕೆಲವನ್ನು ಈಗಾಗಲೇ ನಿರ್ಮಿಸಿದೆ ಕೂಡ. ಯುಪಿಎ-1 ಆಳ್ವಿಕೆಯಲ್ಲಿ ರಚಿಸಿದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಸಂಸ್ಥೆ(ಎನ್‌ಡಿಎಂಎ), ಒಂದೋ ತನಗೆ ವಿಧಿಸಿದ ಕೆಲಸವನ್ನು ಮಾಡ ಹೊರಟಿಲ್ಲ, ಅಥವ ಅದು ಏನಾದರೂ ಸಲಹೆಗಳನ್ನು ನೀಡಿದ್ದರೆ ಅವುಗಳನ್ನು ಜಾರಿ ಮಾಡಲಾಗಿಲ್ಲ. ಇದು ಸ್ವಯಂವೇದ್ಯ.

ಈ ಸಮಸ್ತ ದುರಂತದಲ್ಲಿ ಇನ್ನೊಂದು ಮಾನವ-ನಿರ್ಮಿತ ಅಂಶವೂ ಇದೆ. ಕಳೆದ ಒಂದು ದಶಕದಲ್ಲಿ ಈ ಎರಡು ಯಾತ್ರಾಸ್ಥಳಗಳಿಗೆ ಭೇಟಿ ಕೊಡುವವರ ಸಂಖ್ಯೆ ನಾಲ್ಕು ಪಟ್ಟಾಗಿದೆ. 2003ರಿಂದ 2012ರ ನಡುವೆ ಕೇದಾರನಾಥಕ್ಕೆ ಭೇಟಿ ನೀಡಿದವರ ಸಂಖ್ಯೆ 1.7ಲಕ್ಷದಿಂದ 5.75 ಲಕ್ಷಕ್ಕೇರಿದೆ. ಬದ್ರಿನಾಥದಲ್ಲಿ ಅದು 1.34 ಲಕ್ಷದಿಂದ ಸುಮಾರು 6 ಲಕ್ಷ ಆಗಿದೆ. ಇದೇ ಅವಧಿಯಲ್ಲಿ ವಿದೇಶಿ ಪ್ರವಾಸಿಗರ ಸಂಖ್ಯೆ 10ನೇ ಒಂದಂಶಕ್ಕೆ



ಇಳಿದಿದೆ ಎಂಬುದನ್ನು ಗಮನಿಸಬೇಕು. ಇನ್ನೊಂದೆಡೆ ಈ ಅವಧಿಯಲ್ಲಿ ಪ್ರಯಾಣಿಕ ವಾಹನಗಳ ನೋಂದಾವಣೆ ಪ್ರಮಾಣ ಐದು ಪಟ್ಟು ಹೆಚ್ಚಿದೆ. ಇವುಗಳಲ್ಲಿ 70ಶೇ. ದಷ್ಟು ಯಾತ್ರಾರ್ಥಿಗಳನ್ನು ದಡ ದಾಟಿಸುವ ಕೆಲಸದಲ್ಲಿ ತೊಡಗಿರುವಂತವು. ಸಂಸದೀಯ ಸ್ಥಾಯೀ ಸಮಿತಿ ಮತ್ತು ಯೋಜನಾ ಆಯೋಗ ಕೂಡ ಸರಕಾರದ ಗಮನವನ್ನು ಧಾರ್ಮಿಕ ಪ್ರವಾಸದ ನಿಯಂತ್ರಣದತ್ತ ಸೆಳೆದಿದ್ದವು. ಆದರೂ, ಅಮರನಾಥ ಕ್ಷೇತ್ರ-ಕ್ಕೆ ಯಾತ್ರಾರ್ಥಿಗಳನ್ನು ಒಂದು ಸಮ್ಮಿಳಿತ ವಿಪತ್ತು ಉಪಶಮನ ಯೋಜನೆಯೊಂದಿಗೆ ನಿಯಂತ್ರಿಸಿರುವಂತೆ, ಇಲ್ಲಿ ಅಂತಹ ಒಂದು ನಿಯಂತ್ರಣ ವ್ಯವಸ್ಥೆಯನ್ನು ರೂಪಿಸಿಯೇ ಇಲ್ಲ; ಜಾರಿಗೊಳಿಸುವ ಪ್ರಶ್ನೆಯೇ ಇಲ್ಲ. ಇಂತಹ ನಿಯಂತ್ರಣಗಳನ್ನು ದೇಶದ ಎಲ್ಲ ಯಾತ್ರಾಸ್ಥಳಗಳಲ್ಲಿ ರೂಪಿಸಬೇಕು ಮತ್ತು ಜಾರಿಗೊಳಿಸಬೇಕು.

'ರಾಂಬೋ' ಮಾದರಿ ಬೇಡ

ಕೆಲವು ರಾಜಕಾರಣಿಗಳು ವಿಪತ್ತು ಸಂಭವಿಸಿದ ಪ್ರದೇಶಗಳಿಗೆ ಭೇಟಿ ನೀಡಿ ಅದರ ಪ್ರಯೋಜನ ಗಿಟ್ಟಿಸಲು ಪ್ರಯತ್ನಿಸುತ್ತಿರುವುದು ನಿಜಕ್ಕೂ ದುರದೃಷ್ಟಕರ. ನರೇಂದ್ರ ಮೋದಿಯ ಮಾಧ್ಯಮ ನಿರ್ವಹಣಾ ಯಂತ್ರ ಅವರು ಹಾಲಿವುಡ್‌ನ 'ರಾಂಬೋ' ಮಾದರಿಯಲ್ಲಿ 15,000 ಮಂದಿಯನ್ನು ಕಾಪಾಡಿರುವುದಾಗಿ ಬಿಂಬಿಸಿದೆ. ಈ ಮಹಾವಿಪತ್ತಿಗೆ ತುತ್ತಾದ ಜನಗಳನ್ನು ಉಳಿಸಲು ಮತ್ತು ಸುರಕ್ಷಿತ ಸ್ಥಳಗಳಿಗೆ ಸಾಗಿಸಲು ಅಪಾರ ಪ್ರಯತ್ನಗಳು ಮತ್ತು ಶಕ್ತಿ ಅಗತ್ಯವಿರುವಾಗ ಅವರಿಗೆ ಸಾಂತ್ವನ ಮತ್ತು ಸೌಹಾರ್ದ ವ್ಯಕ್ತಪಡಿಸುವ ಹೆಸರಿನಲ್ಲಿ ವಿಐಪಿಗಳ ಭೇಟಿ ಅಂತಹ ಕೆಲಸಗಳಿಗೆ ಅಡ್ಡಿಯುಂಟು ಮಾಡುತ್ತವಷ್ಟೇ.

ಈ ವಿಷಯದಲ್ಲಿ ದೇಶದ ವಿಮಾನ ಪಡೆ ಬೃಹತ್ ಪ್ರಮಾಣದಲ್ಲಿ ರಕ್ಷಣಾ ಕಾರ್ಯಾಚರಣೆಗಳನ್ನು ನಡೆಸಿದೆ. ಅದು ಕಳೆದ ವಾರ 45 ವಿಮಾನಗಳನ್ನು ಕೆಲಸಕ್ಕಿಳಿಸಿ ಒಂದು ಸಾವಿರಕ್ಕೂ ಹೆಚ್ಚು ಗಂಟೆಗಳ ಹಾರಾಟದಲ್ಲಿ 12,000 ಯಾತ್ರಾರ್ಥಿಗಳನ್ನು ಕಾಪಾಡಿದೆ. "ನಮ್ಮ ಹೆಲಿಕಾಪ್ಟರುಗಳ ತಿರುಗುಚಕ್ರಗಳು ನಿಮ್ಮಲ್ಲಿ(ಸಿಲುಕಿಕೊಂಡ ಯಾತ್ರಾರ್ಥಿಗಳು ಮತ್ತು ಸ್ಥಳೀಯರಲ್ಲಿ) ಪ್ರತಿಯೊಬ್ಬರನ್ನೂ ಸಾಗಿಸುವವರೆಗೆ ನಿಲ್ಲುವುದಿಲ್ಲ, ಆಸೆ ಕಳಕೊಳ್ಳಬೇಡಿ, ಅಲ್ಲೇ ಇರಿ" ಎಂದು ವಿಮಾನ ಪಡೆಯ ಸೇನಾಪತಿಗಳು ಸೋಮವಾರ ಹೇಳಿದ್ದಾರೆ. ಅದೇ ರೀತಿ, ಸೇನಾಪಡೆಗಳು ಮತ್ತು ಇಂಡೋ-ಟಿಬೇಟನ್ ಗಡಿ ಪೋಲೀಸ್ ಪಡೆಗಳವರು ಅಷ್ಟೇ ಅಸಾಮಾನ್ಯ ಕೆಲಸ ನಿರ್ವಹಿಸುತ್ತಿದ್ದಾರೆ. ಹೆಲಿಪ್ಯಾಡುಗಳು ಇಂತಹ ವಿಪತ್ತುಗಳ ಸಮಯದಲ್ಲಿ ಜನಗಳನ್ನು ಸುರಕ್ಷಿತ ಸ್ಥಳಗಳಿಗೆ ತ್ವರಿತವಾಗಿ ಸಾಗಿಸುವಲ್ಲಿ ಬಹಳ ಮಹತ್ವದ್ದಾಗುತ್ತವೆ. ಇಂತಹ ಹೆಲಿಪ್ಯಾಡ್‌ಗಳನ್ನು ನಿರ್ಮಿಸಬೇಕೆಂಬ ಸಂಸದೀಯ ಸ್ಥಾಯೀ ಸಮಿತಿಯ

ಪುಟ 15 ಕ್ಕೆ

'ಚೇ' ಮತ್ತು ಮನುಕುಲದ....

ಪುಟ 8

ಸಾಧಿಸಿತು. ಜನರ ಮನೆಮನೆಗೆ ವೈದ್ಯರು ಕುಟುಂಬ ಸ್ನೇಹಿತರಂತೆ ಬಂದು ಹೋಗುವ ಆರೋಗ್ಯ ವ್ಯವಸ್ಥೆ ಬಂತು. ಸಾವನ್ನು ಗೆಲ್ಲಲಾಗಲಿಲ್ಲ. ನಿಜ. ಆದರೆ 55 ವರ್ಷ ಇದ್ದ ಜನರ ಸರಾಸರಿ ಆಯಸ್ಸು ಕ್ರಾಂತಿಯಾದ ಮೇಲೆ 75 ವರ್ಷಕ್ಕೆ ಏರಿತು. ಅಂದರೆ 20 ವರ್ಷದ ಮಟ್ಟಿಗಾದರೂ ಸಾವನ್ನು ಹಿಂದಕ್ಕೆ ಇಕ್ಕಿದಂತೆ ಆಯಿತಲ್ಲ.

ಇನ್ನೆಷ್ಟು ನರಕ ?

ಕ್ಯೂಬಾ ದೇಶದ ಕ್ರಾಂತಿಯ ರೈಲನ್ನು ಹಳಿಯ ಮೇಲೆ ಹತ್ತಿಸಿದ್ದಾಯಿತು. ಅದು ಹಾಗೆ ಮುಂದೆ ಸಾಗುವುದನ್ನು ನೋಡಲು ಸಮರ್ಥ ಸಂಗಾತಿಗಳಿದ್ದಾರೆ. ಆದರೆ ಅಲ್ಲಿ, ಇನ್ನೂ ಎಷ್ಟೊಂದು ದೇಶಗಳಲ್ಲಿ ಜನರ ಪಾಲಿನ ಭೀಕರ ನರಕಗಳು. ಅವು ಹಾಗೇ ಉಳಿದು ಬಿಟ್ಟಿವೆಯಲ್ಲಾ !!

'ಜಗತ್ತಿನ ಎಲ್ಲೆ ಆಗಲಿ
ಅನ್ಯಾಯದ ವಿರುದ್ಧ ನೀನು ಸಿಡಿದು ನಿಂತರೆ
ಆಗ ನೀನು ನನ್ನ ಸಂಗಾತಿ'

ಎಂದು ಸಾರಿದ 'ಚೇ'ಗೆ ತನ್ನ ಸುಖಸಂಸಾರದ ಬೆಚ್ಚನೆಯ ಗೂಡಲ್ಲಿ ನೆಮ್ಮದಿಯಾಗಿ ನಿದ್ರೆ ಮಾಡಿಕೊಂಡು ಹೋಗುವ ಅವಕಾಶವೂ ಇತ್ತು. ಉಹುಂ. ಚೇ ನಿದ್ರೆಗೆಟ್ಟುಬಿಟ್ಟ.

'ಓ ನನ್ನ ಚೇತನ ಆಗು ನೀ ಅನಿಕೇತನ...' ಅಂದರಲ್ಲ ಕುವೆಂಪು. 'ಮನುಜ ಕುಲ ತಾನೊಂದೆ ವಲಂ' ಅಂದಿಲ್ಲವೇ ಪಂಪ. ಹಾಗೇ 'ಚೇ' ಒಬ್ಬ ವಿಶ್ವ ಮಾನವ.

ಕೆಲವರು 'ಇದು ಭಾರತ. ಇದು ಪವಿತ್ರ ಭೂಮಿ. ಇನ್ನೊಂದು ಹೆಜ್ಜೆ ಆಚೆಗಿಟ್ಟ-ರೆ ಅಪವಿತ್ರ ನೆಲ. ಅದು ಶತ್ರು ಭೂಮಿ' ಎನ್ನುವರು. ಎಂತಹ ಕ್ಷುಲ್ಲಕ ಯೋಚನೆಯ ಕ್ರಿಮಿಗಳು !! ಅದು ಎಲ್ಲೇ ಆಗಲಿ ಇಡೀ ಜಗತ್ತಿನಲ್ಲಿ. ಅನ್ಯಾಯದ ವಿರುದ್ಧ ಜಿದ್ದಿನಿಂದ ನುಗ್ಗಿ ಎದುರು ನಿಲ್ಲಬೇಕು. ಅದರ ಮುಸುಡಿಗೆ ಗುದ್ದಿ ಗೆಲ್ಲಬೇಕು. ಜಗತ್ತಿನ ಮೇಲೆ ಚಾಚಿಕೊಂಡಿರುವ ಸುಲಿಗೆಕೋರ ವ್ಯವಸ್ಥೆಯನ್ನು ಉಡಾಯಿಸಿ ಛಿದ್ರ ಛಿದ್ರ ಮಾಡಿಬಿಡಬೇಕು. ಬರೀ ರೊಚ್ಚು ಕೆಚ್ಚು ಅಲ್ಲ. ಆಳ ಅಧ್ಯಯನದಿಂದ ಹೊಮ್ಮಿದ ಪಕ್ವತೆ. ಎದೆಗಿಳಿದ 'ಮಾರ್ಕ್ಸ್‌ವಾದ-ಲೆನಿನ್ ವಾದ'ದ ಜೀವರಸ ತಂದು ಕೊಟ್ಟ ಕಸವು ಅದು. ನಗ್ನ ಸರ್ವಾಧಿಕಾರಿಗಳ ಪ್ರಭುತ್ವಗಳನ್ನು ಮಣಿಸಲು ಒಂದೆಡೆ ಶೋಷಿತ ದುಡಿಯುವ ವರ್ಗದ ಸಾಮೂಹಿಕ ಹೋರಾಟ ಮತ್ತೊಂದೆಡೆ ಗೆರಿಲ್ಲಾ ಕ್ರಾಂತಿಕಾರಿಗಳ ಸೆಣೆಸಾಟ.

ಇನ್‌ಕ್ವಿಲಾಬ್ ಜಿಂದಾಬಾದ್, ಕ್ರಾಂತಿ ಚಿರಾಯುವಾಗಲಿ ಅಂತ ಬ್ರಿಟೀಷರ ನ್ಯಾಯಾಲಯದಲ್ಲಿ ಘೋಷಣೆ ಮೊಳಗಿಸಿ 'ಸಮಾಜವಾದ'ದ ಬೆಳಕನ್ನು ದೇಶಕ್ಕೆಲ್ಲಾ ಹಂಚುವ ಅವಕಾಶಕ್ಕಾಗಿ ಬ್ರಿಟೀಷ್ ಪಾರ್ಲಿಮೆಂಟಿನಲ್ಲಿ ಬಾಂಬ್ ಹಾಕಿ, ಯಾರನ್ನೂ ಕೊಲ್ಲದೇ-ಓಡಿ ಹೋಗದೇ ಶರಣಾಗಿ ನಿಂತು ಆಮೇಲೆ ನಗು ನಗುತ್ತ ನೇಣುಗಂಬವನ್ನು ಏರಿದ ಭಾರತದ ಅಮರ ಕ್ರಾಂತಿಕಾರಿ ಶಹೀದ್ ಭಗತ್ ಸಿಂಗ್ ಮತ್ತು ಸಂಗಾತಿಗಳಂತೆ-ಚೇ.

ಅಲೆಮಾರಿ

ಹುಟ್ಟಿದ್ದು ಅರ್ಜೆಂಟೈನಾದಲ್ಲಿ. ಮೋಟಾರ್ ಬೈಕ್‌ನಲ್ಲಿ ಸುತ್ತಿದ್ದು ಇಡೀ ದಕ್ಷಿಣ ಅಮೆರಿಕಾ ದೇಶಗಳಲ್ಲಿ. ಯಶಸ್ವಿ ಕ್ರಾಂತಿಗೆ ಹೆಗಲು ಕೊಟ್ಟಿದ್ದು ಕ್ಯೂಬಾದಲ್ಲಿ. ಪ್ರಾಣ ತೆತ್ತದ್ದು ನೀಚ ಸಿಐಎ ನಿರ್ದೇಶಿತ ಬೊಲಿವಿಯ ದೇಶದ ಸರ್ವಾಧಿಕಾರಿಯ ಸೈನಿಕರ ಜೊತೆ ಸೆಣಸಿದ ರಣರಂಗದಲ್ಲಿ. ಯಾವ ದೇಶದವನೆಂದು ಕರೆಯುವುದು ಇವನನ್ನು? ಈ ಪರಿಯ 'ಅಲೆಮಾರಿ'ಯನ್ನು. ಅಮೆರಿಕ ಮತ್ತು ಅಂಥವರ 'ಸುಲಿಗೆ-ಶೋಷಣೆಯೇ ತನ್ನ ಜನರ ದು:ಖಕ್ಕೆ ಕಾರಣ' ಎಂದು ಕಂಡು ಹಿಡಿದು ಹೆಗಲಿಗೆ ಬಂದೂಕು ಏರಿಸಿಕೊಂಡು ಹೊರಟು ಬಿಟ್ಟವನನ್ನು.

ಜಗತ್ತಿನ ಲಕ್ಷ ಲಕ್ಷ ಜನರಿಗೆ ಅದರಲ್ಲೂ ಯುವಜನರಿಗೆ ಚೇ ಎಂಬ ಹೆಸರೇ ಒಂದು ರೋಮಾಂಚನದ ಅಲೆ. ದೀಪದಿಂದ ದೀಪ ಹಚ್ಚಿಕೊಂಡಂತೆ. ಅಂದು ಚೇ ಮತ್ತು ಸಂಗಾತಿಗಳು ಹಚ್ಚಿಟ್ಟಿರುವ 'ಕ್ಯೂಬಾ' ಎಂಬ ಹಣತೆ ಈಗ ವೆನೆಜುವೆಲಾ, ಬೊಲಿವಿಯಾ, ಈಕ್ವೆಡಾರ್, ಚಿಲಿ, ಬ್ರೆಸಿಲ್, ಅರ್ಜೆಂಟೈನಾ ಇನ್ನೂ ಎಲ್ಲೆಲ್ಲೂ ಬೆಳಕು ಚೆಲ್ಲುತ್ತಿದೆ. ಮನುಕುಲದ ಪಯಣಕ್ಕೆ ದೀಪಸ್ತಂಭದಂತೆ. ಪಾತಕಿ ಸಿಐಎ ಏಜೆಂಟರು ಕೊಂದ 'ಚೇ' ಅಲ್ಲಿ ಮೇಲೆ ಬೆಳಕು ಚೆಲ್ಲುತ್ತಾ ನಿಂತಿರುವ ದ್ರುವ ನಕ್ಷತ್ರದಂತೆ.

ಹೊಸಪೇಟೆ: ಚೇ ಜನ್ಮ ದಿನಾಚರಣೆ

ಕ್ರಾಂತಿಕಾರಿ ಹೋರಾಟಗಾರ "ಚೆ ಗುವಾರ" ರವರ ಜನ್ಮ ದಿನಾಚರಣೆ ಅಂಗವಾಗಿ ಜೂನ್ 14 ರಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ) ಹೊಸಪೇಟೆ ತಾಲೂಕು ಸಮಿತಿಯಿಂದ ಕ್ರಿಕೆಟ್ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿತ್ತು.

ಕ್ರಿಕೆಟ್ ಪಂದ್ಯಾವನ್ನು ಉದ್ಘಾಟಿಸಿದ ಡಿವೈಎಫ್‌ಐನ ಜಿಲ್ಲಾಧ್ಯಕ್ಷರಾದ ಬಿಸಾಟಿ ಮಹೇಶ್ ಮಾತನಾಡುತ್ತಾ ವಿಶ್ವದ ಯುವಕರಿಗೆ ಸ್ಫೂರ್ತಿಯ ಚಿಲುಮೆಯಾಗಿರುವ, ಶೋಷಣೆಯ ವಿರುದ್ಧ ಕೊನೆ ಉಸಿರಿರುವವರೆಗೂ ಹೋರಾಡಿದ ಮಹಾನ್ ಕ್ರಾಂತಿಕಾರಿ ಚೆಗುವಾರರವರ ಆದರ್ಶವನ್ನು ಇಂದು ನಮ್ಮಂತಹ ಯುವಕರು ಮೈಗೂಡಿಸಿಕೊಳ್ಳಬೇಕಾಗಿದೆ, ಚೆಗುವಾರರು ನಮ್ಮ ದೇಶದವರಲ್ಲದಿದ್ದರೂ ಅವರು ನಮ್ಮವರೇ ಆಗುತ್ತಾರೆ. ಕಾರಣ ಅವರು "ಶೋಷಣೆ ಮುಕ್ತ ವಿಶ್ವ" ವನ್ನು ನಿರ್ಮಾಣ ಮಾಡಬೇಕೆಂದು ಹೋರಾಡಿದ ವ್ಯಕ್ತಿ. ಅಮೇರಿಕಾ ಸಾಮ್ರಾಜ್ಯಶಾಹಿಯ ದೌರ್ಜನ್ಯಕ್ಕೆ ಒಳಗಾದ ಕ್ಯೂಬ ದೇಶವನ್ನು ಕ್ರಾಂತಿಕಾರಿಯಾದ ಕ್ಯಾಸ್ಟ್ರೋ ಅವರ ಸಂಗಡಿಗರೊಂದಿಗೆ ಕೂ ಕೊಂಡು ಅಮೇರಿಕಾದ ಅಧಿಪತ್ಯ ಕೊನೆಗಾಣಿಸಿದ "ಚೆಗುವಾರ" ಶೋಷ ಒಳಗಾದ ದೇಶಗಳಿಗೆ ನಾಯಕ ನಿಲ್ಲುತ್ತಾರೆ. ಅವರ ಕ್ರಾಂತಿಕಾರಕ ಸಿದ್ಧಾ ವಿಚಾರವು ನಮ್ಮನ್ನು ಬಂಧಿಸಿ ಅಸಮಾನತೆಯ ವಿರುದ್ಧದ ಆಯುಧ. ಅ ನೆನಪಿನಲ್ಲಿ ಡಿವೈಎಫ್‌ಐ ಇಂದು ದೇ ಯುವಜನರ ನೆಚ್ಚಿನ ಆಟವಾಗಿರುವ ಕ್ರಿ ಪಂದ್ಯವನ್ನು ಆಯೋಜಿಸುವುದರ ಮೂ ಕ್ರಿಕೆಟ್‌ನಲ್ಲಿರುವ ಭ್ರಷ್ಟಾಚಾರಕ್ಕೂ ಸ ವಿರೋಧವನ್ನು ವ್ಯಕ್ತಪಡಿಸುತ್ತಿದ್ದೇವೆ. ಸ ಯುವಜನರಲ್ಲಿರುವ ಕ್ರೀಡಾ ಪ್ರತಿಭೆಯ ಉಳಿಸಿ-ಬೆಳೆಸಲು ಈ ರೀತಿಯ ಕಾರ್ಯಕ್ರಮಗಳನ್ನು ಡಿವೈಎಫ಼ ಹಮ್ಮಿಕೊಂಡಿದೆಯೆಂದು ಹೇಳಿದ ನಂತರ ವಿಮಾ ನೌಕರರ ಸಂಘಟನೆ ತಾಲೂಕು ಕಾರ್ಯದರ್ಶಿ ಜೆ.ಪ್ರ ಮಾತನಾಡುತ್ತಾ ಯುವಜನರು ಚೆಗುವಾ ಜೀವನವನ್ನು ಅಧ್ಯಯನ ಮಾಡಿ ಅ ಆದರ್ಶವನ್ನು ಮೈಗೂಡಿಸಿಕೊಂಡು ದೇಶದಲ್ಲಿರುವ ಶೋಷಣೆಯ ವಿರ ಹೋರಾಡಲು ಮುಂದಾಗಬೇಕೆಂದ ನಗರದ ಹೊರ ವಲಯದ ವಾ ಪ್ರೌಢಶಾಲೆಯ ಮೈದಾನದಲ್ಲಿ ನಡೆಸಲ ಈ ಪಂದ್ಯದಲ್ಲಿ ತುಂಬಾ ಉತ್ಸಾಹದಿ ಕ್ರಿಕೆಟ್ ತಂಡಗಳು ಭಾಗವಹಿಸಿದ್ದ ಕಾರ್ಯಕ್ರಮವನ್ನು ಡಿವೈಎಫ್‌ಐ ಕ್ರೀ ಕಾರ್ಯದರ್ಶಿಯಾದ ತಳವಾರ ಹುಲು ನಿರೂಪಿಸಿದರು, ಅಧ್ಯಕ್ಷರಾದ ಎ ಯಲ್ಲಾಲಿಂಗ, ಖಜಾಂಚಿ ಇ.ಮಂಜುನಾ ಬಂಡೆ ತಿರುಕಪ್ಪ, ಸಾಂಸ್ಕೃತಿಕ ಕಾರ್ಯದ ಕೆ.ರಮೇಶ್, ಡಿವೈಎಫ್‌ಐನ ಮುಖಂಡರ ಹನುಮನಾಯ್ಕ್, ಶಿವುಕುಮಾರ್, ರಾ ನಾಣಿಕೇರಿ ರಮೇಶ್, ಹನುಮಂತ , ಪ್ರೇ ಭಾಗವಹಿಸಿದ್ದರು.

ಗ್ರಾಮ ಪಂಚಾಯತ್....

ಪುಟ 5 ರಿಂದ

ಸರಿಯಾದ ಸೇವೆ ಸಲ್ಲಿಸಿ ನ್ಯಾಯವನ್ನು ಕೊಡಲು ಸಾಧ್ಯವೇ ? ನೌಕರರ ಉದ್ಯೋಗ ಭದ್ರತೆಯ ಪ್ರಶ್ನೆ, ವೇತನದ ಪ್ರಶ್ನೆಗಳನ್ನು ಪಂಚಾಯತ್ ವ್ಯವಸ್ಥೆಯ ಸಬಲೀಕರಣದ ಪ್ರಶ್ನೆಯಿಂದ ಹೊರಗಿಟ್ಟು ನೋಡುವುದು ಒಂದು ದೋಷಪೂರಿತವಾದ ದೃಷ್ಟಿಕೋನ. ಅಂತಹ ಸರ್ಕಾರಗಳು ನಿಜವಾಗಿ ಪಂಚಾಯತ್ ವ್ಯವಸ್ಥೆಯನ್ನೂ ಬಲಪಡಿಸುವ ದೃಷ್ಟಿಕೋನ ಹೊಂದಿರುವುದಿಲ್ಲ.

ಅಂತಹ ಸರ್ಕಾರಗಳ ಮೇಲೆ ಒತ್ತಡ ಹೇರುವ ಮೂಲಕವೇ ಆಂದೋಲನ ಹೋರಾಟಗಳ ಮೂಲಕವೇ ಏನನ್ನಾದರೂ ಸಾಧಿಸಲು ಸಾಧ್ಯ.

ವಿಧಾನಸೌಧ ಚಲೋ

ಜೂನ್ 18, 2013 ರಂದು ಗ್ರಾಮ ಪಂಚಾಯತ್ ನೌಕರರ ನೇತೃತ್ವದಲ್ಲಿ ವಿಧಾನಸೌಧ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ರಾಜ್ಯದ ಸು. 27 ಜಿಲ್ಲೆಗಳಿಂದ ಈ ಹೋರಾಟದಲ್ಲಿ ಸುಮಾರು 10 ಸಾವಿರ ಜನ ಭಾಗವಹಿಸಿದ್ದರು. ಬೆಂಗಳೂರಿನ ಸಿಟಿ ರೈಲ್ವೆ ನಿಲ್ದಾಣದಿಂದ ಮೆರವಣಿಗೆ ಹೊರಟು ಶಿಸ್ತು ಬದ್ಧವಾಗಿ ಸಾಗಿ ಸ್ವಾತಂತ್ರ್ಯ ಉದ್ಯಾನವನದಲ್ಲಿ ಸಮಾವೇಶಗೊಂಡಿತು. ಅಲ್ಲಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಎಂ.ಬಿ. ನಾಡಗೌಡ ಬೇಡಿಕೆಗಳ ಬಗ್ಗೆ ವಿವರಿಸಿದರು. ಈ ಹೊರಾಟದ ಮಹತ್ವ ಹಾಗು ಸರಕಾರದ ನಿರ್ಲಕ್ಷ್ಯ ಧೋರಣೆಯನ್ನು ಖಂಡಿಸಿದರು. ಸರಕಾರವೇ ನಿಗದಿ ಪಡಿಸಿದ ಕನಿಷ್ಠ ವೇತನ ಜಾರಿಗೆ ಹಣ, ಎಲ್ಲಾ ನೌಕರರ ಅನುಮೋದನೆ, ಗಣಕಯಂತ್ರ ಸಹಾಯಕರ ಹೊರಗುತ್ತಿಗೆ ರದ್ದತಿ, ಭವಿಷ್ಯ ನಿಧಿಯನ್ನು ಜಾರಿ, ಖಾಯಂಯಾತಿಗಾಗಿ ಬೇಡಿಕೆಗಳನ್ನು ಮುಂದಿಟ್ಟುಕೊಂಡು ನಡೆಯುತ್ತಿರುವ



ಹೋರಾಟ ನ್ಯಾಯಯುತವಾಗಿದೆ. ಸರ್ಕಾರ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿದರು. ಈ ಹೋರಾಟವನ್ನು ಬೆಂಬಲಿಸಿ ಸಿಐಟಿಯುವಿನ ರಾಜ್ಯ ಅಧ್ಯಕ್ಷರಾದ ವಿಜೆಕೆ ನಾಯರ್, ಪ್ರಧಾನ ಕಾರ್ಯದ ಎಸ್. ಪ್ರಸನ್ನಕುಮಾರ್ ಬಹಿರಂಗ ಸಭೆ ಮಾತನಾಡಿದರು.

ಗ್ರಾಮೀಣಾಭಿವೃದ್ಧಿ ಹಾ ಪಂಚಾಯತ್ ರಾಜ್ ಸಚಿವರಾದ ಹೆ ಕೆ. ಪಾಟೀಲ್ ಹಾಗು ಆರ್.ಡಿ.ಪಿ.ಆ ಇಲಾಖೆ ಕಾರ್ಯದರ್ಶಿ ರ ಹೋರಾಟದ ಸ್ಥಳಕ್ಕೆ ಬಂದು ಮನ ಸ್ವೀಕರಿಸಿ ನೌಕರರನ್ನು ಉದ್ದೇ ಮಾತನಾಡಿದರು. ಹತ್ತು ದಿನದ ಇಲಾಖೆಯ ಅಧಿಕಾರಿಗಳು, ಸಂಘ ಮುಖಂಡರನ್ನು ಒಳಗೊಂ ಸಭೆಯನ್ನು ಕರೆದು ಬೇಡಿಕೆಗಳ ಈಡೇರಿಸುವುದಾಗಿ ಭರವಸೆಯ ನೀಡಿದರು. ನಂತರ ಸಂಘಟನೆ ರಾಜ್ಯ ಅಧ್ಯಕ್ಷರಾದ ಮಾ ಮಾನಪಡೆಯವರು ನೌಕರರ ಉದ್ದೇಶಿಸಿ ಮಾತನಾಡಿದರು. ಹೋರಾ ನೇತೃತ್ವವನ್ನು ಸಂಘಟನೆಯ ಪದಾಧಿಕಾರಿಗಳು ವಹಿಸಿಕೊಂ ಯಶಸ್ವಿಗೊಳಿಸಿದರು.

ಶಾಲಾ ಶಿಕ್ಷಣ ರಂಗದಲ್ಲಿ ಗುತ್ತಿಗೆ : ಹೊರಗುತ್ತಿಗೆ
ರಂಗೋಲೆ ಕೆಳಗೆ ತೂರಿರುವ ಶೋಷಣಾ ವ್ಯವಸ್ಥೆ

ಕಾರಕ್ಕೆ ಬಂದ ಒಂದೇ ತಿಂಗಳಲ್ಲಿ ಪ್ರಾಥಮಿಕ ಶಾಲೆಗೆ ಅವಶ್ಯಕವಿರುವ 15 ಸಾವಿರ ಕ್ಷಕರನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡುವ ಮತ್ತೊಂದು ಕೆಲಸಕ್ಕೆ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ ಕೈಹಾಕಿದ್ದಾರೆ. ಅಲ್ಲದೆ ಉನ್ನತ ಕ್ಷಣದಲ್ಲೂ ಹೂರಗುತ್ತಿಗೆ ಆಧಾರದ ನೇಮಕಾತಿಗಳನ್ನು ಪ್ರಕಟಿಸಲಾಗಿದೆ. ಹಾಗಾದರೆ ಬಿಜೆಪಿ ಆಡಳಿತಕ್ಕಿಂತ ಸಿದ್ದರಾಮಯ್ಯ ಸರ್ಕಾರದ ಆಡಳಿತ ಭಿನ್ನ ಹೇಗೆ?

ಕೆ. ಮಹಾಂತೇಶ್

ಪ್ಪತ್ತು ಎಂಬತ್ತರ ದಶಕದವರೆಗೂ ೇಶದಲ್ಲಿ 'ಅತ್ಯಂತ ಶೋಷಕರು' ಎಂದರೆ ಸಗಿ ಕೈಗಾರಿಕೆಗಳ ಮಾಲೀಕರು ಎಂಬ ಾತು ಚಾಲ್ತಿಯಲ್ಲಿತ್ತು. ಮತ್ತು ಅದು ಅಕ್ಷರಶಃ ಜವಾಗಿತ್ತು. ಆದರೆ ಎಂಬತ್ತರ ದಶಕದ ನೆಗೆ ಹಾಗೂ ತೊಂಬತ್ತರ ದಶಕದಲ್ಲಿ ೇಶದಲ್ಲಿ ಆರಂಭಗೊಂಡ ಉದಾರೀಕರಣದ ೀತಿಗಳು ಲಕ್ಷಾಂತರ ಕೈಗಾರಿಕೆಗಳು ಮುಚ್ಚಲು ವಾಗಿ ಕೆಲವೇ ಮಾಲಿಕರನ್ನು ಗುತ್ತೆ ಾರಿ ಕುಟುಂಬಗಳನ್ನಾಗಿ ಬೆಳೆಸಿದವು. ಲದೆಂಬಂತೆ ಸ್ವತಃ ಆಳುವ ಸರ್ಕಾರಗಳೇ ೊಡ್ಡ ಶೋಷಕರೆಂಬ ಹಣೆಪಟ್ಟಿಕಟ್ಟಿಕೊಳ್ಳಲು ರಣೀಭೂತವಾದವು.

ಖಾಸಗೀ ಕಂಪೆನಿ ಅಥವಾ ಮಾಲೀಕರು ಡೆಸುತ್ತಿದ್ದ ನಿರಂತರ ಶೋಷಣೆಯನ್ನು ರಂಭದಲ್ಲಿ ಹಲವಾರು ಕಾನೂನುಗಳನ್ನು ಾರಿ ಮಾಡುವುದರ ಮೂಲಕ ನಿಯಂತ್ರಣ ಾಡಲು ಮುಂದಾದ ಸರ್ಕಾರಗಳು ಂತರದಲ್ಲಿ ವಿದೇಶಿ ಸಾಲದ ಶೂಲಕ್ಕೆ ಲುಕಿದವು. ಇದಕ್ಕೆ ಪರಿಹಾರವಾಗಿ ುಂದುವರೆದ ಬಂಡವಾಳಶಾಹಿ ದೇಶಗಳು ುಟ್ಟು ಹಾಕಿದ ವಿಶ್ವಬ್ಯಾಂಕ್ ಹಾಗೂ ಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಭಿವೃದ್ಧಿ ಹೊಂದುತ್ತಿರುವ ದೇಶಗಳ ಮೇಲೆ ಾಲಗಳನ್ನು ನೀಡುವುದರ ಮೂಲಕ ಹಿಡಿತ ಾಧಿಸಲು ಆರಂಭಿಸಿದವು. ಪರಿಣಾಮವಾಗಿ ುರನ್ನು ಓಡಿಸಿ ಸ್ವಾವಲಂಬನೆಯತ್ತ ುಖ ಮಾಡಿದ್ದ ಭಾರತದಂತಹ ೇಶಗಳು ಮನಃ ವಿದೇಶಿ ಒತ್ತಡಗಳಿಗೆ ುಣಿಯಬೇಕಾಯಿತು. ಪರಿಣಾಮವಾಗಿ ೋಷಣೆಯನ್ನು ತಡೆಗಟ್ಟಬೇಕಾದ ರ್ಕಾರಗಳೇ ಶೋಷಣೆ ಎಂಬ ಅಸ್ತ್ರವನ್ನು ತಮ್ಮ ದಾಳವಾಗಿಸಿಕೊಂಡವು. ಇದರಿಂದಾಗಿ ್ವತಃ ಸರ್ಕಾರದ ಕೆಲಸದಲ್ಲಿಯೇ ಗುತ್ತಿಗೆ, ೂರಗುತ್ತಿಗೆ, ಗೌರವಧನ, ವಿಶ್ವಾಸಾರ್ಹ ೇವೆ ಹೆಸರಿನಲ್ಲಿ ಲಕ್ಷಾಂತರ ಯುವಜನರನ್ನು ಮನಬಂದಂತೆ ದುಡಿಸುವ ಹೊಸ ಶೋಷಣಾ ವ್ಯವಸ್ಥೆಯೊಂದನ್ನ ಹುಟ್ಟು ಹಾಕಲಾಯಿತು.

ತೊಂಬತ್ತರ ದಶಕದಲ್ಲಿ ಈಗಿನ ಪ್ರಧಾನಿ ಮನಮೋಹನ್ ಸಿಂಗ್ ಅವರೇ ಹಣಕಾಸು ಸಚಿವರಾಗಿದ್ದ ಕಾಲದಲ್ಲೇ ದೇಶದಲ್ಲಿ ಜಾ-ರಿಯಾದ ಈ ನೀತಿಗಳಿಂದಾಗಿ ನಮ್ಮ ಕೃಷಿ, ೈಗಾರಿಕೆಗಳಲ್ಲಿ ಅಲ್ಲೋಲ ಕಲ್ಲೋಲವೇ ಉಂಟಾಯಿತು. ಅದರ ಭಾಗವಾಗಿಯೇ ರಾಜ್ಯದಲ್ಲೂ ಉದಾರೀಕರಣ, ಜಾಗತೀಕರಣ ಹಾಗೂ ಖಾಸಗೀಕರಣದ ಭಜನೆಗಳನ್ನು ಜಪಿಸಲಾರಂಭಿಸಲಾಯಿತು. ಅಷ್ಟೋತ್ತಿಗಾಗಲೇ ರಾಜ್ಯ ಸರ್ಕಾರದ ಅಧೀನದಲ್ಲಿರುವ ಕಂದಾಯ, ನೀರಾವರಿ, ಸಮಾಜಕಲ್ಯಾಣ, ಅರಣ್ಯ, ಲೋಕೋಪಯೋಗಿ, ಸಾರಿಗೆ ಸೇರಿದಂತೆ ಇನ್ನೂ ಇತರೆ ರಂಗಗಳಲ್ಲಿ ಈ ಉದಾರೀಕರಣ ನೀತಿಗಳನ್ನು ಜಾರಿಗೊಳಿಸಲಾಗಿತ್ತು. 1999 ರ ನಂತರ ಅಧಿಕಾರ ನಡೆಸಿದ ಎಸ್. ಎಂ. ಕೃಷ್ಣ ಸರ್ಕಾರ ನೇಮಿಸಿದ್ದ ಹಿರಿಯ ಕಾಂಗ್ರೆಸ್ ಮುಖಂಡ ದಿವಂಗತ ಹಾರ್ನಳ್ಳಿ ರಾಮಸ್ವಾಮಿ ನೇತೃತ್ವದ ಆಡಳಿತ ಸು ಧಾರಣಾ ಆಯೋಗವು ರಾಜ್ಯದಲ್ಲಿ 2000 ಇಸ್ವಿ ಸುಮಾರಿನಲ್ಲಿ ಖಾಲಿ ಇದ್ದ ಸುಮಾರು ಒಂದು ಲಕ್ಷ ಸರ್ಕಾರಿ ಹುದ್ದೆಗಳನ್ನು ರದ್ದುಪಡಿಸಲು, ಎಲ್ಲಾ ಸರ್ಕಾರಿ ಇಲಾಖೆಯಲ್ಲಿ ಡಿ, ದರ್ಜೆ ನೌಕರರ ಹುದ್ದೆಗಳನ್ನು ಶಾಶ್ವತವಾಗಿ ರದ್ದುಗೊಳಿಸಲು ಇನ್ನೂ ಇತರೆ ನೌಕರ ವಿರೋಧಿ ಶಿಫಾರಸ್ಸುಗಳನ್ನು ಸರ್ಕಾರ-ಕ್ಕೆ ಸುಧಾರಣೆಯ ಹೆಸರಲ್ಲಿ ನೀಡಿತ್ತು. ಆದರೆ ವಿಪರ್ಯಾಸದ ಸಂಗತಿ ಎಂದರೆ





ಮುಂದೆ ಅಧಿಕಾರಕ್ಕೆ ಬಂದ ಎಲ್ಲಾ ರಾಜ್ಯ ಸರ್ಕಾರಗಳು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸಿ ಹಾಗೂ ಬಿ ಹುದ್ದೆಗಳಿಗೂ ನೇರ ನೇಮಕಾತಿ ಮಾಡದೇ ಕ್ಲರಿಕಲ್ ಹಾಗೂ ಕಂಪ್ಯೂಟರ್ ಆಪರೇಟರ್ ಹಾಗೂ ಬೆರಳಚ್ಚು ಹುದ್ದೆಗಳಲ್ಲಿ ದಿನಗೂಲಿ, ಗುತ್ತಿಗೆ ಪದ್ಧತಿ ಜಾರಿ ಮಾಡಿದವು. ಅಲ್ಲಿಂದ ಸರ್ಕಾರಿ ಉದ್ಯೋಗಗಳ ನಿರೀಕ್ಷೆಯಲ್ಲಿದ್ದ ಲಕ್ಷಾಂತರ ಯುವಜನರ ಕನಸುಗಳಿಗೆ ಎಳ್ಳು ನೀರು ಬಿಡಲಾಯಿತು. ಆದರೆ ದಿನಗೂಲಿಗಳಾಗಿ ದುಡಿದ ಸಾವಿರಾರು ನೌಕರರು ಸಂಘಟಿ-ತರಾಗಿ ನ್ಯಾಯಲದ ಬಾಗಿಲು ತಟ್ಟಿದ್ದರಿಂದ ಅವರಿಗೆ ನ್ಯಾಯದ ಬಾಗಿಲು ತೆರೆಯಿತು. ಇದರಿಂದ ಎಚ್ಚೆತ್ತುಕೊಂಡ ಆಳುವವರು ಅಲ್ಲಿ ಮನಃ ಹೊರಗುತ್ತಿಗೆ ಎಂಬ ಭೂತವನ್ನು ತಂದುಬಿಟ್ಟರು.

ಕಾನೂನಿನ ಭಯವಿಲ್ಲ.

ಈ ಹಿಂದೆ ದಿನಗೂಲಿ ನೌಕರನಾ/ಳಾಗಿ ಯಾವುದೇ ಸರ್ಕಾರಿ ಕಚೇರಿ ಅಥವಾ ಕಂಪನಿಯಲ್ಲಿ ಕನಿಷ್ಟ 240 ದಿನಗಳ ಕಾಲ ಕೆಲಸ ಮಾಡಿದ ದಾಖಲೆ ಹೊಂದಿದ್ದರೆ ಅಂತಹವನು/ಳು ಖಾಯಂಗೊಳ್ಳಲು ಸಂಬಂಧಿಸಿದ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಬಹುದಿತ್ತು. ಇಲ್ಲವೇ ನ್ಯಾಯಾಲದ ಮೊರೆ ಹೋಗಲು ಅವಕಾಶವಿತ್ತು. ಇದೇ ರೀತಿ ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ಕಾರ್ಮಿಕರ ರಕ್ಷಣೆಗಾಗಿ ಹಲವಾರು ನಿಯಮಾವಳಿಗಳು 1970 ರ ಗುತ್ತಿಗೆ ಕಾರ್ಮಿಕ ಕಾನೂನಿನ ಅಡಿಯಲ್ಲಿ ದೊರಕುತ್ತವೆ. ಅಲ್ಲದೆ ನಾಗರೀಕ ಸೇವಾ ನಿಯಮಾವಳಿಗಳ ಅಡಿಯಲ್ಲಿ ಬರುವ ಇಲಾಖೆಗಳನ್ನು ಹೊರತುಪಡಿಸಿ ಉಳಿದ ಸ್ವಾಯತ್ತ ನಿಗಮಗಳಲ್ಲಿ ಇದರ ಲಾಭವನ್ನು ಕಾರ್ಮಿಕರು ಪಡೆಯಬಹುದಾಗಿತ್ತು. ಅಲ್ಲದ ನಿರಂತರ 240 ದಿನಗಳ ಕಾಲ ಕೆಲಸ ಮಾಡಿದ್ದರೆ ಮತ್ತು ಕಾರ್ಮಿಕರು ಹಾಗೂ ನೌಕರರು ಮಾಡುತ್ತಿರುವ ನೌಕರರನ್ನು ಖಾಯಂ ಸ್ವರೂಪದ ಕೆಲಸದಲ್ಲಿ ದುಡಿಸಿಕೊಳ್ಳಲಾಗುತ್ತಿದೆ ಎಂಬುದನ್ನು ಸಾಭೀತುಪಡಿಸಲು ಸಾಧ್ಯವಾದರೆ ಅಂತಹವರು ಖಾಯಂಗೊಳ್ಳುವ ಅವಕಾಶಗಳು ಇರುತ್ತಿದ್ದವು. ಈ ಕುರಿತಂತೆ ದೇಶದ ಸರ್ವೋಚ್ಚ ನ್ಯಾಯಲಯದ ಹೆಸರಾಂತ 'ಏರ್ ಇಂಡಿಯಾ' ಪ್ರಕರಣವನ್ನು ಬಳಸಿ ಸಾವಿರಾರು ನೌಕರರು ಕಾಯಂ ನೌಕರಿಗಳಿಸಿದ್ದಾರೆ. ಆದರೆ ತದನಂತರ 'ಉಮಾದೇವಿ ವರ್ಸಸ್ ಕರ್ನಾಟಕ ಹಾಗೂ ಸ್ಟೀಲ್ ಆಥಾರಿಟಿ ಆಫ್ ಇಂಡಿಯಾ' ಪ್ರಕರಣದಲ್ಲಿ ಇಂತಹ ಅವಕಾಶಗಳನ್ನು ನಿರಾಕರಿಸಿ ಕೇವಲ ಒಂದು ಬಾರಿ ನೇಮಕಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಈಗ ಇಡೀ ದೇಶ ಮಟ್ಟದಲ್ಲಿ ಅಧಿಕಾರಶಾಹಿ ಈ ಪ್ರಕರಣವನ್ನೇ ಮುಂದು ಮಾಡಿ ಹತ್ತಾರು ವರ್ಷ ದುಡಿದವರಿಗೆ ಸ್ವಾಭಾವಿಕ ನ್ಯಾಯವನ್ನು ನಿರಾಕರಿಸುತ್ತಿದ್ದಾರೆ. ಇತ್ತೀಚಿಗೆ ಗ್ರಾಮ ಪಂಚಾಯ್ತಿಗಳಲ್ಲಿ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ಸಾವಿರಾರು ನೌಕರರ ನೇಮಕಾತಿಯನ್ನು ಅನುಮೋದಿಸಲು ನಿರಾಕರಿಸಲಾಗಿದೆ. ಹಾಗೇ ಇನ್ನೂ ಹೊರಗುತ್ತಿಗೆ, ಗೌರವಧನ ಮತ್ತು ವಿಶ್ವಾಸಾರ್ಹ ಹಾಗೂ ಸ್ವಯಂ ಸೇವೆ ಹೆಸರಲ್ಲಿ ದುಡಿಯುತ್ತಿರುವ ನೌಕರರರಿಗೆ ಅಂತಹ ಯಾವ ಅವಕಾಶಗಳು ಲಭ್ಯವಿಲ್ಲದಂತಾಗಿವೆ.

ಬಿಜೆಪಿ ಸರ್ಕಾರದ ಹೊಸ ವರಸೆ

ಕರ್ನಾಟಕ ರಾಜ್ಯದ ಜನತೆ ಬ್ರಹ್ಮಾಂಡ ಭ್ರಷ್ಟಾಚಾರ ನಡೆಸಿದ ಬಿಜೆಪಿಯನ್ನು ವಿಧಾನಸಭಾ ಚುನಾವಣೆಯಲ್ಲಿ ಸೋಲಿಸಿದ ಉಮೇದಿಯಲ್ಲಿದ್ದಾರೆ. ಆದರೆ ಬಿಜೆಪಿ ಆಡಳಿತದಲ್ಲಿ ಜಾರಿಗೆ ತಂದ ನೌಕರ ವಿರೋಧಿ ಕಾರ್ಮಿಕ ವಿರೋಧಿ ನೀತಿಗಳನ್ನು ಬದಲಿಸಲು ಬೇಕಾದ ಹೋರಾಟಗಳನ್ನು ನಡೆಸಿ ಕಾಂಗ್ರೆಸ್ ಸರ್ಕಾರದ ಮೇಲೆ ಒತ್ತಡ ಹಾಕದಿದ್ದರೆ ಮುಂದೆ ಅಪಾಯ ಕಟ್ಟಿಟ್ಟ ಬುತ್ತಿಯೇ ಸರಿ. ಜಗತ್ತಿನಲ್ಲೆಡೆ ದುಡಿಯುವ ವರ್ಗ ವಾರಕ್ಕೆ 35 ಗಂಟೆಗಳಿಗೆ ಕೆಲಸದ ಅವಧಿ ಸೀಮಿತಗೊಳಿಸಬೇಕೆಂಬ ಬೇಡಿಕೆ ಇಟ್ಟು ಹೋರಾಡುತ್ತಿರುವಾಗಲೇ ರಾಜ್ಯದಲ್ಲಿದ್ದ ಬಿಜೆಪಿ ಸರ್ಕಾರ ದಿನದ 8 ಗಂಟೆಯ ಕೆಲಸದ ಅವಧಿಯನ್ನು 10 ಗಂಟೆಗೆ ಏರಿಸಿತು. ಅಲ್ಲದೆ ಗುತ್ತಿಗೆ ಕಾರ್ಮಿಕ ಕಾನೂನಿನ ನಿಯಮಾವಳಿಗಳನ್ನು ಮಾಲೀಕರ ಪರವಾಗಿ

ಪುಟ 15 ಕ್ಕೆ

ತಮಿಳು ನಾಡು: ದಲಿತರ ಮೇಲಿನ ಹಲ್ಲೆ ಮುಂದುವರಿದ ಪಿಎಂಕೆ ದಾಂಧಲೆ

ತಮಿಳು ನಾಡಿನಲ್ಲಿ ಜಾತಿವಾದಿ ಪಕ್ಷಗಳು, ಸಂಘಟನೆಗಳು ಮತ್ತೆ ಸಕ್ರಿಯಗೊಂಡಿವೆ. ಅದರಲ್ಲೂ ಡಾ. ರಾಮದಾಸ್ ನೇತೃತ್ವದ ಪಟ್ಟಾಳಿ ಮಕ್ಕಳ್ ಕಚ್ಚಿ (ಪಿಎಂಕೆ) ರಾಜ್ಯಾದ್ಯಂತ ಜಾತಿವಾದಿ ಹಲ್ಲೆ, ಹಿಂಸಾಚಾರಗಳಲ್ಲಿ ತೊಡಗಿದೆ. ದಲಿತರ ವಿರುದ್ಧ ಶೋಷಿತ ಸಮುದಾಯವರೇ ಆದ ಹಿಂದುಳಿದ ಜಾತಿಯವರನ್ನು ಎತ್ತಿ ಕಟ್ಟುವ ಮೂಲಕ ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿದೆ. ಕಳೆದ ವರ್ಷವೂ ಪಿಎಂಕೆ ಧರ್ಮಪುರಿ ಜಿಲ್ಲೆಯಲ್ಲಿ ದಲಿತರ ವಿರುದ್ಧ ಹಿಂಸಾಚಾರ ನಡೆಸಿತ್ತು. ಈ ವರ್ಷವೂ ಅದು ಮರುಕಳಿಸಿದೆ. ಆದರೆ, ಈ ಬಾರಿ ಪುದುಚ್ಚೇರಿ ಬಳಿಯ ವಿಲುಪ್ಪುರಂ ಜಿಲ್ಲೆಯಲ್ಲಿ.

ಈ ಹಿಂಸಾಚಾರ ನಡೆದದ್ದು ಏಪ್ರಿಲ್ 25ರಂದು. ಪಿಎಂಕೆ ಮತ್ತು 'ವಣ್ಣಿಯಾರ್ ಸಂಗಂ' ಎಂಬ ಜಾತಿವಾದಿ ಸಂಘಟನೆಯೊಂದರ ಯುವಜನೋತ್ಸವ ಮಾಮಲ್ಲಪುರಂನಲ್ಲಿ ನಡೆಯಿತು. ವಣ್ಣಿಯಾರ್ ಸಂಗಂನ ಮುಖ್ಯಸ್ಥ ಹಾಗೂ ಪಿಎಂಕೆ ಶಾಸಕಾಂಗ ಪಕ್ಷದ ನಾಯಕ ಕದುವೆಟ್ಟಿ ಜೆ ಗುರು ಈ ಉತ್ಸವವನ್ನು ಆಯೋಜಿಸಿದ್ದಾಗಿತ್ತು.



ಈ ಉತ್ಸವದ ದಿನ ಮೂರು ಸರ್ಕಾರಿ ಬಸ್‌ಗಳು ಸೇರಿದಂತೆ ಐದು ವಾಹನಗಳಿಗೆ ಗಲಭೆಕೋರರು ಬೆಂಕಿ ಹಚ್ಚಿದರು. 30ಕ್ಕೂ ಹೆಚ್ಚು ವಾಹನಗಳಿಗೆ ಹಾನಿ ಮಾಡಲಾಯಿತು. ಮಾಮಲ್ಲಪುರಂ ಮೂಲಕ ಪುದುಚ್ಚೇರಿಯಿಂದ ಮರಕಣಂಗೆ ತೆರಳುವ ವಾಹನಗಳನ್ನು ಅಡ್ಡಗಟ್ಟಲಾಯಿತು. ಮಾಮಲ್ಲಪುರಂ ಮೂಲಕ ಸಂಚರಿಸುವ ಪ್ರಯಾಣಿಕರಿಗೆ ಇನ್ನಿಲ್ಲದ ಕಿರುಕುಳ ನೀಡಲಾಯಿತು.

ಮರಕಣಂನ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ದಲಿತ ಕಾಲನಿಗಳಿಗೆ ವಣ್ಣಿಯಾರ್ ಸಂಗಂ ಕಾರ್ಯಕರ್ತರು ನುಗ್ಗಿಸು. ಐದು ಗಂಟೆಗಳ ಕಾಲ ಹಿಂಸಾಚಾರ ನಡೆಸಿದರು. ಹಿಂತಿರುಗುವ ವೇಳೆ ಸಿಸಿಟಿವಿಯನ್ನು ಧ್ವಂಸಗೊಳಿಸಲಾಯಿತು. ಟೋಲ್‌ಗೇಟ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಲಾಯಿತು. ಅದರಲ್ಲಿದ್ದ ಹಣವನ್ನು ಲೂಟಿ ಮಾಡಲಾಯಿತು. ಭದ್ರತಾ ಸಿಬ್ಬಂದಿ ಮೇಲೂ ಈ ಕಾರ್ಯಕರ್ತರು ದಯೆ ತೋರಲಿಲ್ಲ. ಈ ಹಿಂಸಾಚಾರದ ಪರಿಣಾಮ ಪುದುಚೇರಿಯಿಂದ ಮರಕಣಂ ವರೆಗಿನ 30 ಕಿ.ಮೀ. ವ್ಯಾಪ್ತಿ ವರೆಗೂ ಇತ್ತು. ಈ ದಾಂಧಲೆ ವಿರುದ್ಧ ರಾಜ್ಯಾದ್ಯಂತ ವ್ಯಾಪಕ ಆಕ್ರೋಶ ವ್ಯಕ್ತವಾಯಿತು. ಸಿಪಿಐ(ಎಂ)

ಕಳೆದ ಏಪ್ರಿಲ್–ಮೇ ತಿಂಗಳಿನಲ್ಲಿ ತಮಿಳುನಾಡಿನಲ್ಲಿ ದಲಿತರ ಮೇಲೆ ನಡೆದ ಜಾತಿವಾದಿಗಳ ದಾಳಿ–ದಾಂಧಲೆಗಳ ವಿವರ ಇದು. ಜಾತಿವಾದಿ ಶಕ್ತಿಗಳು ನಡೆಸುತ್ತಿರುವ ಪುಂಡಾಟಿಕೆ ವ್ಯವಸ್ಥಿತ ಎಂಬಂತೆ ನಡೆಯುತ್ತಲೇ ಇದೆ. – ಸಿಮ್ಮಿಸಿ

ರಾಜ್ಯ ಸಮಿತಿಯೂ ಈ ಹಿಂಸಾಚಾರವನ್ನು ಕಠಿಣ ಶಬ್ಧಗಳಿಂದ ಖಂಡಿಸಿತು. ಏಪ್ರಿಲ್ 28ರಂದು ಹಿಂಸಾಚಾರಕ್ಕೆ ತುತ್ತಾದ ದಲಿತ ಕಾಲನಿಗಳಿಗೆ ಸಿಪಿಐ(ಎಂ) ನಿಯೋಗ ತೆರಳಿತು. ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯ ಕೆ. ಬಾಲಕೃಷ್ಣನ್ ನೇತೃತ್ವದ ಮೂವರು ಸಿಪಿಐ(ಎಂ) ಶಾಸಕರ ನಿಯೋಗ ದಲಿತರ ಯೋಗಕ್ಷೇಮ ವಿಚಾರಿಸಿತು.

ಚಿದಂಬರಂ ಕ್ಷೇತ್ರದ ಶಾಸಕ ಕೆ. ಬಾಲಕೃಷ್ಣ ಅವರ ಜೊತೆಗೆ ವಿಕ್ಕಿರವಂಡಿ ಶಾಸಕ ಕೆ. ರಾಮಮೂರ್ತಿ, ಮದುರವೊಯಲ್ ಶಾಸಕ ಜಿ. ಭೀಮ್ ರಾವ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಟಿ. ಏಳುಮಲೈ ಹಾಗೂ ತಮಿಳುನಾಡು ಅಸ್ಪೃಶ್ಯತಾ ನಿರ್ಮೂಲನಾ ರಂಗದ ನಾಯಕರು ನಿಯೋಗದೊಂದಿಗೆ ಗಲಭೆ ಪೀಡಿತ ಪ್ರದೇಶಕ್ಕೆ ಭೇಟಿ ನೀಡಿದರು.

ದಾಂಧಲೆಯಿಂದ ಹಲವು ಕುಟುಂಬಗಳು ಆಘಾತಕ್ಕೆ ಒಳಗಾಗಿದ್ದವು. ಒಂದಷ್ಟು ಕುಟುಂಬಗಳು ರೇಷನ್ ಕಾರ್ಡ್, ಸರ್ಟಿಫಿಕೇಟ್ ಮುಂತಾದ ಮಹತ್ವದ ದಾಖಲೆ ಪತ್ರಗಳನ್ನು ಕಳೆದುಕೊಂಡಿದ್ದವು. ಅಂಗಾಲಂ ಎಂಬ ಮಹಿಳೆಯಿಂದ 10 ಸವರನ್ ಚಿನ್ನದ ಆಭರಣವನ್ನು ಲೂಟಿ ಮಾಡಲಾಗಿತ್ತು. ಈ ಆಭರಣವನ್ನು ಆಕೆ ಮುಂದಿನ ತಿಂಗಳು ಮದುವೆಯಾಗಲಿದ್ದ ತನ್ನ ಮಗಳಿಗೆ ಖರೀದಿಸಿದ್ದರು. ಇನ್ನು ಮುಲಿಯಮ್ಮ ಅಪಘಾತಕ್ಕೀಡಾದ ತನ್ನ ಪತಿಯ ಸಾವಿನ ಪರಿಹಾರ ಧನವನ್ನೂ ಕಳೆದುಕೊಂಡಿದ್ದರು.

ಕುಡಿತ ಪ್ರಶ್ನಿಸಿದರೆ...

ಸ್ಥಳೀಯರು ನೀಡಿದ ಹೇಳಿಕೆಗಳ ಪ್ರಕಾರ, ಯುವಜನೋತ್ಸವದ ಸಂದರ್ಭದಲ್ಲಿ ವಣ್ಣಿಯಾರ್ ಸಂಗಂ ಮತ್ತು ಪಿಎಂಕೆ ಕಾರ್ಯಕರ್ತರು ಸಾಮಾಜಿಕ ಅರಣ್ಯದಲ್ಲಿ ಮದ್ಯಸೇವನೆ ಮಾಡುತ್ತಿದ್ದರು. ಇದನ್ನು ಪ್ರಶ್ನಿಸಿದ್ದಕ್ಕೆ ಕೋಪಗೊಂಡ ಕಾರ್ಯಕರ್ತರು ದಾಂಧಲೆಗೆ ಮುಂದಾದರು.

ಈ ದಾಂಧಲೆ ಸಂದರ್ಭದಲ್ಲಿ ಹಲವು ಕುಟುಂಬಗಳು ಉಟ್ಟ ಬಟ್ಟೆಯಲ್ಲೇ ಮನೆ ತೊರೆದರು.

ಈಬಗ್ಗೆ ವಿವರಪಡೆದುಕೊಂಡ ಸಿಪಿಐ(ಎಂ) ನಿಯೋಗ ಜಿಲ್ಲಾಡಳಿತದ ನಿರ್ಲಕ್ಷ್ಯ ಹಾಗೂ ಉದಾಸೀನ ಧೋರಣೆಯನ್ನು ಆಕ್ಷೇಪಿಸಿತು. ಪೊಲೀಸ್ ಇಲಾಖೆ ದಾಳಿಕೋರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವ ಬಗ್ಗೆಯೂ ನಿಯೋಗ ಆಘಾತ ವ್ಯಕ್ತಪಡಿಸಿತು. ಸರ್ಕಾರ ಈ ಬಗ್ಗೆ ತಕ್ಷಣ ಮಧ್ಯಪ್ರವೇಶಿಸಿ ಸಂತ್ರಸ್ತ ದಲಿತ ಕುಟುಂಬಗಳಿಗೆ ಪರಿಹಾರ ನೀಡಬೇಕು, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿತು.

ವಿಧಾನಸಭೆಯಲ್ಲೂ ಈ ವಿಷಯ ಪ್ರತಿಧ್ವನಿಸಿತು. ಈ ವಿಷಯವನ್ನು ಎತ್ತಿದ ಸಿಪಿಐ(ಎಂ) ಶಾಸಕರಿಗೆ ಸಿಪಿಐ ಮತ್ತು ವಿಧುತಲೈ ಚಿರುತೈಕಳ್ ಕಚ್ಚಿಗಳು ಬೆಂಬಲ ನೀಡಿದವು.

ಸದನಕಲಾಪಕ್ಕೆಗೈರುಹಾಜರಾಗಿದ್ದ ಪಿಎಂಕೆ ಶಾಸಕಾಂಗ ಪಕ್ಷದ ನಾಯಕ ಹಾಗೂ ವಣ್ಣಿಯಾರ್ ಸಂಗಂನ ನಾಯಕ ಕದುವೆಟ್ಟಿ ಜೆ ಗುರು ಒತ್ತಡಕ್ಕೆ ಮಣಿದು ಕಲಾಪಕ್ಕೆ ಹಾಜರಾಗಿ ತನ್ನ ಹೇಳಿಕೆಯನ್ನು ನೀಡಬೇಕಾಯಿತು.

ಸದನದಲ್ಲಿ ನಡೆದ ಬಿಸಿ ಬಿಸಿ ಕಲಾಪದ ಬಳಿಕ ಸಿಎಂ ಜಯಲಲಿತಾ ಅವ ಪಿಎಂಕೆ ಮತ್ತು ವನ್ನಿಯರ್ ಸಂಗಂ ಹಿಂಸಾಚಾರಕ್ಕೆ ಹೊಣೆ ಎಂದು ಹೇಳಿದರು. ಸಂಘಟನೆಗಳು ಕಾನೂನು ಉಲ್ಲಂಘಿಸಿ ತನ್ನ ಸರ್ಕಾರ ಹಿಂಸಾಚಾರವ ಸಹಿಸುವುದಿಲ್ಲ ಎಂಬ ಹೇಳಿಕೆಯ ನೀಡಿದರು. ಕೋಮುವಾದಿ, ಜಾತಿವ ಅಜೆಂಡಾವನ್ನು ಒಪ್ಪುವುದಿಲ್ಲ. ತಪ್ಪಿತಸ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವು ಎಂದು ಸಿಎಂ ಜಯಲಲಿತಾ ಸದನದ ಭರವಸೆ ನೀಡಬೇಕಾಗಿ ಬಂತು.

ಸಿಎಂ ಹೇಳಿಕೆ ಬಳಿಕ ಪೊಲೀಸ ಪಿಎಂಕೆಯ ಸಂಸ್ಥಾಪಕ ರಾಮ್‌ದಾ ಮತ್ತು ಅಧ್ಯಕ್ಷ ಜಿ.ಕೆ. ಮಣಿ ಮತ್ತು ಪಕ್ಷ ಇತರ ಕಾರ್ಯಕರ್ತರನ್ನು ಬಂಧಿಸಿದರು. ಸುದ್ದಿ ತಿಳಿಯುತ್ತಲೇ ವಣ್ಣಿಯಾರ್ ಸಂಗ ಮತ್ತು ಪಿಎಂಕೆ ಕಾರ್ಯಕರ್ತರು ಮ ಹಿಂಸಾಚಾರ ನಡೆಸಿದರು. ಹಲವು ಬಸ್‌ಗ ಧ್ವಂಸಗೊಂಡರು. ಉತ್ತರದ ಕೆಲವು ಜಿಲ್ಲೆಗಳ ಬಸ್ ಸಂಪರ್ಕ ಕಡಿದುಕೊಂಡಿತು.

ಈ ಮಧ್ಯೆ, ಮದ್ರಾಸ್ ಹೈಕೋರ್ಟ್ ಮಧುರೈ ವಿಭಾಗೀಯ ಪೀಠ ಪಿ ನಾಯಕ ರಾಮ್‌ದಾಸ್ ವಿರುದ್ಧ ಆರೋಪಕ್ಕೆ ಆಧಾರಗಳಿದ್ದಲ್ಲಿ ಪರಿಶೀಲಿ ಪ್ರಕರಣ ದಾಖಲಿಸುವಂತೆ ಪೊಲೀಸರಿ ನಿರ್ದೇಶನ ನೀಡಿತು. ಇದೇ ಪ್ರಕರಣದ ರಾಮದಾಸ್ ಮಗ ಮಾಜಿ ಕೇಂದ್ರ ಮಂ ಡಾ. ಅನ್ಬುಮಣಿಯನ್ನು ಮೇ 5 ರಂದ ಪೋಲಿಸರು ಬಂಧಿಸಿದರು. ಮತ್ತೆ ಅದ ರೀತಿಯ ದಾಂಧಲೆ ನಡೆಯಿತು.

ಒಟ್ಟು ಈ ಗಲಭೆಗಳಲ್ಲಿ ಒಬ್ಬ ಲಾರಿ ಚಾಲ ಮತ್ತು ಹಲ್ಲೆಯಿಂದ ಗಾಯಗೊಂಡಿದ್ದ ದಲಿ ಕಾಲನಿ ನಿವಾಸಿ 'ಸೆಟ್ಟು' ಪುದುಚೆರಿಯ ಆಸ್ಪತ್ರೆಯಲ್ಲಿ ಪ್ರಾಣ ಕಳೆದುಕೊಂಡಿದ್ದಾ ತಮಿಳುನಾಡಿನಲ್ಲಿ ಜಾತಿವಾದದ ವಿಕ್ಷ ನರ್ತನಕ್ಕೆ ಇನ್ನಷ್ಟು ಮುಗ್ದರು, ಶೋಷಿತರ ಬಲಿಯಾಗದಂತೆ ಎಚ್ಚರವಹಿಸುವುದ ಒಂದು ಸವಾಲಾಗಿದೆ.

ನೀವು 'ಜನಶಕ್ತಿ'ಯ ಚಂದಾದಾರರೇ? ಏಜೆನ್ಸಿದಾರರೇ? ದಯವಿಟ್ಟು ಗಮನಿಸಿ

'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಆಡಳಿತ ಮತ್ತು ಪ್ರಸಾರ ನಿರ್ವಹಣೆಯ ಜವಾಬ್ದಾರಿ ಬದಲಾವಣೆಯಾಗಿರುವುದನ್ನು ಈಗಾಗಲೇ ಗಮನಿಸಿದ್ದೀರಿ ಎಂದು ಭಾವಿಸುತ್ತೇವೆ. ಹೊಸ ಚಂದಾಗಳ ನೀಡಿಕೆ, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವ ಬಗೆಗಿನ ದೂರುಗಳು, ಏಜೆನ್ಸಿದಾರರ ಪತ್ರಿಕೆಗಳ ಹೆಚ್ಚಳ, ಬಾಕಿ ವಿಚಾರಣೆ, ಹಣ ಪಾವತಿ, ದೂರುಗಳು ಹಾಗೂ ಜಾಹಿರಾತುಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರ, ವಿಚಾರಣೆ ಇತ್ಯಾದಿಗಳನ್ನು ಇನ್ನು ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡುವುದು. ಕಚೇರಿಯ ನೇರ ಸಂಪರ್ಕವು ಕಛೇರಿ ಕಾರ್ಯ ನಿರ್ವಹಿಸುವ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ ಎಂಬುದನ್ನು ಗಮನಿಸ ತಕ್ಕದ್ದು.

ವಿಳಾಸ : 'ಜನಶಕ್ತಿ' ಆಡಳಿತ ಕಚೇರಿ,
c/o. ಕ್ರಿಯಾ ಪ್ರಕಾಶನ, ಸೂರಿ ಭವನ, # 40/5, 2ನೇ 'ಬಿ' ಮೈನ್, 16ನೇ ಕ್ರಾಸ್,
ಸಂಪಂಗಿರಾಮನಗರ, ಬೆಂಗಳೂರು–560027
email : janashakthi13.admn@gmail.com
Phone. 22234369
ಹೆಚ್.ಆರ್.ಸವಿತ ರಾಣಿ : 9483966467,
ಜಿ.ಚಂದ್ರಶೇಖರ್ : 9448578021
(ಕಾರ್ಯಾಲಯದ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆವರೆಗೆ)

ವಿದ್ಯುತ್ ಮತ್ತು ರಸಗೊಬ್ಬರ ದರ ಏರಿಕೆಗಳಿಗೆ ರಂಗಸಿದ್ಧತೆ!

ಯುಪಿಎ-2 ಸರಕಾರ ತನ್ನದೇ ರಸಗೊಬ್ಬರ ಮತ್ತು ್ಯುತ್ ಇಲಾಖೆಗಳ ವಿರೋಧವಿದ್ದರೂ ನೈಸರ್ಗಿಕ ಅನಿಲದ ಗಳನ್ನು ಏರಿಸುವ ಯೋಚನೆ ನಡೆಸಿತ್ತು. ಈ ಬಗ್ಗೆ ಸದ್ಯದಲ್ಲೇ ಂಭವಾಗಲಿರುವ ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ್ಸುವ ಮೊದಲೇ ದರ ಏರಿಕೆಯನ್ನು ತರಾತುರಿಯಲ್ಲಿ ಯುಪಿಎ-2 ಸರಕಾರ ಮಾಡಿದೆ. ಇದನ್ನು ಎಡಪಕ್ಷಗಳು ವಾಗಿ ಖಂಡಿಸಿವೆ.

ಜನಸಾಮಾನ್ಯರಿಗಾಗಿ ಇರುವ ಸಬ್ಸಿಡಿಗಳನ್ನು ಕಡಿತ ಡಬೇಕೆನ್ನುವ ಸರಕಾರದ ಸಬ್ಸಿಡಿ ಹೊರೆ ಈ ಕ್ರಮದಿಂದ ಮಾರು 1.5ಲಕ್ಷ ಕೋಟಿ ರೂ.ಗಳಷ್ಟು ಏರುತ್ತದೆ. ಇಲ್ಲವೇ ರ್ಗಿಕ ಅನಿಲವನ್ನು ಅವಲಂಬಿಸಿರುವ ವಿದ್ಯುತ್ ಮತ್ತು ಗೊಬ್ಬರಗಳ ಬೆಲೆಯೇರಿಕೆಗಳಿಗೆ ಇದು ಕಾರಣವಾಗುತ್ತದೆ. ತಹ ಏರಿಕೆಗಳು ಅಸಮರ್ಥನೀಯ, ರೈತರ ಸಂಕಟಗಳನ್ನು ಷ್ಟು ಹೆಚ್ಚಿಸುವ ಕ್ರಮ.

ದೆಡೆ ದರ ಏರಿಕೆಗೆ ರಸಗೊಬ್ಬರ ಮತ್ತು ವಿದ್ಯುತ್ ಾಖೆಗಳ ವಿರೋಧ ಇದೆ. ದರ ಏರಿಕೆಯನ್ನು ಬೆಂಬಲಿಸುವ ಟ್ರೋಲಿಯಂ ಮತ್ತು ಹಣಕಾಸು ಇಲಾಖೆ ಹಾಗೂ ೋಜನಾ ಆಯೋಗದ ಏರಿಕೆ ಶಿಫಾರಸುಗಳು ಭಿನ್ನವಾಗಿವೆ. ಾವುದೇ ಭಿನ್ನಾಭಿಪ್ರಾಯವಿದ್ದರೂ ಅವುಗಳ ಪರಿಹಾರಕ್ಕೆ ಂತ್ರಿಗಳ ಗುಂಪು'(ಜಿಒಎಂ) ರಚಿಸುವ ಸರಕಾರ ಈ ಬಗ್ಗೆ ರಕ್ಕೆ ಮುಂದಾಗಿಲ್ಲ ಏಕೆ ? ನೈಸರ್ಗಿಕ ಅನಿಲದ ದರಗಳನ್ನು ಲರುಗಳಲ್ಲಿ ನಮೂದಿಸುವುದೇಕೆ ಎಂಬ ಪ್ರಶ್ನೆಗಳು ಈಗ ದ್ದಿವೆ. ಸಬ್ಸಿಡಿ ಏರಿಕೆಯಾಗಲೀ, ದರ ಏರಿಕೆಯಾಗಲೀ ದರ ಪ್ರಯೋಜನದ ಸಿಂಹಪಾಲು(90ಶೇ.) ಒಂದೇ ಖಾಸಗಿ ಪೋರ್ರೇಟ್‌ಗೆ(ಮುಕೇಶ್ ಅಂಬಾನಿಯ ಆರ್‌ಐಎಲ್‌ಗೆ) ಕ್ಕಲಿದೆ ಎಂಬುದನ್ನು ಇಲ್ಲಿ ಗಮನಿಸಬೇಕಿದೆ.

ನೈಸರ್ಗಿಕ ಅನಿಲದ ಈಗಿನ ದರ ಪ್ರತಿ ಒಂದು ಎಂಬಿಟಿಯುಗೆ 4.2 ಡಾಲರು. ಅದನ್ನು ಎಪ್ರಿಲ್ 14ರಿಂದ 8.4 ಡಾಲರಿಗೆ ಏರಿಸಬೇಕೆಂಬುದು ರಂಗರಾಜನ್ ಮಿತಿಯ ಶಿಫಾರಸು. ಪೆಟ್ರೋಲಿಯಂ ಇಲಾಖೆ ಮೊದಲ ವರ್ಷಗಳಿಗೆ ಈ ದರವನ್ನು ಒಪ್ಪಿದೆ. ನಂತರದ ಎರಡು ರ್ಷಗಳಿಗೆ 14 ಡಾಲರ್(ಮಾರುಕಟ್ಟೆ ದರ) ಇರಬೇಕು ಹೇಳಿದೆ. ಯೋಜನಾ ಆಯೋಗ ಮೊದಲ 3 ವರ್ಷಕ್ಕೆ 2 ಡಾಲರಿಗೆ ಏರಿಸಬೇಕು ಎಂದು ಹೇಳಿದರೆ, ಹಣಕಾಸು ಲಾಖೆ ಇದನ್ನು 11ಡಾಲರುಗಳಿಗೆ ಏರಿಸಬೇಕು ಎಂದಿದೆ. ಂತರದ ಎರಡು ವರ್ಷಗಳಿಗೆ 14 ಡಾಲರ್ ಇರಬೇಕು ಂಬುದರ ಬಗ್ಗೆ ಅವುಗಳ ಭಿನ್ನಾಭಿಪ್ರಾಯ ಇಲ್ಲ.

ಈ ಶಿಫಾರಸುಗಳ ಪರಿಣಾಮವೆಂದರೆ ಸರಕಾರದ ಸಬ್ಸಿಡಿ ೊತ್ತ ಮುಂದಿನ 5 ವರ್ಷಗಳಿಗೆ ರಂಗರಾಜನ್ ಸಮಿತಿಯ ಫಾರಸು ಪ್ರಕಾರ 90,000 ಕೋಟಿ ರೂ.ಗಳಷ್ಟು ಹೆಚ್ಚುತ್ತದೆ. ಟ್ರೋಲಿಯಂ, ಹಣಕಾಸು ಮತ್ತು ಯೋಜನಾ ಆಯೋಗದ ಫಾರಸುಗಳ ಪ್ರಕಾರ ಅದು ಅನುಕ್ರಮವಾಗಿ 1.38ಲಕ್ಷ ೋಟಿ, 1.46 ಲಕ್ಷ ಕೋಟಿ ಹಾಗೂ 1.48 ಲಕ್ಷ ಕೋಟಿ ರೂ. ಳಷ್ಟು ಏರುತ್ತದೆ. ಹಣಕಾಸು ಮುಗ್ಗಟ್ಟು ಎದುರಿಸುತ್ತಿರುವ ಯುಪಿಎ-2 ಸರಕಾರ ಇದನ್ನು ಭರಿಸಲಾಗದೆ ದರ ಏರಿಕೆಗಳಿಗೆ ರಣಾಗುತ್ತದೆ ಎಂದು ಖಂಡಿತ. ರಂಗರಾಜನ್ ಸಮಿತಿ ಫಾರಸು ಒಪ್ಪಿಕೊಂಡರೆ ವಿದ್ಯುತ್ ದರದಲ್ಲಿ ಯುನಿಟ್‌ಗೆ ರೂ.ಗಳಷ್ಟು ಹೆಚ್ಚಿಸಬೇಕಾಗುತ್ತದೆ. ಪೆಟ್ರೋಲಿಯಂ ಇಲಾಖೆ ಫಾರಸು ಒಪ್ಪಿಕೊಂಡರೆ 3 ರೂ. ಹಣಕಾಸು ಇಲಾಖೆ ಸು ಒಪ್ಪಿಕೊಂಡರೆ 3.2 ರೂ ಮತ್ತು ಯೋಜನಾ ಯೋಗದ ಶಿಫಾರಸಿನ ಪ್ರಕಾರ 3.3 ರೂ.ಗಳಷ್ಟು ರಿಸಬೇಕಾಗುತ್ತದೆ. ಅದೇ ರೀತಿ ರಸಗೊಬ್ಬರ ಬೆಲೆಗಳು ಪ್ರತಿ ಮೆಟ್ರಿಕ್ ಟನ್‌ಗೆ ಅನುಕ್ರವಾಗಿ 6000, 9200, 9700 ಮತ್ತು 9900 ರೂ.ಗಳಷ್ಟು ಏರುತ್ತವೆ.

ಆರ್ಥಿಕದ ನಿಧಾನಗತಿ ಮತ್ತು ನಿರಂತರ ಹಣದುಬ್ಬರದಿಂದಾಗಿ ಇಂತಹ ದರ ಏರಿಕೆಗಳು ಭಾರತೀಯ ಆರ್ಥಿಕಕ್ಕೆ ಮರಣಾಂತಿಕ ಪ್ರಹಾರಗಳಾಗಬಹುದು. ಅವು ಜನತೆಯ, ವಿಶೇಷವಾಗಿ ರೈತರ ಸಂಕಟಗಳನ್ನು ಇನ್ನಷ್ಟು ಹೆಚ್ಚಿಸುತ್ತವೆ ಎಂದು ಈ ಒಟ್ಟು ವಿಷಯವನ್ನು ಈ ಮೇಲಿನಂತೆ ವೈಜ್ಞಾನಿಕವಾಗಿ, ತರ್ಕಬದ್ಧವಾಗಿ ವಿಶ್ಲೇಷಿಸಿರುವ ಎಡಪಕ್ಷಗಳು ಎಚ್ಚರಿಸಿವೆ.

ಒಂಭತ್ತು ವರ್ಷಗಳಾದವು, 'ಕಾಶ್ಮೀರ ಪ್ಯಾಕೇಜಿ'ನ ಗತಿಯೇನು?


ಪ್ರಧಾನ ಮಂತ್ರಿಗಳು ಮತ್ತು ಯುಪಿಎ ಅ ಧ್ಯಕ್ಷರು ಕಾಶ್ಮೀರ ಪ್ರವಾಸದಲ್ಲಿದ್ದಾರೆ. 1672ಕೋಟಿ ರೂ.ಗಳ ಬನಿಹಾಲ್- ಕಾಝಿಗುಂದ್ ರೈಲ್ವೆ ಸುರಂಗ ಮಾರ್ಗವನ್ನು ಉದ್ಘಾಟಿಸಿದ್ದಾರೆ. ಇದು ದೇಶದ ರೈಲು ಜಾಲದೊಂದಿಗೆ ಕಾಶ್ಮೀರ ಕಣಿವೆಯನ್ನು ಜೋಡಿಸುವ ಬನಿಹಾಲ್-ಕತ್ರಾ ರೈಲು ಯೋಜನೆಯ ಭಾಗ. ಆ ಸಂದರ್ಭದಲ್ಲಿ ಮಾತನಾಡುತ್ತ ರಾಜ್ಯದ ಮುಖ್ಯಮಂತ್ರಿಗಳು ಯುಪಿಎ-3 ಸರಕಾರ ಅಧಿಕಾರಕ್ಕೆ ಬಂದು ಈ ಯೋಜನೆಯನ್ನು ಪೂರ್ಣಗೊಳಿಸುತ್ತದೆ ಎಂಬ



ವಿಶ್ವಾಸವನ್ನು ವ್ಯಕ್ತ ಪಡಿಸಿದರು.

ಆದರೆ ಕಾಶ್ಮೀರದ ಜನತೆಗೆ ಅಂತಹ ವಿಶ್ವಾಸ ಇದ್ದಂತಿಲ್ಲ. ಭಾರತ-ಪಾಕಿಸ್ತಾನದ ನಡುವೆ ಶಾಂತಿಯುತ ಬಾಂಧವ್ಯ ಈ ಭಾಗದ ಜನತೆಗೆ ಬಹಳ ಮುಖ್ಯ. ಆ ದಿಕ್ಕಿನಲ್ಲಿ ಇರುವ ಅವಕಾಶಗಳನ್ನು ಪೂರ್ಣವಾಗಿ ಬಳಸಿಕೊಂಡಿಲ್ಲ ಎಂಬ ಅಸಮಾಧಾನವಿದೆ. ನಿರುದ್ಯೋಗದೊಂದಿಗೆ ಇಲ್ಲಿ ಸಶಸ್ತ್ರ ಪಡೆಗಳಿಗೆ ವಿಶೇಷ ಅಧಿಕಾರ ನೀಡಿರುವ ಕಾನೂನಿನ ಮುಂದುವರಿಕೆ ವಿಶೇಷವಾಗಿ ಯುವಜನರನ್ನು ಬಾಧಿಸುತ್ತಲೇ ಇದೆ. ಜೊತೆಗೆ 9 ವರ್ಷಗಳ ಹಿಂದೆ ಪ್ರಧಾನ ಮಂತ್ರಿಗಳು ಪ್ರಕಟಿಸಿದ್ದ 'ಪ್ಯಾಕೇಜಿ'ನ ಗತಿಯೇನು ಎಂದು ಕಾಶ್ಮೀರದ ಜನತೆ ಕೇಳುವಂತಾಗಿದೆ. 2004ರಲ್ಲಿ ಐದು ವರ್ಷಗಳಲ್ಲಿ ರೂ. 24090.47 ಕೋಟಿ ರೂ.ಗಳ ಮೊತ್ತದ 67 ಪ್ರಾಜೆಕ್ಟುಗಳನ್ನು ಪೂರೈಸುವ ಭರವಸೆ ನೀಡಲಾಗಿತ್ತು. ಈಗ ಆ ಪ್ರಾಜೆಕ್ಟುಗಳ ವೆಚ್ಚ ರೂ. 35261.04 ಕೋಟಿಗೇರಿದೆ. ಆದರೆ ಸರಕಾರ ಮಂಜೂರು ಮಾಡಿರುವುದು ಇದರ 39.72ಶೇ.ದಷ್ಟು ಮಾತ್ರ. ಬಹುಶಃ ಉಳಿದವನ್ನು ಈಡೇರಿಸಲು ಇನ್ನೂ 5 ವರ್ಷಗಳ ಅವಕಾಶವನ್ನು ಯುಪಿಎ ಪರವಾಗಿ ಆ ರಂಗದ ಭಾಗವಾಗಿರುವ ರಾಜ್ಯದ ಮುಖ್ಯಮಂತ್ರಿಗಳು ಕೇಳುತ್ತಿದ್ದಾರೆ.

ಈ 'ಪ್ಯಾಕೇಜಿ'ನಲ್ಲಿ 3 ಭಾಗಗಳಿದ್ದವು. ರೂ.6199.66 ಕೋಟಿಗಳ ಮೊತ್ತದ ಒಂದು ಭಾಗವನ್ನು ರಾಜ್ಯಸರಕಾರ ಈಡೇರಿಸಬೇಕೆಂದಿತ್ತು. ರಾಜ್ಯಸರಕಾರವೇನೋ ರೂ. 4849.89 ಕೋಟಿ ಖರ್ಚು ಮಾಡಿ 78.22% ಪೂರೈಸಿದೆ.



ವೇದರಾಜ ಎನ್.ಕೆ.

ಅದು 5ವರ್ಷಗಳಲ್ಲಿ ಅಲ್ಲ. 9 ವರ್ಷಗಳಲ್ಲಿ. ಆದರೆ ಈ 'ಪ್ಯಾಕೇಜಿ'ನ ಮೂರನೇ ಎರಡು ಭಾಗದಷ್ಟರ ಜವಾಬ್ದಾರಿಯಿದ್ದ ಯುಪಿಎ ಸರಕಾರಕ್ಕೆ ಎರಡನೇ ಅವಕಾಶ ಕೊಟ್ಟರೂ ಇದುವರೆಗೆ ಈಡೇರಿಸಿರುವುದು ಸ್ವತಃ ಪ್ರಧಾನ ಮಂತ್ರಿಗಳು ಹೇಳಿರುವ ಪ್ರಕಾರವೂ 67 ರಲ್ಲಿ 34 ಮಾತ್ರ. ಯುಪಿಎ ಸರಕಾರ ಬಹುವಾಗಿ ಹೇಳಿಕೊಳ್ಳುವ, ಮೂರು ಪ್ರಾಜೆಕ್ಟುಗಳು, ಜವಹರಲಾಲ್ ನೆಹರೂ ನಗರ ನವೀಕರಣ ಮಿಶನ್(ಜೆಎನ್‌ಎನ್‌ಆರ್‌ಯುಎಂ) ಮಹಾಯೋಜನೆಗಳಾದ ಜಮ್ಮು ಮತ್ತು ಶ್ರೀನಗರ ನಗರ ಚರಂಡಿ ವ್ಯವಸ್ಥೆ ಪ್ರಾಜೆಕ್ಟುಗಳು ಮತ್ತು ಜಮ್ಮು ನಗರ ನೀರು ಪೂರೈಕೆ ಯೋಜನೆಗೆ ಇದುವರೆಗೂ ಒಂದು ಪೈಸೆಯನ್ನೂ ನೀಡಿಲ್ಲ ಎನ್ನಲಾಗುತ್ತಿದೆ. ಹೀಗಿರುವಾಗ ಯುಪಿಎಗೆ ಮೂರನೇ ಅವಕಾಶವನ್ನು ಕೇಳುವ ಧೈರ್ಯವನ್ನು ರಾಜ್ಯದ ಮುಖ್ಯಮಂತ್ರಿಗಳು ಮಾಡಿದ್ದಾರೆ!

**ಹೆಸರಿಗೆ ಬುಡಕಟ್ಟು ಕಲ್ಯಾಣ ನಿಧಿ,
ಬಳಕೆ ಯಾವುದೋ 'ಕಲ್ಯಾಣ'ಕ್ಕೆ**

ಬುಡಕಟ್ಟು ಜನಗಳ ಪರಿಸ್ಥಿತಿ ಸುಧಾರಣೆಗಾಗಿ 1974ರಲ್ಲಿ 'ಬುಡಕಟ್ಟು ಉಪ ಯೋಜನೆ'(ಟಿಎಸ್‌ಪಿ) ಆರಂಭಿಸಲಾಯಿತು. ಇದರ ಪ್ರಕಾರ ಪ್ರತಿಯೊಂದು ಸರಕಾರೀ ಇಲಾಖೆಯೂ ತನ್ನ ಬಜೆಟಿನ ಒಂದು ನಿರ್ದಿಷ್ಟ ಪ್ರಮಾಣವನ್ನು ಬುಡಕಟ್ಟು ಜನಗಳ ಕಲ್ಯಾಣಕ್ಕೆ ಮೀಸಲಾದ ಕ್ರಮಗಳಿಗಾಗಿ ವಿನಿಯೋಗಿಸಬೇಕು. ಯುಪಿಎ-2 ಸರಕಾರ 2010-11ರಿಂದ ಇದಕ್ಕೆ ತನ್ನ 28 ಇಲಾಖೆಗಳನ್ನು ಮೂರು ವಿಧಗಳಾಗಿ ವಿಂಗಡಿಸಿ ಅವು ತಮ್ಮ ಬಜೆಟಿನ 7.5ಶೇ./ಕನಿಷ್ಟ 7.5ದಿಂದ 8.2%ದ ವರೆಗೆ/ಕನಿಷ್ಟ 8.2% ಬುಡಕಟ್ಟು ಜನಗಳಿಗೇ ಮೀಸಲಾದ ಯೋಜನೆಗಳಿಗೆ ವಿನಿಯೋಗಿಸಬೇಕು ಎಂದು ವಿಧಿಸಿತ್ತು.

ಆದರೆ ಯುಪಿಎ-2 ಸರಕಾರದ ಹೆಚ್ಚಿನ ಇಲಾಖೆಗಳು ಇದನ್ನು ಪಾಲಿಸಿಲ್ಲ, ಕೆಲವು ಇಲಾಖೆಗಳು ಈ ಹಣವನ್ನು ಬಳಸುವ ಯಾವ ಯೋಜನೆಗಳನ್ನೂ ರೂಪಿಸಿಲ್ಲ. ಕೆಲವಂತೂ ಬೇರೆಯೇ ಕೆಲಸಗಳಿಗೆ ಅವನ್ನು ಬಳಸಿಕೊಂಡಿವೆ ಎಂದು 'ಇಕನಾಮಿಕ್ ಟೈಮ್ಸ್' ಪತ್ರಿಕೆ ಮಾಹಿತಿ ಹಕ್ಕು ಕಾನೂನಿನ ಅಡಿಯಲ್ಲಿ ಪಡೆದ ಮಾಹಿತಿಯಿಂದ ತಿಳಿದು ಬಂದಿದೆ. ಉದಾ: ಶಿಕ್ಷಣ ಇಲಾಖೆ ಈ ಉಪಯೋಜನೆಯ 55%ದಷ್ಟನ್ನು ಎಲ್ಲ ಜನವಿಭಾಗಳನ್ನೂ ಒಳಗೊಂಡಿರುವ ಸರ್ವ ಶಿಕ್ಷಣ ಅಭಿಯಾನದಂತಹ ಕಾರ್ಯಕ್ರಮಗಳಿಗೆ ಬಳಸಿಕೊಂಡಿದೆ. ಕಲ್ಲಿದ್ದಲು ಮತ್ತು ಗಣಿ ಇಲಾಖೆಗಳು ಬುಡಕಟ್ಟು ಕಲ್ಯಾಣ ನಿಧಿಗಳನ್ನು ಗಣಿಗಳಿಗೆ, ಲೋಹ ಉದ್ದಿಮೆಗಳಿಗೆ ಹಾಕಿವೆ. ಬುಡಕಟ್ಟು ಜನಗಳಿಗಲ್ಲ. ಈ ರೀತಿ ಬುಡಕಟ್ಟು ಕಲ್ಯಾಣದ ಹಣವನ್ನು ಬೇರೆ ಬಾಬ್ತುಗಳಿಗೆ ಬಳಸಿರುವುದರಲ್ಲಿ ಮಾನವ ಸಂಪನ್ಮೂಲ ಇಲಾಖೆಯದ್ದೇ ಅಗ್ರಸ್ಥಾನವಂತೆ. ಇಂಡಿಯನ್ ಬ್ಯೂರೋ ಆಫ್ ಮೈನ್ಸ್ ತನ್ನ ಬಜೆಟಿನ 12.4ಶೇ.ರಷ್ಟನ್ನು ಬಳಸದೇ ಹಿಂದಿರುಗಿಸಬೇಕಾಗಿ ಬಂದಿದೆ. ಬುಡಕಟ್ಟು ಕಲ್ಯಾಣಕ್ಕೆ ಯೋಜನೆಗಳನ್ನು ರೂಪಿಸುವ ಅವಕಾಶವಾಗಲೀ, ಪರಿಣತಿಯಾಗಲೀ ತಮಗಿಲ್ಲ ಎಂಬುದು ಅವರ ಸಮಜಾಯಿಷಿ.


ಈ ಮಾಹಿತಿ ಬುಡಕಟ್ಟು ವ್ಯವಹಾರಗಳ ಮಂತ್ರಿಗಳನ್ನೂ ತಬ್ಬಿಬ್ಬುಗೊಳಿಸಿದೆಯಂತೆ. ಬೇರೆ-ಬೇರೆ ಇಲಾಖೆಗಳು ಈ ನಿಧಿಗಳನ್ನುಬಳಸುವ ವಿಧಾನಗಳನ್ನುದುರಸ್ತುಗೊಳಿಸಬೇಕಾಗಿದೆ ಎಂದು ಅವರು ಹೇಳಿದ್ದಾರೆ.

ಕನಿಷ್ಠ ವೇತನ ನಿಗದಿಗೆ ಆಗ್ರಹಿಸಿ, ಕೇಂದ್ರ–ರಾಜ್ಯ ಸರಕಾರದ ಮೇಲೆ ಕಾರ್ಮಿಕರ ಒತ್ತಾಯ – ಬೆಳಗಾವಿ.

ಅಗತ್ಯ ವಸ್ತುಗಳ ಬೆಲೆ ಹೆಚ್ಚಳದಿಂದಾಗಿ ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ವೇತನ ಇಲ್ಲದೇ ಜೀವನ ನಡೆಸುವುದು ದುಸ್ತರವಾಗಿದೆ. ಕೂಡಲೆ ಬೆಲೆ ಏರಿಕೆ ಆಧಾರದಲ್ಲಿ ಕನಿಷ್ಠ ವೇತನ ನಿಗದಿ ಮಾಡಲೇಬೇಕೆಂದು ಘೋಷಣೆಗಳನ್ನು ಕೂಗುತ್ತಾ ಬೆಳಗಾವಿ ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ಅಸಂಘಟಿತ ಕಾರ್ಮಿಕರು ಕೇಂದ್ರ ಹಾಗೂ ರಾಜ್ಯ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿದರು.

ಬೆಳಗಾವಿ ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ಪ್ರತಿ ತಾಲೂಕಾ ಅಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಕೇಂದ್ರ–ರಾಜ್ಯ ಸರಕಾರಗಳು ಕಾರ್ಮಿಕರ ಪರ ಅನುಸರಿಸುತ್ತಿರುವ ಧೋರಣೆ, ಕಾರ್ಮಿಕರ ಮೇಲೆ ನಡೆಸುತ್ತಿರುವ ಹಲ್ಲೆಗಳು, ಅವರು ನೀಡುತ್ತಿರುವ ಸುಳ್ಳು ಭರವಸೆಗಳನ್ನು ಜನರಿಗೆ ಮನದಟ್ಟಾಗುವ ಹಾಗೆ ಕರಪತ್ರಗಳನ್ನು ಹಂಚಿ ಆ ಮೂಲಕ ಸರಕಾರಗಳ ಬಣ್ಣ ಬಯಲು ಮಾಡಿದಂತಾಗಿದೆ.

ಒಂದು ತಿಂಗಳ ಹಿಂದೆ ರಾಜ್ಯದಲ್ಲಿ ಬಂದ ಕಾಂಗ್ರೇಸ್ ಸರಕಾರವಾದರೂ ಈ ಸಲ ನಮ್ಮ ವೇತನ ಹೆಚ್ಚಳ ಮಾಡಬಹುದೇನೋ ಎಂದು ಒಬ್ಬ ಅಕ್ಷರ ದಾಸೋಹ ಅಕ್ಕಾ ಪ್ರಶ್ನೆ ಮಾಡುತ್ತಿದ್ದಳು. ನಮ್ಮ ಕಡೆಯಿಂದ ಮತಗಿಟ್ಟಿಸಿಕೊಂಡು ಬೆಂಗಳೂರು ವಿಧಾನಸಭೆಯಲ್ಲಿ ಮಜಾ ಮಾಡಲು ಹೋದವರು ಸಂಬಳ ಹೆಚ್ಚು ಮಾಡಲು ವಿಧಾನಸಭೆಯಲ್ಲಿ ಕೂಗು ಹಾಕಿದರೆ ಮಾತ್ರ ಸಂಬಳ ಹೆಚ್ಚಾಗಬಹುದು. ಇಲ್ಲವಾದಲ್ಲಿ ನಾವು ನಮ್ಮ ಹೋರಾಟದಿಂದಲೇ ನಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕೆಂದು ಅಕ್ಷರ ದಾಸೋಹ ನೌಕರರಿಗೆ ಸರಕಾರದ



ಪ್ರತಿನಿಧಿಗಳ ನೀತಿಯನ್ನು ತಿಳಿಸಿ ಹೇಳಲಾಯಿತು.

ಸರ್. ಕಳೆದ ಫೆಬ್ರುವರಿಯಲ್ಲಿ ನಾವು ಎರಡು ದಿನ ಮುಷ್ಕರ ಮಾಡಿ ಪಗಾರು ಹೆಚ್ಚು ಮಾಡ್ರಿ ಅಂತಾ ಕೇಳಿದ್ದೆವು. ಅವರು (ಕೇಂದ್ರ ಸರಕಾರ) ಏನೂ ಮಾಡಲಿಲ್ಲೇನ್ರಿ ಅಂತಾ ಇನ್ನೊಬ್ಬರು, ಮತ್ತೊಬ್ಬರು ಪ್ರಶ್ನೆ ಕೇಳುತ್ತಿದ್ದರು. ಫೆಬ್ರುವರಿ ಹೋರಾಟದ ನಂತರ ಬಜೆಟ್ ಮಂಡಣೆ ಮಾಡಿದ ಕೇಂದ್ರ ಸರಕಾರ ದುಡಿಯುವ ಜನರ ಕೂಗು ಕೇಳಿಸಿಕೊಂಡಿಲ್ಲ ಅಂತ ನಮಗ ಯಾವುದೇ ರೀತಿಯಲ್ಲಿ ಪರಿಹಾರ ಕೊಟ್ಟಿಲ್ಲ. ಅದಕ್ಕೆ ಮತ್ತೆ ಅಖಿಲ ಭಾರತ ಮುಷ್ಕರ ಮಾಡುತ್ತಿದ್ದೇವೆ. ನಾವು ನಿರಂತರ ಹೋರಾಟ ಮಾಡಿದರೆ ಮಾತ್ರ ನಮಗೆ ವೇತನ ಹೆಚ್ಚಳವಾಗಬಹುದೆಂದು ಬಹಿರಂಗ ಸಭೆಗಳಲ್ಲಿ ಕಾರ್ಮಿಕರಿಗೆ ತಿಳಿಸಿ ಹೇಳುತ್ತ ಚುನಾಯಿತ ಸಂಸದರ–ಶಾಸಕರ ಕಾರ್ಮಿಕ ವಿರೋಧಿ ಧೋರಣೆಗಳ ಕುರಿತು ಹೇಳಲಾಯಿತು.

ಮೇ 18–19 ರಂದು ಎರಡು ದಿನ ಭಾರತ ಕಾರ್ಮಿಕ ಸಂಘಟನೆ (ILC)

ಸಂಘಟನೆ ಸಭೆಯಲ್ಲಿ ಸ್ವತಃ ನಮ್ಮ ದೇಶದ ಪ್ರಧಾನ ಮಂತ್ರಿ, ಕಾರ್ಮಿಕ ಮಂತ್ರಿ ರವರು ಅಖಿಲ ಭಾರತ ಹೋರಾಟದ ಕುರಿತು (ಫೆ 20–21) ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅವರ ಬೇಡಿಕೆ ಇಡೀ ದೇಶದ ಅಸಂಘಟಿತ ಕಾರ್ಮಿಕರ ಬೇಡಿಕೆಗಳಾಗಿವೆ. ಅದನ್ನು ನಾವು ಈಡೇರಿಸಲೇಬೇಕು ಆದರೆ ಪರಿಶೀಲನೆ ಮಾಡಬೇಕೆಂದು ಮೂಗಿಗೆ ತುಪ್ಪ ಹಚ್ಚುವ ಕೆಲಸ ಮಾಡಿ ಮತ್ತೆ ಜಾರಿಕೊಂಡಿದ್ದಾರೆ. ಇಂತಹ ಕಾರ್ಮಿಕ ದ್ರೋಹಿ ಸರಕಾರಕ್ಕೆ ಮುಂಬರುವ ಎಂ.ಪಿ. ಚುನಾವಣೆಯಲ್ಲಿ ಪಾಠ ಕಲಿಸಬೇಕೆಂದು ಎಲ್ಲಾ ತಾಲೂಕಿನ ಬಹಿರಂಗ ಸಭೆಗಳಲ್ಲಿ ತಾಲೂಕಾ ಮುಖಂಡರು ಮಾತನಾಡಿದರು.

ರೂ. 1/– ದರದಲ್ಲಿ ಪ್ರತಿ ಕುಟುಂಬಕ್ಕೆ 30 ಕೆ.ಜಿ. ಅಕ್ಕಿ ಕೊಡುವದಾಗಿ ಪ್ರಮಾಣ ವಚನ ಸ್ವೀಕರಿಸಿದ ಕೂಡಲೇ ಬಡಾಯಿ ಕೊಚ್ಚಿಕೊಂಡ ಶ್ರೀ ಸಿದ್ಧರಾಮಯ್ಯನವರು ಇನ್ನೂವರೆಗೆ ಬಡವರ ಚೀಲಕ್ಕೆ 30 ಕೆ.ಜಿ. ಅಕ್ಕಿ ಹಾಕಿಲ್ಲ. ಅದೂ ಕೊಡುತ್ತಾರೋ! ಇಲ್ಲ
ಎಂಬುದು ಪ್ರಶ್ನಾತೀತವಾಗಿದೆ. ಒಂದು ಕ
ಪಡಿತರ ಚೀಟಿ ಇಲ್ಲದ ಬಡವರು ನಮ
ಬಿ.ಪಿ.ಎಲ್. ಪಡಿತರ ಚೀಟಿ ಕೊಡಿ ಎಂ
ದಿನಗಟ್ಟಲೆ ನೆಮ್ಮದಿ ಕೇಂದ್ರದ ಮುಂ
ಊಟ ಇಲ್ಲದೇ ನಿಂತು ನಿರಾಶರಾಗಿ
ಹೊರಟಿದ್ದಾರೆ. ಇನ್ನೊಂದು ಕಡೆ
ಬಿ.ಪಿಎಲ್.ಕಾರ್ಡ ಇದೆ ನಮಗೆ ಇವ
ನಾಳೆ ಸರಕಾರ 30 ಕೆ.ಜಿ. ಅಕ್ಕಿ ಕೊಡುತ್ತಾ
ಎಂದು ಬಕಪಕ್ಷಿಯ ಹಾಗೆ ಹಾದಿ ಕಾಯುತ
ದಿನಕಳೆಯುತ್ತಿದ್ದಾರೆ. ಇಂತಹ ಸಮಯದ
ಎ.ಪಿ.ಎಲ್. ಪಡಿತರದಾರರಿಗೆ ಅಕ್ಕಿ ವಿತರ
ಮಾಡುವುದಿಲ್ಲವೆಂದು ಸರಕಾರ ಬಾಂ
ಸಿಡಿಸಿ ಎ.ಪಿ.ಎಲ್. ಕಾರ್ಡಿನ ಬಡವರಿ
ಕಂಗಾಲು ಮಾಡಿದೆ.

ಸರಕಾರವೇ ಘೋಷಿಸಿದ 30 ಕೆ.ಜಿ
ಅಕ್ಕಿ ಕೂಡಲೇ ವಿತರಣೆ ಮಾಡಲು 1
ರ ಅಖಿಲ ಭಾರತ ಮುಷ್ಕರದಲ್ಲಿ ರಾ
ಸರಕಾರಕ್ಕೆ ಮನವಿ ಅರ್ಪಿಸುವುದ
ಮೂಲಕ ಒತ್ತಾಯಿಸಲಾಯಿತು. ಮುಷ್ಕರದ
ಗ್ರಾಮ ಪಂಚಾಯತ, ಅಂಗನವಾಡಿ, ಅಕ್ಷ
ದಾಸೋಹ ನೌಕರರು, ಬೀಡಿ ಕಾರ್ಮಿಕರು
ಹಮಾಲಿ ಕಾರ್ಮಿಕರು, ಕಟ್ಟಡ ಕಾರ್ಮಿಕರು
ಶುಗರ್ ಫ್ಯಾಕ್ಟರಿ ಕಾರ್ಮಿಕರು ಹೀಗೆ ವಿವಿ
ರಂಗಗಳಲ್ಲಿ ಕೆಲಸ ಮಾಡುವ ಕಾರ್ಮಿಕರ
ಮುಷ್ಕರದಲ್ಲಿ ಪಾಲ್ಗೊಂಡು ನಮ್ಮ ಧ್ವ
ಸರಕಾರಗಳಿಗೆ ಕೇಳಿಸದಿದ್ದರೆ ಮುಂದಿ
ಹೋರಾಟ ತೀವ್ರವಾಗಿ ಮಾಡೋಣವೆಂದ
ಮಾತನಾಡಿಕೊಳ್ಳುತ್ತಿದ್ದರು. ಒಟ್ಟಾರೆ
ಯಾಗಿ ಹೋರಾಟದಿಂದಲೇ ನಮ
ನಮ್ಮ ಬೇಡಿಕೆಗಳು ಈಡೇರುತ್ತವೆ ಎಂ
ಮನೋಭಾವ ಕಾರ್ಮಿಕರಲ್ಲಿ ಮೂಡಿದೆ.

– ವರದಿ : ಗೈಬು ಎಂ
ಜೈನೆಖಾ

ಕೃಷಿಯ ಕಂಪನೀಕರಣದಿಂದ ರೈತರು ದಿವಾಳಿ

ಕೃಷಿಯ ಕಂಪನೀಕರಣದಿಂದ ರೈತರು ದಿವಾಳಿಯಾಗಲಿದ್ದು ರೈತರು ತಮ್ಮ ಭೂಮಿಯನ್ನು ಕ್ರಮೇಣ ಕಳೆದುಕೊಳ್ಳಬೇಕಾದ ಆತಂಕದ ಪರಿಸ್ಥಿತಿ ಉಂಟಾಗಲಿದೆ ಎಂದು ಕೆಪಿಆರ್‌ಎಸ್‌ನ ರಾಜ್ಯ ಮುಖಂಡರಾದ ಹರಿದಾಸ್ ಎಚ್ಚರಿಸಿದರು. ಜೂನ್ 24 ರಂದು ಹಾಸನದ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಹಾಸನ ತಾಲ್ಲೂಕಿನ ಕರ್ನಾಟಕ ಪ್ರಾಂತ ರೈತ ಸಂಘದ ಸಮ್ಮೇಳನವನ್ನು ಉಧ್ಘಾಟಿಸಿ ಮಾತನಾಡಿದ ಅವರು ಭಾರತದಲ್ಲಿ ಕೃಷಿಯನ್ನೇ ನಂಬಿ ಬದುಕುತ್ತಿರುವ ರೈತರು ಆತ್ಮಹತ್ಯೆಯ ದಾರಿಯನ್ನು ಹಿಡಿಯುತ್ತಿದ್ದು ಕಳೆದ ಜನಗಣತಿ ಮತ್ತು ಪ್ರಸ್ತುತ ಜನಗಣತಿಯನ್ನು ಗಮನಿಸಿದರೆ ರಾಜ್ಯದಲ್ಲಿ ಸುಮಾರು 5 ಲಕ್ಷಕ್ಕೂ ಹೆಚ್ಚು ರೈತರು ಕೃಷಿಯನ್ನು ತೊರೆದು ನಗರ ಪ್ರದೇಶಗಳಿಗೆ ವಲಸೆ ಹೋಗಿ ಕೂಲಿಮಾಡುತ್ತಿದ್ದಾರೆ. ರೈತರ ಈ ಸಂಕಷ್ಟಕ್ಕೆ ಮುಖ್ಯ ಕಾರಣ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ಕೃಷಿ ವಿರೋಧಿ ಮತ್ತು ಕಂಪನಿಗಳ ಪರವಾದ ನೀತಿಗಳು. ಕಷ್ಟ ಪಟ್ಟು ದುಡಿದು ಬೆಳೆ ಬೆಳೆಯುವ ರೈತನಿಗೆ ಸರಿಯಾದ ಮಾರುಕಟ್ಟೆಯನ್ನು ಒದಗಿಸಿ ಸೂಕ್ತ ಬೆಂಬಲ ಬೆಲೆಯನ್ನು ನೀಡದಿದ್ದರೆ ರೈತರನ್ನು ಸಂಕಷ್ಟಗಳಿಂದ ಶಾಶ್ವತವಾಗಿ ಹೊರತರಲು ಸಾಧ್ಯವಿಲ್ಲ ಎಂದರು.

ಸಮ್ಮೇಳನದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಿಐಟಿಯುವಿನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಧರ್ಮೇಶ್‌ರವರು ಮಾತನಾಡಿ ದುಡಿಯುವ ರೈತರಿಗೆ ಭೂಮಿ ಮತ್ತು ಕಾರ್ಮಿಕರಿಗೆ ಕೂಲಿ ಇವೆರಡೂ ಜಗತ್ತಿನಲ್ಲಿ ಜನರನ್ನು ಬಾಧಿಸುತ್ತಿರುವ ಅತಿ–ದೊಡ್ಡ ಸಮಸ್ಯೆಗಳಾಗಿದ್ದು ಅವುಗಳ ಪರಿಹಾರಕ್ಕೆ ರೈತ–ಕಾರ್ಮಿಕರ ಸಖ್ಯತೆಯ ಹೋರಾಟದ ಅನಿವಾರ್ಯತೆ ಇದೆ ಎಂದರು.

ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಕೆಪಿಆರ್‌ಎಸ್‌ನ ಜಿಲ್ಲಾ ಸಂಚಾಲಕರಾದ ಎಚ್. ಆರ್.ನವೀನ್‌ಕುಮಾರ್‌ರವರು ರೈತರು ಅಗತ್ಯವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸುತ್ತಿದ್ದು ಅವರು ಬೆಳೆದ ಬೆಳೆಗಳಿಗೆ ನ್ಯಾಯಯುತವಾದ ಬೆಲೆ ಸಿಗುತ್ತಿಲ್ಲ ಇಡೀ



ಮಾರುಕಟ್ಟೆ ದಲ್ಲಾಳಿಗಳ ಕೈವಶವಾಗಿದ್ದು ಇದನ್ನು ನಿಯಂತ್ರಿಸಬೇಕಾದ ಸರ್ಕಾರ ಮೌನವಹಿಸುತ್ತಿದೆ ಎಂದರು. ಜಿಲ್ಲೆಯಲ್ಲಿ ಹಲವು ವರ್ಷಗಳಿಂದ ಸರ್ಕಾರಿ ಭೂಮಿಯಲ್ಲಿ ಬಗರ್ ಹುಕುಂ ಸಾಗುವಳಿಯನ್ನ
ಮಾಡುತ್ತಿರುವ ರೈತರಿಗೆ ಯಾವುದೇ ಹ
ಪತ್ರಗಳನ್ನು ನೀಡದೆ ಭೂಮಿಯನ್ನು ಕಸಿದ
ಖಾಸಗೀ ಕಂಪನಿಗಳಿಗೆ ನೀಡುವ ಹುನ್ನಾ
ನಡೆದಿದ್ದು ಇದರ ವಿರುದ್ಧ ರೈತರು ಹೋ
ನಡೆಸಲು ಸಂಘಟಿತರಾಗುತ್ತಿರುವುದ
ಸಂತೋಷದಾಯಕ ಬೆಳವಣಿಗೆ ಎಂದರು.

ವೇದಿಕೆಯಲ್ಲಿ ಹಿರಿಯ ಕಾರ್ಮಿ
ಮುಖಂಡರಾದ ಅಂತೋಣಿಸ್ವಾಮಿಯವ
ಉಪಸ್ಥಿತರಿದ್ದರು.

ನೂತನ ಸಮಿತಿ ಆಯ್ಕೆ :

ಸಮ್ಮೇಳನದಲ್ಲಿ 26 ಜನರ ನೂತ
ತಾಲ್ಲೂಕು ಸಮಿತಿಯನ್ನು ರಚಿಸಲಾಯಿ
ಅಧ್ಯಕ್ಷರಾಗಿ ನಿಂಗೇಗೌಡ (ಹರುವನಹ
ಕಾರ್ಯದರ್ಶಿಯಾಗಿ ಪ್ರಕಾಶ್ (ಚೌಡೇನಹ
ಉಪಾಧ್ಯಕ್ಷರಾಗಿ ವೆಂಕಟೇಶ್ (ಶಾಂತಿಗ್ರಾಮ
ರಂಗೇಗೌಡ (ತಿರುಪತಿಹಳ್ಳಿ) ಕುಮಾ
(ದ್ಯಾಪಲಾಪುರ) ಪುಟ್ಟರಾಜು (ಮಾದಿಹ
ಸಹಕಾರ್ಯದರ್ಶಿಗಳಾಗಿ ದೇವರಾ
(ಕುದುರುಗುಂಡಿ) ರವಿಕುಮಾರ್ (ಕಾರೆ
ಕೆರೆ) ಸಿದ್ದೇಗೌಡ (ಸಿದ್ದಾಪುರ) ಇವರುಗ
ಆಯ್ಕೆಯಾದರು.

– ಎಚ್.ಆರ್.ಎ

...ಾ ಶಿಕ್ಷಣ ರಂಗದಲ್ಲಿ....

11 ರಿಂದ

...ಸಿತು. ಇನ್ನೂ ಶಿಕ್ಷಣರಂಗದಲ್ಲಂತೂ ...ವಾದ ಹೊರಗುತ್ತಿಗೆಯನ್ನು ಜಾರಿಗೆ ...ತು.

...ಮೂರೇ ತಿಂಗಳಲ್ಲಿ ನೇಮಕಾತಿ ಮತ್ತು ನಿವೃತ್ತಿ !

...ೂರ ಗುತ್ತಿಗೆಯನ್ನು ರಾಜ್ಯದಲ್ಲಿ ...ಾರ ನಡೆಸಿದ ಕಾಂಗ್ರೆಸ್, ಜನತಾದಳ ...ರಗಳು ಕೂಡ ಜಾರಿಗೆತಂದಿವೆ ...ುದೇನೋ ಸತ್ಯ. ಆದರೆ, ಬಿಜೆಪಿ ... ಆ ಸರ್ಕಾರದಲ್ಲಿ ಪ್ರಾಥಮಿಕ ಶಿಕ್ಷಣ ...ರಾಗಿದ್ದ ವಿಶ್ವೇಶ್ವರ ಹೆಗಡೆ ಕಾಗೇ-...ಂತೂ ಒಂದು ಹೆಜ್ಜೆ ಮುಂದೆ ಇಟ್ಟು ಶಿಕ್ಷಣ ...ದಲ್ಲಿ ಮೂರೇ ತಿಂಗಳಲ್ಲಿ ನೇಮಕಾತಿ ... ಕೆಲಸದಿಂದ ನಿವೃತ್ತಿಗೊಳಿಸುವ ... ಪರಂಪರೆಯನ್ನೇ ಆರಂಭಿಸಿದರು. ...ಶಿಕ್ಷಣ ಅಭಿಯಾನದಡಿಯಲ್ಲಿ ...ರ್ ಶಿಕ್ಷಣವನ್ನು ಪ್ರಾಥಮಿಕ ಪ್ರೌಢ ... ಹಂತದಲ್ಲಿ ಗುತ್ತಿಗೆ ಶಿಕ್ಷಕರನ್ನು ಬಳಸಿ ...ುವ ಕೆಲಸ ಹಲವಾರು ವರ್ಷಗಳಿಂದ ...ಯಲ್ಲಿದೆ. ಆದರೆ ಬಿಜೆಪಿ ಸರ್ಕಾರದ ...ಧಿಯಲ್ಲಿ ರಾಷ್ಟ್ರೀಯ ಮಾಧ್ಯಮಿಕ ... ಅಭಿಯಾನ (RMSA) ಅಡಿಯಲ್ಲಿ ...ದಲ್ಲಿ ಆರಂಭಿಸಲಾದ ಆದರ್ಶ ...ಲಯಗಳು ಹಾಗೂ ಉನ್ನತೀಕರಿಸಿದ ...ಶಾಲೆಗಳಲ್ಲಿ ಸುಮಾರು 3000 ...ರು ಹಾಗೂ ಶಿಕ್ಷಕೇತರರು ಕಳೆದ 2011 ...ನಿಂದ ಹೊರಗುತ್ತಿಗೆ ಆಧಾರದಲ್ಲಿ ...ರ್ಯನಿರ್ವಹಿಸುತ್ತಿದ್ದಾರೆ. ಇದರ ...ಹಣೆಯನ್ನು ಖಾಸಗಿ ಸಂಸ್ಥೆಯೊಂದಕ್ಕೆ ...ಲಾಗಿದೆ. ಆದರೆ ಆ ಸಂಸ್ಥೆಯು ಪ್ರತಿ ...ರು ತಿಂಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ...ಬಿಎಡ್‌ನಲ್ಲಿ ಅತ್ಯುತ್ತಮ ಅಂಕಗಳಿಸಿದ ...ರನ್ನು ನಿಯೋಜಿಸಿಕೊಳ್ಳುತ್ತದೆ. ...ಾಹರಣೆಗೆ ಜನವರಿ 1 ರಂದು ನೇಮಕಾತಿ ... ಆಯ್ಕೆಯಾದ ಅಭ್ಯರ್ಥಿಗೆ ನೀಡುವ ...ಯು ಮಾರ್ಚ್ 31 ರಂದು ಅವರನ್ನು ...ಗಡೆಗೊಳಿಸುವ ಆದೇಶವನ್ನು ಅದರಲ್ಲೇ ...ರುತ್ತದೆ.! ನೇಮಕವಾದ ಎಲ್ಲಾ ಶಿಕ್ಷಕರು ...ರಿ ಶಾಲಾ-ಕಾಲೇಜುಗಳಲ್ಲೇ ಅದೂ ...ವಾಗಿ ಪ್ರಿನ್ಸಿಪಾಲ್ ಹಾಗೂ ಹೆಡ್‌ಮಾಸ್ಟರ್ ...ಯಲ್ಲೇ ಕೆಲಸ ಮಾಡುತ್ತಿದ್ದರೂ ಆ ...ೇಗಳಿಗೂ ಕೆಲಸ ಮಾಡುವ ಶಿಕ್ಷಕರಿಗೂ ...ವುದೊಂದು ಸಂಬಂಧ ಏರ್ಪಡದಂತೆ ...ಳೆಗಳನ್ನು ಸೃಷ್ಟಿಸಲಾಗಿದೆ. ಅದೂ ...ದೆ ಹರಾಜು ನಿಯಾವಳಿಗಳಲ್ಲಿ ...ಕಾಶವಿಲ್ಲದಿದ್ದರೂ ಆ ಖಾಸಗಿ ಸಂಸ್ಥೆಯು ...0 ಶಿಕ್ಷಕ ಹಾಗೂ ಶಿಕ್ಷಕೇತರರಿಂದ ...ಮಕಾತಿ ಸಮಯದಲ್ಲಿ ಒಂದು ತಿಂಗಳ ...ಬಳವನ್ನು ತಲಾ 14,000, 12,000, ...00 ರೂಪಾಯಿಗಳನ್ನು ಭದ್ರತಾಠೇವಣಿ ...ದು ಅಕ್ರಮವಾಗಿ ಪಡೆದಿದೆ. ಇದರ ಒಟ್ಟು ... ಸುಮಾರು 3 ಕೋಟಿಗಿಂತ ಅಧಿಕ ...ಲ್ಲದೇ ಅದನ್ನು ಹಿಂತಿರುಗಿಸಲು ಕೇಳಿದ ...ರರಿಗೆ ಕೆಲಸದಿಂದ ಕಿತ್ತು ಹಾಕುವ ಬೆದರಿಕೆ ಹಾಗೂ ಎರಡು ತಿಂಗಳ ಸಂಬಳವನ್ನು ನೀಡದೇ ಸತಾಯಿಸಿ ಕೊನೆಯಲ್ಲಿ ಭದ್ರತಾ ಠೇವಣಿ ಸೇರಿದಂತೆ ಎಲ್ಲಾ ಬಾಕಿ ಹಣವನ್ನು ಪಡೆಯಲಾಗಿದೆ ಎಂಬ **N.O.C** ಪತ್ರವನ್ನು ಶಿಕ್ಷಕರಿಂದ ಒತ್ತಾಯಪೂರ್ವಕವಾಗಿ ಕಂಪನಿಯವರು ಪಡೆದಿದ್ದಾರೆ. ಇದನ್ನು ಪ್ರಶ್ನಿಸಿದವರ ಮೇಲೆ ಪೋಲೀಸ್ ಠಾಣೆಯಲ್ಲಿ ಸುಳ್ಳು ಕೇಸು ದಾಖಲಿಸಿದ್ದಾರೆ. ಇದೆಲ್ಲಾ ಬೆಂಗಳೂರಿನಲ್ಲಿರುವ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ **(RMSA)** ಹಾಗೂ ಶಿಕ್ಷಣ ಇಲಾಖೆಯ ಆಯುಕ್ತರ ಮೂಗಿನಡಿಯಲ್ಲೇ ನಡೆಯುತ್ತಿರುವುದು ವಿಪರ್ಯಾಸ.

ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ತಾನು ಜನ ಮೆಚ್ಚುವ ಆಡಳಿತ ನೀಡುವ ಭರವಸೆ ನೀಡಿದೆ. ಆದರೆ ವಾಸ್ತವದಲ್ಲಿ ಬಿಜೆಪಿ ಸಾಗಿದ ದಾರಿಯಲ್ಲೇ ಅದು ಸಾಗುತ್ತಿರುವುದು ಗೋಚರಿಸುತ್ತಿದೆ. ಅಪಾಯಕಾರಿಯಾದುದೆಂದರೆ, ಅಧಿಕಾರಕ್ಕೆ ಬಂದ ಒಂದೇ ತಿಂಗಳಲ್ಲಿ ಪ್ರಾಥಮಿಕ ಶಾಲೆಗೆ ಅವಶ್ಯಕವಿರುವ 15 ಸಾವಿರ ಶಿಕ್ಷಕರನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡುವ ಮತ್ತೊಂದು ಕೆಲಸಕ್ಕೆ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ ಕೈಹಾಕಿದ್ದಾರೆ. ಅಲ್ಲದೆ ಉನ್ನತ ಶಿಕ್ಷಣದಲ್ಲೂ ಹೊರಗುತ್ತಿಗೆ ಆಧಾರದ ನೇಮಕಾತಿಗಳನ್ನು ಪ್ರಕಟಿಸಲಾಗಿದೆ. ಹಾಗಾದರೆ ಬಿಜೆಪಿ ಆಡಳಿತಕ್ಕಿಂತ ಸಿದ್ದರಾಮಯ್ಯ ಸರ್ಕಾರದ ಆಡಳಿತ ಭಿನ್ನ ಹೇಗೆ?

ಮಕ್ಕಳ ಮನೋವಿಕಾಸವನ್ನು ರೂಪಿಸಬೇಕಾದ ಪ್ರಾಥಮಿಕ ಹಂತ ಹಾಗೂ ಶಿಕ್ಷಣದ ಎಲ್ಲಾ ಹಂತಗಳಲ್ಲೂ ನೀಡಬೇಕಾದ ಗುಣಮಟ್ಟದ ಶಿಕ್ಷಣದ ಬಗ್ಗೆ 1964 ರಲ್ಲೇ ಕೇಂದ್ರ ಸರ್ಕಾರ ನೇಮಿಸಿದ್ದ ಕೊಠಾರಿ ಆಯೋಗವು ಅತ್ಯುತ್ತಮ ತರಬೇತಿ ಹೊಂದಿದ ಮತ್ತು ಕಾಲಕಾಲಕ್ಕೆ ಅವರ ಬೋಧನಾ ಕ್ರಮವನ್ನು ಪುನರ್‌ಮನನ ಮಾಡಿಕೊಂಡಿರುವ ಶಿಕ್ಷಕ ವರ್ಗದಿಂದ ಮಾತ್ರ ಉತ್ತಮ ವಿದ್ಯಾರ್ಥಿಗಳು ತಯಾರಾಗುತ್ತಾರೆ ಮತ್ತು ಅಂತಹವರಿಂದ ಉತ್ತಮವಾದ ದೇಶ ನಿರ್ಮಾಣ ಸಾಧ್ಯವೆಂದು ಪ್ರತಿಪಾದಿಸಿದೆ. ಇದನ್ನೇ 1950 ರಲ್ಲಿ ದೇಶದಲ್ಲಿ ರಚನೆಯಾದ ಭಾರತದ ಸಂವಿಧಾನ ಮತ್ತು 2006 ರ ತಿದ್ದುಪಡಿ(2002 ನೇ 86 ನೇ ಕಾನೂನು ತಿದ್ದುಪಡಿ) ಅನ್ವಯಿಸಿ ಸಂವಿಧಾನದ ಪರಿಚ್ಛೇಧ 21 ಎ ದಲ್ಲಿ 6 ನೇ ವಯಸ್ಸಿನಿಂದ 14 ನೇ ವರ್ಷದವರೆಗೆ ದೇಶದ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ನೀಡಲು ಸರ್ಕಾರಗಳು ಮುಂದಾಗಬೇಕು ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಆದ-ರೆ ಸಂವಿಧಾನವನ್ನು ಎತ್ತಿಹಿಡಿಯುವ ಘೋಷಣೆಯೊಂದಿಗೆ ಅಧಿಕಾರಕ್ಕೆ ಬರುವ ಸರ್ಕಾರಗಳು ಸಂವಿಧಾನದ ಆಶಯಗಳನ್ನು ಗಾಳಿಗೆ ತೂರಿ ಜನತೆಯನ್ನು ಶಿಕ್ಷಣ, ಆರೋಗ್ಯ ಹಾಗೂ ಉದ್ಯೋಗಗಳಿಂದ ವಂಚಿಸುವ ಹುನ್ನಾರಗಳನ್ನು ನಡೆಸುತ್ತಿವೆ. ಇವುಗಳನ್ನು ಜನತೆಯ ಪ್ರಬಲ ಪ್ರತಿರೋಧದಿಂದ ಮಾತ್ರವೇ ಬದಲಿಸಲು ಸಾಧ್ಯ.

ಓದುಗರ ಪತ್ರ

'ಜನಶಕ್ತಿ' ಸಂಪಾದಕರಾದ ಶ್ರೀ ನಿತ್ಯಾನಂದ ಸ್ವಾಮಿಯವರಿಗೆ ಕಡಿದಾಳು ಶಾಮಣ್ಣ ಮಾಡುವ ನಮಸ್ಕಾರಗಳು, ಅದಾಗಿ ತಾವು ಕಳಿಸುತ್ತಿರುವ ನಿಮ್ಮ ಹಾಗೂ ನಮ್ಮ ಪತ್ರಿಕೆ ಪ್ರತಿವಾರವೂ ಸರಿಯಾಗಿ ತಲುಪುತ್ತಿದೆ. ತುಂಬಾ ಸಂತೋಷದಿಂದ ಓದಿ ಬೇರೆಯವರಿಗೂ ಓದಲು ಕೊಡುತ್ತೇನೆ. ಶ್ರೀ ಮಂಟೋ, "ಸಾಹಿತ್ಯ ಸಮುದಾಯ" ಕೃತಿ ಬಿಡುಗಡೆ ಮಾಡುತ್ತಿರುವ ರೀತಿ ನನಗೆ ತುಂಬಾ ಮೆಚ್ಚಿಗೆಯಾಯ್ತು. ಕಳ್ಳರು ಜೈಲಿಗೆ ಹೋಗುವಾಗ ತಮ್ಮ ಹೆಸರಿನ ಪ್ಲೇಟನ್ನು ಹಿಡಿಯುವಂತೆ ಹಿಡಿದು ಬಿಡುಗಡೆಮಾಡುವ ಕ್ರಮ ಸರಿಯಲ್ಲವೆಂದು ಹತ್ತಾರು ಸಾರಿ ನಾನೇ ಮೇಲೆತ್ತಿ ಗೌರವದಿಂದ ತೋರಿಸಿ ಬಿಡುಗಡೆ ಮಾಡಿದಂತೆ ಶ್ರೀ ಸತ್ಯುರವರು ಬಿಡುಗಡೆ ಮಾಡುತ್ತಿರುವ ಬಂಗಿ ನನಗೆ ತುಂಬಾ ಹಿಡಿಸಿತು. ಸಂತೋಷವಾಯ್ತು. ನಮ್ಮ ಜನ ಈ ಕ್ರಮವನ್ನು ತಿಳಿದುಕೊಳ್ಳುವರೆಂದು ನಂಬಿರುವೆನು. ಎಸ್.ಸತ್ಯುರವರ ಪುಸ್ತಕ ಬಿಡುಗಡೆ ಮಾಡುತ್ತಿರುವ ಚಿತ್ರ ತುಂಬಾ ಚೆನ್ನಾಗಿದೆ. ಪುಸ್ತಕವನ್ನು ಕೊಂಡು ಓದುವೆನು ನಮಸ್ಕಾರಗಳೊಡನೆ.

- ಕಡಿದಾಳು ಶಾಮಣ್ಣ ರೈತ

ಚೀನಾದ ಗಗನಯಾತ್ರಿಗಳ.....

ಪುಟ 16 ರಿಂದ

ಕಂಡುಹಿಡಿಯಲು ಈ ವೇಗ ಸಾಲದು. ಸಾಮಾನ್ಯ ಕಂಪ್ಯೂಟರ್‌ಗಿಂತಲೂ ನೂರಾರು ಸಾವಿರಾರು ಪಟ್ಟು ವೇಗ ಹೊಂದಿರುವ ಕಂಪ್ಯೂಟರನ್ನು ಸೂಪರ್ ಕಂಪ್ಯೂಟರ್ ಎನ್ನುತ್ತಾರೆ. ಇದನ್ನು ಇಡಲು ಸರಿಸುಮಾರು ಟೆನ್ನಿಸ್ ಕೋರ್ಟ್‌ನಷ್ಟು ಜಾಗ ಬೇಕು!

ಕಂಪ್ಯೂಟರ್‌ವೊಂದರಲ್ಲಿ ಸೆಂಟ್ರಲ್ ಪ್ರೊಸೇಸಿಂಗ್ ಘಟಕ (ಸಿಪಿಯು) ಇರುತ್ತದೆ. ಪ್ರತಿ ಸಿಪಿಯು ಒಳಗೆ ಎಲೆಕ್ಟ್ರಾನಿಕ್ ಸರ್ಕ್ಯೂಟ್ ಹೊಂದಿರುವ ಅಂಗೈ ಅಗಲದ ಅರೆವಾಹಕ ಗುಣವುಳ್ಳ ಸಣ್ಣ ಪ್ಲೇಟ್ ಇರುತ್ತದೆ. ಇದನ್ನೇ ಚಿಪ್ ಎಂದು ಕರೆಯುವುದು. ಇಂಥಹ ಚಿಪ್‌ಗಳನ್ನು ಉಪಕರಣವೊಂದರ ಮೆದುಳಿನಂತೆ ಎಲ್ಲ ಎಲೆಕ್ಟ್ರಾನಿಕ್ ಉಪಕರಣಗಳಲ್ಲಿ, ಕಂಪ್ಯೂಟರ್, ಮೊಬೈಲ್ ಪೋನ್ ಮತ್ತು ಗೃಹೋಪಯೋಗಿ ಉಪಕರಣಗಳಲ್ಲಿ ಬಳಸಲಾಗುತ್ತದೆ. ಸೂಪರ್ ಕಂಪ್ಯೂಟರ್ ಒಂದರಲ್ಲಿ ಸಾಮಾನ್ಯವಾಗಿ 2000 ಚಿಪ್ ಇರುತ್ತವೆ. ಚೀನಾ ಅಭಿವೃದ್ಧಿಪಡಿಸಿರುವ ಟಿಯನ್ಹೆ-2 ಸೂಪರ್ ಕಂಪ್ಯೂಟರ್‌ನಲ್ಲಿ ಸುಮಾರು 32,000 ಚಿಪ್‌ಗಳಿವೆ.

ಉತ್ತರ ಖಾಂಡ....

ಪುಟ 9 ರಿಂದ

ಶಿಫಾರಸುಗಳ ಜಾರಿಯಾಗಿದ್ದಿದ್ದರೆ ಈ ರಕ್ಷಣಾ ಕೆಲಸ ಸುಲಭವಾಗುತ್ತಿತ್ತು.

ನಮ್ಮ ಸೋದರ ಸೋದರಿಯರ ಸಾವಿಗೆ ಮರುಗುತ್ತಲೇ, ಅವರ ಕುಟುಂಬದವರಿಗೆ ಸಂತಾಪ ಸೂಚಿಸುತ್ತಲೇ, ಬದುಕುಳಿಯುವ ಹೋರಾಟದಲ್ಲಿರುವವರಿಗೆ ಹಾರ್ದಿಕ ಸೌಹಾರ್ದವನ್ನು ವ್ಯಕ್ತಪಡಿಸುತ್ತಲೇ ಮತ್ತು ಎಲ್ಲ ರೀತಿಯ ನೆರವುಗಳನ್ನು ಒದಗಿಸಲು ಮುಂದೆ ಬರುತ್ತಿರುವಾಗಲೇ, ದೇಶ ಅಮೂಲ್ಯ ಜೀವಗಳನ್ನು ಉಳಿಸಲು ಮತ್ತು ಅಪಾಯದಲ್ಲಿ ಸಿಲುಕಿಕೊಂಡಿರುವ ಜನಗಳನ್ನು ಸುರಕ್ಷಿತ ಸ್ಥಳಗಳಿಗೆ ಸಾಗಿಸಲು ತನ್ನೆಲ್ಲ ಸಂಪನ್ಮೂಲಗಳನ್ನು ಕ್ರೋಡೀಕರಿಸಬೇಕಾಗಿದೆ. ಇದಕ್ಕೆ ಧನ ಸಹಾಯ, ಇತರ ಸಾಮಗ್ರಿಗಳ ಸಹಾಯವಲ್ಲದೆ, ಸರಕಾರಗಳು ಮತ್ತು ಸಂಬಂಧಪಟ್ಟ ಇತರ ಅಧಿಕಾರಿಗಳು ನಮ್ಮ ಪರಿಸರ, ಅರಣ್ಯಗಳು ಇನ್ನಷ್ಟು ನಾಶವಾಗುವುದನ್ನು ತಡೆಯಲು ಕಟಿಬದ್ಧರಾಗಬೇಕು, ನಮ್ಮ ನದಿಗಳ ಕನಿಷ್ಠ ಪರಿಸರ ಪ್ರವಾಹಗಳ ಒಂದು ವೈಜ್ಞಾನಿಕ ವ್ಯವಸ್ಥೆಯನ್ನು ರೂಪಿಸಬೇಕು, ಮತ್ತು ಧಾರ್ಮಿಕ ಪ್ರವಾಸಕ್ಕೆ ಒಂದು ಸುರಕ್ಷಣಾ ನಿಯಂತ್ರಣಗಳ ವ್ಯವಸ್ಥೆಯನ್ನು ಕಲ್ಪಿಸಬೇಕು.



ಕಾರ್ಯನಿರ್ವಹಿಸುತ್ತಿರುವ ಜಲ ವಿದ್ಯುತ್ ಯೋಜನೆಗಳು

ಈ ನೈಸರ್ಗಿಕ ವಿಪತ್ತಿಗೆ ತುತ್ತಾದವರ ನೆರವಿಗೆ ಹಣ ಮತ್ತು ಸಾಮಗ್ರಿಗಳ ಸಂಗ್ರಹಕ್ಕೆ ಸಿಪಿಐ(ಎಂ) ನೀಡಿರುವ ಕರೆಗೆ ಸ್ಪಂದಿಸಬೇಕು ಎಂದು ನಮ್ಮೆಲ್ಲ ಓದುಗರನ್ನು ನಾವು ವಿನಂತಿಸಿಕೊಳ್ಳುತ್ತೇವೆ.

JANASHAKTHI KANNADA VARA PATRIKE JUL 07, 2013 Price : Rs. 10/-
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO
RNI No. KARKAN /2006/17926 Posted on ever
Licensed to Post without prepayment License No. \

ಭೂಮಿಯಿಂದ 340 ಕಿ.ಮೀ ಎತ್ತರದಲ್ಲಿರುವ ಬಾಹ್ಯಾಕಾಶ ಕೇಂದ್ರದಿಂದ ಶಾಲಾ ಮಕ್ಕಳಿಗೆ

ಚೀನಾದ ಗಗನಯಾತ್ರಿಗಳ ಉಪನ್ಯಾಸ



ಮೊನ್ನೆ ಮೊನ್ನೆ ಭೂಮಿಯಿಂದ ಸುಮಾರು 340 ಕಿ.ಮೀ ಎತ್ತರದಲ್ಲಿ ಭೂಮಿ ಸುತ್ತಲೂ ಸುತ್ತುತ್ತಿರುವ 'ಟಿಯಾಂಗಾಂಗ್ -1' ಎಂಬ ಹೆಸರಿನ ಬಾಹ್ಯಾಕಾಶ ಕೇಂದ್ರದಿಂದ ಗಗನಯಾತ್ರಿಗಳು ಶಾಲಾ ಮಕ್ಕಳಿಗೆ ಉಪನ್ಯಾಸ ನೀಡಿದ್ದಾರೆ. ಸುಮಾರು 330 ಶಾಲೆಗಳಿಂದ ಪ್ರಾಥಮಿಕ ಮತ್ತು ಪ್ರೌಢಶಾಲಾ ಮಕ್ಕಳು ಬೀಜಿಂಗ್ ನಗರದ ಶಾಲೆಯೊಂದರಲ್ಲಿ ಸೇರಿದ್ದರು. ಅವರು ಗಗನಯಾತ್ರಿಗಳಿಗೆ ಪ್ರಶ್ನೆಗಳನ್ನು ವೀಡಿಯೋ ಕಾನ್ಫರೆನ್ಸ್ ಮೂಲಕ ಲೈವ್-ಇನ್ ಕಾರ್ಯಕ್ರಮದಲ್ಲಿ ಕೇಳುತ್ತಿದ್ದರೆ, ಅವುಗಳಿಗೆ ಗಗನಯಾತ್ರಿಗಳು ಉತ್ತರಿಸುತ್ತಿದ್ದಂತೆ ಶಾಲಾ ಮಕ್ಕಳು ರೋಮಾಂಚನಗೊಂಡರು. ಹೀಗೆ ಸುಮಾರು 6 ಕೋಟಿ ಶಾಲಾ ಮಕ್ಕಳು ಈ ಉಪನ್ಯಾಸ ಕೇಳಿದ್ದಾರೆ. ಈ ಕಾರ್ಯಕ್ರಮವನ್ನು ಚೀನಾದ ಶಾಲಾ ಮಕ್ಕಳಷ್ಟೇ ಅಲ್ಲ ಇಡೀ ದೇಶದ ಜನತೆ ದೂರದರ್ಶನ ಮೂಲಕ ಲೈವ್-ಇನ್ ಕಾರ್ಯಕ್ರಮ ವೀಕ್ಷಿಸಿ ಆನಂದಪಟ್ಟರು. ಈ ಉಪನ್ಯಾಸ ಸುಮಾರು 51 ನಿಮಿಷದ ಅವಧಿಯಾಗಿತ್ತು. ಯುವಜನತೆಯ ನಡುವೆ ಚೀನಾದ ಬಾಹ್ಯಾಕಾಶ ಯಾನದ ಕುರಿತು ಆಸಕ್ತಿ ಉಂಟು ಮಾಡಲು ಈ ಉಪನ್ಯಾಸವನ್ನು ಆಯೋಜಿಸಲಾಗಿತ್ತು. ಈ ಉಪನ್ಯಾಸದಲ್ಲಿ ತೂಕ-ರಹಿತ ಮತ್ತು ನೀರಿನ ಮೇಲ್ಮೈ ಸೆಳೆತ ಕುರಿತ ತತ್ವಗಳನ್ನು, ಹಾಗೂ ಬಾಹ್ಯಾಕಾಶ ಕೇಂದ್ರದಲ್ಲಿ ಹೇಗೆ ಜೀವಿಸಬೇಕು, ಹೇಗೆ ಕೆಲಸ ಮಾಡಬೇಕು ಹಾಗೂ ದೇಹದ ಆರೋಗ್ಯ ಕಾಪಾಡಿಕೊಳ್ಳಬೇಕು, ಇತ್ಯಾದಿ ಭೌತಶಾಸ್ತ್ರ ತತ್ವಗಳ ಕುರಿತಂತೆ ತಿಳಿಸಲಾಯಿತು.


ಟೈಕೊನಾಟ್‌ಗಳ ಪರಾಕ್ರಮ:

ಗಗನಯಾತ್ರಿಗಳನ್ನು ಇಂಗ್ಲೀಷ್‌ನಲ್ಲಿ 'ಆಸ್ಟ್ರೋನಾಟ್' ಎಂದು ಕರೆದರೆ, ರಷ್ಯನ್ನರು 'ಕಾಸ್ಮೋನಾಟ್' ಎಂದು ಕರೆಯುತ್ತಾರೆ, ಚೀನೀ ಭಾಷೆಯಲ್ಲಿ 'ಟೈಕೊನಾಟ್' ಎಂದು ಕರೆಯುತ್ತಾರೆ. ಇದುವರೆಗೂ ಆಸ್ಟ್ರೋನಾಟ್ ಮತ್ತು ಕಾಸ್ಮೋನಾಟ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಬಾಹ್ಯಾಕಾಶಕ್ಕೆ ತೆರಳಿ ಬಾಹ್ಯಾಕಾಶ ಪ್ರಯೋಗಗಳಲ್ಲಿ ಪಾಲ್ಗೊಳ್ಳುತ್ತಿದ್ದು, ಇದೀಗ ಚೀನಾದ ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿರುವ ಬಾಹ್ಯಾಕಾಶ ತಂತ್ರಜ್ಞಾನದಿಂದಾಗಿ ಟೈಕೊನಾಟ್‌ಗಳ ಪರಾಕ್ರಮ ಹೆಚ್ಚುತ್ತಿದೆ!

ಇದರಲ್ಲಿ ಪಾಲ್ಗೊಂಡಿರುವ 3 ಗಗನಯಾತ್ರಿಗಳನ್ನು ಷೆಂಗ್ಝು-10 ಎಂಬ ಹೆಸರಿನ ಗಗನನೌಕೆಯಲ್ಲಿ ಜೂನ್ 13ರಂದು ಬಾಹ್ಯಾಕಾಶಕ್ಕೆ ಕೊಂಡೊಯ್ಯಲಾಗಿತ್ತು. 3 ಗಗನಯಾತ್ರಿಗಳ

ಜಯ





ಪೈಕಿ ಒಬ್ಬರು ಮಹಿಳೆ. ಇವರು ಬಾಹ್ಯಾಕಾಶ ಕೇಂದ್ರದಲ್ಲಿ ಸುಮಾರು 15 ದಿನಗಳ ಕಾಲ ಇರುತ್ತಾರೆ. ಗಗನ ಯಾತ್ರಿಗಳನ್ನು ಬಾಹ್ಯಾಕಾಶಕ್ಕೆ ಚೀನಾ ಕೊಂಡೊಯ್ದಿರುವುದು ಇದು ಐದನೇ ಬಾರಿ. 2003ರಲ್ಲಿ ಮೊದಲ ಬಾರಿಗೆ ಗಗನಯಾತ್ರಿಗಳನ್ನು ಬಾಹ್ಯಾಕಾಶಕ್ಕೆ ಕಳುಹಿಸಲಾಗಿತ್ತು.


2020 ರ ಹೊತ್ತಿಗೆ ಚೀನಾದ ಶಾಶ್ವತ ಬಾಹ್ಯಾಕಾಶ ಕೇಂದ್ರ:

ಚಂದ್ರನ ಮೇಲೆ ಓಡಾಡುವ ಮೊದಲ ಚಂದ್ರನೌಕೆ 'ಚಾಂಗ್ -3'ನ್ನು (ಚಾಂಗ್ ಎಂದರೆ ಚೀನಾದ ಪೌರಾಣಿಕ ಚಂದ್ರ ದೇವತೆಯ ಹೆಸರು) ಕಳುಹಿಸಲು ಚೀನಾ ಸಿದ್ಧತೆ ನಡೆಸುತ್ತಿದ್ದು, ಅದನ್ನು ಈ ವರ್ಷದ ಕೊನೆಗೆ ಬಾಹ್ಯಾಕಾಶಕ್ಕೆ ಬಿಡಲಾಗುತ್ತದೆ. 'ಟಿಯಾಂಗಾಂಗ್-1' ಎಂಬ ಹೆಸರಿನ ಬಾಹ್ಯಾಕಾಶ ಕೇಂದ್ರವನ್ನು 2011 ರಲ್ಲಿ ಸ್ಥಾಪಿಸಲಾಗಿತ್ತು. ಮತ್ತೊಂದು ದೊಡ್ಡದಾದ ಮತ್ತು ಶಾಶ್ವತ ಬಾಹ್ಯಾಕಾಶ ಕೇಂದ್ರವನ್ನು 2020ರ ಹೊತ್ತಿಗೆ ಚೀನಾ ಸ್ವತಂತ್ರವಾಗಿ ಸ್ಥಾಪಿಸಲಿದ್ದು, ಅಲ್ಲಿಯವರೆಗೆ 'ಟಿಯಾಂಗಾಂಗ್ -1' ಬಳಕೆಯಲ್ಲಿರುತ್ತದೆ.

ಸೂಪರ್. ಕಂಪ್ಯೂಟರ್ ಅಭಿವೃದ್ಧಿಯಲ್ಲಿ ಅಮೇರಿಕಾವನ್ನು ಹಿಂದಿಕ್ಕಿದ ಚೀನಾ

ವಿಶ್ವದ ಅತ್ಯಂತ ಶಕ್ತಿಶಾಲಿ ಸೂಪರ್ ಕಂಪ್ಯೂಟರ್ ಅಭಿವೃದ್ಧಿಯಲ್ಲಿ ಚೀನಾ ಅಮೇರಿಕಾವನ್ನು ಹಿಂದಿಕ್ಕಿದೆ. ಚೀನಾದ ರಾಷ್ಟ್ರೀಯ ರಕ್ಷಣಾ ವಿಶ್ವವಿದ್ಯಾನಿಲಯವು ಅಭಿವೃದ್ಧಿಪಡಿಸಿರುವ 'ಟಿಯನ್ಹೆ-2' ಎಂಬ ಹೆಸರಿನ ಸೂಪರ್ ಕಂಪ್ಯೂಟರ್ ಒಂದು ಸೆಕೆಂಡಿಗೆ 33.86 ಸಾವಿರ ಟ್ರಿಲಿಯನ್ ಆಪರೇಷನ್‌ಗಳನ್ನು (1 ಟ್ರಿಲಿಯನ್ ಅಂದರೆ ಲಕ್ಷ ಕೋಟಿಗೆ ಸಮ) ಮಾಡಿದ್ದು, ಇದಕ್ಕೆ ಸಮೀಪ ಸ್ಪರ್ಧಿಯಾದ ಅಮೇರಿಕಾದ ಸೂಪರ್ ಕಂಪ್ಯೂಟರ್ ಒಂದು ಸೆಕೆಂಡಿಗೆ 17.59 ಸಾವಿರ ಟ್ರಿಲಿಯನ್ ಆಪರೇಷನ್ ಮಾಡಿದೆ ಎಂದು 500 ಟಾಪ್ ಸೂಪರ್ ಕಂಪ್ಯೂಟರ್‌ಗಳ ಪಟ್ಟಿ ಮಾಡಿರುವ ಅಮೇರಿಕಾ ಮತ್ತು ಜರ್ಮನಿಯ ಸೂಪರ್ ಕಂಪ್ಯೂಟರ್ ಸಂಶೋಧಕರ ತಂಡ ತಿಳಿಸಿದೆ.

'ಟಿಯನ್ಹೆ-2' ಸೂಪರ್ ಕಂಪ್ಯೂಟರ್‌ಗಿಂತ ಮುಂಚೆ ಅಂದರೆ 2010 ರಲ್ಲಿ ಚೀನಾದ 'ಟಿಯನ್ಹೆ-1' ಎಂಬ ಹೆಸರಿನ



ಸೂಪರ್ ಕಂಪ್ಯೂಟರ್ ಜಪಾನಿನ
ಕಂಪ್ಯೂಟರ್‌ನ್ನು ವೇಗದ ಲೆಕ್ಕ
ಹಿಂದಿಕ್ಕಿತ್ತು. ಆದರೆ ವಿಶ್ವದ
ರೆ 500 ಸೂಪರ್ ಕಂಪ್ಯೂಟರ್
252 ಅಮೇರಿಕಾ ಅಭಿವೃದ್ಧಿಪ
ಚೀನಾ 66, ಜಪಾನ್ 30, ಬ್ರಿಟ
ಫ್ರಾನ್ಸ್ 23 ಮತ್ತು ಜರ್ಮನಿ
ಅಭಿವೃದ್ಧಿಪಡಿಸಿವೆ.

ಈ ಸೂಪರ್ ಕಂಪ
ಅಭಿವೃದ್ಧಿಪಡಿಸಲು ಅತ್ಯುನ್ನತ
ಚಿಪ್‌ಗಳನ್ನು ಹೊರತುಪಡಿಸಿದರೆ
ಇತರೆಲ್ಲ ಭಾಗಗಳನ್ನು ಚೀನಾ ಸ್ವತ
ಅಭಿವೃದ್ಧಿಪಡಿಸಿದ್ದು, ಅ
ಚಿಪ್‌ಗಳನ್ನು ಸಹ ಸಂಶೋ
ಹಾದಿಯಲ್ಲಿದೆ. ಇದರಿಂದ ಧೃತಿ
ಅಮೇರಿಕಾ ರೂ. 18,000 ಕೋಟಿ
ಇದಕ್ಕಿಂತ 30 ಪಟ್ಟು ಶಕ್ತಿಶಾ
ಸೂಪರ್ ಕಂಪ್ಯೂಟರ್ ಅಭಿವೃದ್ಧಿ
ಯೋಜನೆ ರೂಪಿಸಿದೆ ಎನ್ನಲಾಗು

ಸೂಪರ್ ಕಂಪ್ಯೂಟರ್ ಎಂದರೇನು

ಅತ್ಯಂತ ವೇಗಾತಿವೇಗದಲ್ಲಿ ಸ
ಲೆಕ್ಕಾಚಾರ ಮಾಡುವ ಸಾಮ
ಶಕ್ತಿಶಾಲಿ ಕಂಪ್ಯೂಟರ್‌ನ್ನು
ಕಂಪ್ಯೂಟರ್ ಎನ್ನುತ್ತಾರೆ. ಇ
ಪರಮಾಣು ಸಂಶೋಧನೆ, ಭ
ವಾತಾವರಣ ಅಭ್ಯಸಿಸುವ ಪ್ರಯೋ
ಬಾಹ್ಯಾಕಾಶ ಪ್ರಯೋಗ, ಜೈವಿಕ ಸಂಶ
ಇತ್ಯಾದಿಂ
ಸಂಶೋದ
ಚಟುವಟಿಕೆ
ಕೋಟಿಗ
ದತ್ತಾಂಶಗಳನ್ನು
ಲೆಕ್ಕ ಹಾಕಲು ಬಳ
ನಾವು ಸಾಮಾ
(ಶಾಲಾ ಕ
ಶಿಕ್ಷಣ)
ಕಂಪ್ಯೂಟರ್
ಸೆಕೆಂಡಿಗೆ 15800
ಲೆಕ್ಕ ಹಾಕುವ ಸ
ಹೊಂದಿದೆ. ಆದರೆ
ತಿಳಿಸಿದ ಸಂಕೀರ್ಣ ಲೆಕ್ಕಗಳಿಗೆ

ಮು

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout,
BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-
560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12,
18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross,
Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout,
BANGALORE-560086 Editor : NITHYANANDASWAMI